ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಮಿತ್ರ 43 ಅತ್ಯುತ್ತಮ ಪತ್ರಿಕೋದ್ಯಮ

ಆಗಸ್ಟ್ 12 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 118 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರಲ್ಲಿ ಯುವಜನ ಮಹೋತ್ಸವಕ್ಕೆ ಸಿಎಂ ಚಾಲನೆ

● ಸಂಭ್ರಮದಲ್ಲಿ ಮಿಂದೆದ್ದ ವಿದ್ಯಾರ್ಥಿಗಳು ● ಮೈಸೂರು ವಿವಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನೂ ಉದ್ಘಾಟಿಸಿದ ಮುಖ್ಯಮಂತ್ರಿ





ಮೈಸೂರು, ಆ.11(ಆರ್‌ಕೆ)–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಗುರುವಾರ ನಡೆದ ಯುವಜನ ಮಹೋತ್ಸವದಲ್ಲಿ ಹಿಂದೆಂದೂ ಕಂಡರಿಯದಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಸಂಭ್ರಮದಲ್ಲಿ ಮಿಂದೆದ್ದರು. ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯವು ಏರ್ಪಡಿಸಿದ್ದ ಯುವಜನ ಮಹೋತ್ಸವ ಸಮಾರಂಭದಲ್ಲಿ ವಿವಿ ವ್ಯಾಪ್ತಿಯ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಗಳ ಸುಮಾರು 25 ರಿಂದ 30 ಸಾವಿರ ಪದವಿ ಕಾಲೇಜು ▶ 8ನೇ ಪುಟಕ್ಕೆ

ಸಕಾರಾತ್ಮಕ ಶಕ್ತಿಗಳಿಂದ ಮುನ್ನುಗ್ಗಿದರೆ ಗುರಿ ತಲುಪಬಹುದು

ರಾಕಿಂಗ್ ಸ್ಟಾರ್ ಸೀಕ್ರೇಟ್

ಮೈಸೂರು, ಆ.11(ಆರ್‌ಕೆ)–ಸಕಾರಾತ್ಮಕ ಶಕ್ತಿ (Positive Energy) ಗಳಿಂದ ಮುನ್ನುಗ್ಗಿದರೆ ಗುರಿ ತಲುಪಲು ಸಾಧ್ಯ ಎಂದು ರಾಕಿಂಗ್ ಸ್ಟಾರ್ ಯಶ್ ಇಂದಿಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಸಲಹೆ ನೀಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಯುವಜನ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಜೀವನದಲ್ಲಿ ತುಂಬಾ ಗಂಭೀರ ವಾಗಿರಬೇಡಿ, ನಗು, ತಮಾಷೆಗಳಿರಲಿ, ಯಾರು ಏನ ನ್ನಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ನಿದರ್ಶನ ಎಂದರು. ನಮ್ಮೂರು, ನಮ್ಮೂರಿನ ಜನ, ನಮ್ಮ ವಿದ್ಯಾರ್ಥಿಗಳು ಯಾವಾಗ ಎಲ್ಲಿ ಸಿಕ್ಕರೂ ಮಾತನಾಡಬೇಕೆಂಬ ▶ 8ನೇ ಪುಟಕ್ಕೆ

ರಮಾಬಾಯಿನಗರದವರ ನೀರಿನ ದರ ಕಡಿತಕ್ಕೆ ಸ್ಥಳೀಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ

● ಶಾಸಕ ಜಿ.ಟಿ.ದೇವೇಗೌಡರ ಮನವಿಗೆ ಸ್ಥಳದಲ್ಲೇ ನಿರ್ಧಾರ ● ಶ್ರೀರಾಂಪುರ ಪಪಂ ವ್ಯಾಪ್ತಿಯ ಪ್ರದೇಶಗಳಿಗೆ ಕಬಿನಿ ನೀರು ಕಲ್ಪಿಸಲು ಇದೇ ವೇಳೆ ಸಲಹೆ



ಮೈಸೂರು, ಆ.11– ಇಂದು ಮೈಸೂರಿಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳ ನಿವಾರಣೆ ಬಗ್ಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಚರ್ಚಿಸಿದರು. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಸಂಬಂಧಿಸಿದ ಸ್ಥಳಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಇತ್ತೀಚೆಗಷ್ಟೇ ಮೇಲ್ದರ್ಜೆಗೇರಿಸಲ್ಪಟ್ಟ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ರಮಾಬಾಯಿನಗರ ▶ 8ನೇ ಪುಟಕ್ಕೆ

ಎಸಿಬಿ ರದ್ದು

ಲೋಕಾಯುಕ್ತಕ್ಕೆ ಮತ್ತೆ ಪೊಲೀಸ್ ಠಾಣೆ ಸ್ಥಾನಮಾನ; ಹೈಕೋರ್ಟ್ ಮಹತ್ವದ ಆದೇಶ



ಬೆಂಗಳೂರು, ಆ.11–ಮಹತ್ವದ ಬೆಳವಣಿಗೆಯಲ್ಲಿ ಈ ಹಿಂದಿನ ಸಿದ್ದರಾಮಯ್ಯರ ಸರ್ಕಾರ 2016ರಲ್ಲಿ ರಚನೆ ಮಾಡಿದ್ದ ಭ್ರಷ್ಟಾಚಾರ ನಿಗ್ರಹ ದಳವನ್ನು ಕರ್ನಾಟಕ ಹೈಕೋರ್ಟ್ ಗುರುವಾರ ರದ್ದುಗೊಳಿಸಿದ್ದು, ಎಸಿಬಿಗೆ ನೀಡಲಾಗಿದ್ದ ಪೊಲೀಸ್ ಠಾಣೆ ಸ್ಥಾನಮಾನವನ್ನು ಮರಳಿ ಲೋಕಾಯುಕ್ತ ಸಂಸ್ಥೆಗೆ ನೀಡಿದೆ.

ಎಸಿಬಿ ರಚನೆ ಪ್ರಶ್ನಿಸಿ ಬೆಂಗಳೂರಿನ ವಕೀಲ ಚಿದಾನಂದ ಅರಸ್, ವಕೀಲರ ಸಂಘ ಮತ್ತು ಸಮಾಜ ಪರಿವರ್ತನಾ ಸಮುದಾಯ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ನ್ಯಾಯಮೂರ್ತಿ ಕೆ ಎಸ್ ಹೇಮಲೇಖಾ ಅವರಿದ್ದ ವಿಭಾಗೀಯ ಪೀಠವು ವಿಚಾರಣೆಗೆ ಅಂಗೀಕರಿಸಿತ್ತು. 2016ರ ಮಾರ್ಚ್‌ನಲ್ಲಿ ರಾಜ್ಯ ಸರ್ಕಾರವು ಎಸಿಬಿ ರಚನೆ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತದಿಂದ ಹಿಂಪಡೆದು ಹೊರಡಿಸಿದ ಅಧಿಸೂಚನೆಗಳನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಲೋಕಾಯುಕ್ತ ಪೊಲೀಸ್ ಠಾಣೆ ಸ್ಥಾನಮಾನ ರದ್ದು ವಿಚಾರಕ್ಕೆ ಸಂಬಂಧಿಸಿ, ಎಸಿಬಿ ರಚನೆ ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಂಬಂಧ ಇಂದು ತೀರ್ಪು ಪ್ರಕಟಗೊಂಡಿದ್ದು, ಹೈಕೋರ್ಟ್ ಎಸಿಬಿ ರಚನೆ ಆದೇಶ ರದ್ದುಪಡಿಸಿದೆ. ಎಸಿಬಿಗೆ ಪೊಲೀಸ್ ಠಾಣೆ ಸ್ಥಾನಮಾನವನ್ನು ರದ್ದುಪಡಿಸಿದೆ.

ಲೋಕಾಯುಕ್ತ ಬಲವರ್ಧನೆಗೆ ಕ್ರಮ ಕೈಗೊಳ್ಳಿ: ಇದೇ ವೇಳೆ ಎಸಿಬಿ ತನ್ನ ವ್ಯಾಪ್ತಿಯಲ್ಲಿರುವ ಪ್ರಕರಣಗಳು ಮತ್ತು ಅಧಿಕಾರಿಗಳನ್ನು ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾಯಿಸಲು ಹೈಕೋರ್ಟ್ ನಿರ್ದೇಶನ ನೀಡಿದ್ದು, ಅವರು ಆ ಪ್ರಕರಣಗಳನ್ನು ಮುಂದೆ ಕೈಗೆತ್ತಿಕೊಳ್ಳಬೇಕು ಮತ್ತು ಭ್ರಷ್ಟಾಚಾರ ನಿರ್ಮೂಲನೆಗೆ ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಲು ಆ ಅಧಿಕಾರಿಗಳ ಸೇವೆಯನ್ನು ಬಳಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ. ಅಂತೆಯೇ ಸಾರ್ವಜನಿಕರ ಹಿತದೃಷ್ಟಿಯಿಂದ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಮತ್ತು ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರಾಗಿ ಸಮರ್ಥ ವ್ಯಕ್ತಿಯನ್ನು ನೇಮಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ▶ 8ನೇ ಪುಟಕ್ಕೆ

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ

ಪ್ರಮುಖ ಆರೋಪಿಗಳ ಬಂಧನ



ಮಂಗಳೂರು, ಆ.11– ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮತ್ತೆ ಮೂವರು ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ.

ಗುರುವಾರ ಬೆಳಗ್ಗೆ 8 ಗಂಟೆಗೆ ತಲಪಾಡಿ ಚೆಕ್ ಪೋಸ್ಟ್ ಬಳಿ ಸುಳ್ಯದ ಶಿಯಾಬುದ್ದೀನ್ ಅಲಿ, ಸುಬ್ರಹ್ಮಣ್ಯದ ರಿಯಾಝ್ ಮತ್ತು ಸುಳ್ಯದ ಬಶೀರ್ ಎಂಬ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಎಡಿಜಿಪಿ ಅಲೋಕ್‌ಕುಮಾರ್ ತಿಳಿಸಿದ್ದಾರೆ.

ಹತ್ಯೆಯ ಹಿಂದಿನ ಉದ್ದೇಶ ಇನ್ನೂ ಪತ್ತೆಯಾಗಿಲ್ಲ ಮತ್ತು ಅವರು ಎಸ್‌ಡಿಪಿಐ ಮತ್ತು ಪಿಎಫ್‌ಐ ಜೊತೆ ಸಂಪರ್ಕ ಹೊಂದಿದ್ದಾರೆಂಬ ಶಂಕೆ ಇದೆ. ಆದಾಗ್ಯೂ ನಾವು ಪುರಾವೆಗಳನ್ನು ಸಂಗ್ರಹಿಸಿದ ನಂತರ ಈ ಲಿಂಕ್ ಕುರಿತು ಪರಿಶೀಲನೆ ನಡೆಸುತ್ತೇವೆ. ಅಪರಾಧದ ನಂತರ ಅವರು ತಕ್ಷಣವೇ ಕೇರಳಕ್ಕೆ ಪರಾರಿಯಾಗಿದ್ದಾರೆ ಮತ್ತು ಆಗಾಗ ಸ್ಥಳವನ್ನು ಬದಲಾಯಿಸುತ್ತಿದ್ದರು.

ಮೈಸೂರಲ್ಲಿ ‘ಡೆಂಗ್ಯೂ’ ರುದ್ರ ನರ್ತನ

● ಶೀತ, ನೆಗಡಿ, ಕೆಮ್ಮು, ಜ್ವರ, ಮೈ–ಕೈ ನೋವಿನಿಂದ ನರಳುವವರ ಸಂಖ್ಯೆ ದಿನೆ ದಿನೇ ಹೆಚ್ಚಳ ● ಮೈಸೂರಿನ ಯಾವ ಆಸ್ಪತ್ರೆಗೆ ಹೋದರೂ ಇದೇ ಲಕ್ಷಣವುಳ್ಳವರ ಸರದಿ ಸಾಲು ● ನಿರಂತರ ಮಳೆ, ಶೀತಗಾಳಿ, ಇಣುಕುವ ಬಿಸಿಲು, ಮೋಡ ಕವಿದ ವಾತಾವರಣ ಡೆಂಗ್ಯೂ ಸೊಳ್ಳೆಗೆ ‘ಹಿತಕಾರಿ’



ಮೋಹನ್ ಕಾಯಕ

ಮೈಸೂರು, ಆ.11–ಸದ್ದಿಲ್ಲದೆ ಹೆಚ್ಚಾಗುತ್ತಿರುವ ಕೊರೊನಾ ಸೋಂಕಿನ ಜೊತೆಗೆ ಮನೆ ಮನೆಯಲ್ಲೂ ಶೀತ, ನೆಗಡಿ, ಕೆಮ್ಮು, ಜ್ವರ, ಮೈ–ಕೈ ನೋವು, ತಲೆ ನೋವಿ ನಿಂದ ಬಳಲುವವರ ಸಂಖ್ಯೆ ಹೆಚ್ಚಾಗಿದೆ. ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ ಮಕ್ಕಳು, ವಯಸ್ಕರು ಸೇರಿದಂತೆ ಎಲ್ಲರಿಗೂ ಸಾಂಕ್ರಾಮಿಕ ರೋಗ ವ್ಯಾಪಿಸಿದ್ದು, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ನೂಕು–ನುಗ್ಗಲು ಉಂಟಾಗಿದೆ. ನಿರಂತರ ಮಳೆ, ಶೀತಗಾಳಿ, ಕೆಲವೊಮ್ಮೆ ಬಿಸಿಲು, ಮೋಡ ಕವಿದ ವಾತಾವರಣದಿಂದಾಗಿ ಕಾಯಿಲೆಗಳಿಗೆ ತುತ್ತಾಗುವಂತಾಗಿದೆ.

ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಶೀತ, ಕೆಮ್ಮು, ಜ್ವರ ಸಾಮಾನ್ಯವಾದರೂ ಬಳಲುವವರ ಪ್ರಮಾಣ ಹೆಚ್ಚಾಗಿದೆ. ಡೆಂಗ್ಯೂ ಜ್ವರ ಹೆಚ್ಚಾಗಿ ಕಂಡು ಬರುತ್ತಿರುವುದರ ಜೊತೆಗೆ ಕೊರೊನಾ ಸೋಂಕಿತರ ಸಂಖ್ಯೆಯೂ ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಮೈಸೂರು ನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಂದ ಪ್ರತಿನಿತ್ಯ 300–400 ಮಂದಿ ಜ್ವರ, ಶೀತ, ನೆಗಡಿ, ಗಂಟಲು ನೋವು ಎಂದೇ ಭೇಟಿ ನೀಡುತ್ತಿದ್ದಾರೆ. ಕೆ.ಆರ್.ಆಸ್ಪತ್ರೆ ಸೇರಿದಂತೆ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ನೂಕು–ನುಗ್ಗಲು ಉಂಟಾಗಿದ್ದು, ಚಿಕಿತ್ಸೆಗಾಗಿ ಪರದಾಡುವಂತಾಗಿದೆ. ಕೆಲವರು ಮೆಡಿಕಲ್‌ಗಳ ಮುಂದೆ ಸರತಿ ಸಾಲಿನಲ್ಲಿ ನಿಂತು ತಮಗೆ ತಿಳಿದಿರುವ ಔಷಧಿ–ಮಾತ್ರೆಗಳನ್ನು ಪಡೆದುಕೊಂಡು ಸೇವಿಸುವುದು ಸಾಮಾನ್ಯವಾಗಿದೆ. ಕಳೆದ ಜುಲೈ ತಿಂಗಳಿನಲ್ಲಿ ಕೆ.ಆರ್.ಆಸ್ಪತ್ರೆಗೆ 3620 ಮಂದಿ ▶ 8ನೇ ಪುಟಕ್ಕೆ

“ ಮೈಸೂರು ಭಾಗದಲ್ಲಿ ಮಳೆ ಬೀಳುವ ಪ್ರಮಾಣ ಕಡಿಮೆಯಾಗಿದ್ದು, ಮೋಡ ಕವಿದ ವಾತಾವರಣದ ಜೊತೆಗೆ ಶೀತಗಾಳಿಯೂ ಹೆಚ್ಚಾಗಿದೆ. ಮುಂದಿನ 5 ದಿನಗಳ ಹವಾಮಾನದ ಸ್ಥಿತಿ–ಗತಿ ಕುರಿತು ಆ.12ರಂದು ಮಾಹಿತಿ ದೊರೆಯಲಿದೆ.
– ಪಿ.ಪ್ರಕಾಶ್, ಹಿರಿಯ ಅಧೀಕ್ಷಕರು, ನಾಗನಹಳ್ಳಿ ಸಾವಯುವ ಕೃಷಿ ಸಂಶೋಧನಾ ಕೇಂದ್ರ

ನಾಳೆ ಪ್ರಧಾನಿ ಮೋದಿಯವರ ಬೃಹತ್ ಭಾವಚಿತ್ರ ರಚನೆ

ಪೇಪರ್ ಕಟಿಂಗ್ ಕಲೆಯಲ್ಲಿ 50X50 ಅಡಿ ಅಳತೆಯಲ್ಲಿ ರಚಿಸಿ ವಿಶ್ವ ದಾಖಲೆಗೆ ಪ್ರಯತ್ನ



ಪೇಪರ್ ಕಟಿಂಗ್ ಕಲೆ ರಚಿಸಲು ವಿನ್ಯಾಸಗೊಳಿಸಿರುವ ನರೇಂದ್ರ ಮೋದಿಯವರ ಭಾವಚಿತ್ರದ ಮಾದರಿ.

ಮೈಸೂರು, ಆ.11 (ಪಿಎಂ)– ಜಿಎಸ್‌ಎಸ್ ಈವೆಂಟ್ಸ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಪೇಪರ್ ಕಟಿಂಗ್ ಕಲೆಯ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ 50X50 ಅಡಿ ಅಳತೆಯ ಬೃಹತ್ ಭಾವಚಿತ್ರ ರಚಿಸಿ, ವಿಶ್ವ ದಾಖಲೆ ನಿರ್ಮಿಸುವ ಪ್ರಯತ್ನ ಆ.13ರಂದು ನಡೆಯಲಿದೆ ಎಂದು ಈವೆಂಟ್ಸ್‌ನ ಮುಖ್ಯಸ್ಥೆ ರೂಪಶ್ರೀ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಮಂಡ್ಯ ಜಿಲ್ಲೆಯ ಬೆಳವಾಡಿಯಲ್ಲಿರುವ ಎಂಐಟಿ ಕಾಲೇಜು ಆವರಣದಲ್ಲಿ ಈ ವಿಶ್ವ ದಾಖಲೆ ಪ್ರಯತ್ನ ನಡೆಯಲಿದೆ. ಇದಕ್ಕಾಗಿ ಪೇಪರ್ ಕಟಿಂಗ್ ಕಲೆಯ ಕಲಾವಿದ ಟಿ.ಎಸ್. ಚಂದನ್ ಮಾರ್ಗದರ್ಶನದಲ್ಲಿ ಎಂಐಟಿ ಕಾಲೇಜಿನ 75 ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗಿದೆ. ತರಬೇತಿ ಪಡೆದಿರುವ ಈ ವಿದ್ಯಾರ್ಥಿಗಳು ಅಂದು ಚಂದನ್ ನೇತೃತ್ವದಲ್ಲಿ ಪೇಪರ್ ಕಟಿಂಗ್ ಕಲೆ ಮೂಲಕ ಮೋದಿಯವರ ಬೃಹತ್ ಭಾವಚಿತ್ರ ರಚಿಸಲಿದ್ದಾರೆ ಎಂದರು. ಕಲಾವಿದ ಡಾಮಿಕ್, ಎಂಐಟಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಕಿರಣ್‌ಕುಮಾರ್ ಗೋಷ್ಠಿಯಲ್ಲಿದ್ದರು.

> “ಕಪ್ಪು ಮತ್ತು ಬಿಳುಪಿನ ಕಾಗದದ ಹಾಳೆಗಳನ್ನು ಅಂಟಿಸುವ ಮೂಲಕ 50X50 ಅಡಿ ಅಳತೆಯಷ್ಟು ಅಗಲ ಮಾಡಿಕೊಂಡು ನನ್ನ ಮಾರ್ಗದರ್ಶನದಲ್ಲಿ 75 ವಿದ್ಯಾರ್ಥಿಗಳು ಈ ರಚನೆ ಮಾಡಲಿದ್ದಾರೆ. 1 ಗಂಟೆ ಅವಧಿಯಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ಅಂದಾಜಿದೆ. ವರ್ಲ್ಡ್ ರೆಕಾರ್ಡ್ ಇಂಡಿಯಾ ಸಂಸ್ಥೆ ಪ್ರತಿನಿಧಿಗಳು ವಿಶ್ವ ದಾಖಲೆಗಾಗಿ ಈ ಪ್ರಕ್ರಿಯೆಯನ್ನು ದಾಖಲೀಕರಣ ಮಾಡಲಿದ್ದಾರೆ.
> –ಟಿ.ಎಸ್.ಚಂದನ್, ಕಲಾವಿದ

ಶ್ರೀಲಂಕಾ ಸ್ಥಿತಿ ಭಾರತಕ್ಕೆ ಬರುವುದು ಅಸಾಧ್ಯ

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಸಿ. ಬಸವರಾಜು ಅಭಿಮತ



ಮೈಸೂರು, ಆ.11(ಜಿಎ)– ಶ್ರೀಲಂಕಾಗೆ ಬಂದ ಸ್ಥಿತಿ ಭಾರತಕ್ಕೆ ಬರುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಅದು ಅಸಾಧ್ಯದ ಮಾತು ಎಂದು ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಹಾಗೂ ರೈತಪರ ಹೋರಾಟಗಾರರೂ ಆದ ಪ್ರೊ.ಕೆ.ಸಿ. ಬಸವರಾಜು ಅಭಿಪ್ರಾಯಪಟ್ಟಿದ್ದಾರೆ.

ಆಜಾದಿ ಕೆ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ವತಿಯಿಂದ ವಿಶೇಷ ಪ್ರಚಾರೋಪನ್ಯಾಸ ಮಾಲೆ ಕಾರ್ಯಕ್ರಮ ಮತ್ತು ಹರ್ ಘರ್ ತಿರಂಗ ಪ್ರಯುಕ್ತ ರಾಷ್ಟ್ರಧ್ವಜ ವಿತರಣೆ ಕಾರ್ಯಕ್ರಮವನ್ನು ವಿವಿಯ ಕಾವೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾಗಿತ್ತು.

ಈ ವೇಳೆ ಮಾತನಾಡಿದ ಅವರು, ಭಾರತ ಅಹಿಂಸೆ ಮೂಲಕ ಸ್ವಾತಂತ್ರ್ಯ ಪಡೆದುಕೊಂಡು ವಿಶ್ವಕ್ಕೆ ಮಾದರಿಯಾಗಿದ್ದು, ಗಾಂಧೀಜಿ ಅವರ ಅಹಿಂಸೆ ಮಾರ್ಗದಿಂದ ಪ್ರೇರಣೆ ಪಡೆದ ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರು ಸಹ ಹಿಂಸೆಯ ಮಾರ್ಗವನ್ನು ತುಳಿಯದೆ ದಕ್ಷಿಣ ಆಫ್ರಿಕಾಗೆ ಸ್ವಾತರತ್ರ್ಯ ತಂದುಕೊಟ್ಟರು ಎಂದರು.

ಭಾರತ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿಯೇ ಅನೇಕ ದೇಶಗಳು ಸಹ ಸ್ವಾತಂತ್ರ್ಯ ಪಡೆದುಕೊಂಡಿವೆ. ಆದರೆ, ಅವುಗಳು ಈಗಲೂ ಸದೃಢರಾಗಿ ನಿಲ್ಲಲು ಸಾಧ್ಯವಾಗಿಲ್ಲ. ಗಾಂಧೀಜಿ ಅವರ ಪರಿಕಲ್ಪನೆಯನ್ನು ಇಟ್ಟುಕೊಂಡು ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆ ಸೇರಿದಂತೆ ಅನೇಕ ಯೋಜನೆಗಳನ್ನು ರೂಪಿಸಲಾಯಿತು. ಅವುಗಳು ಕೆಲ ವರ್ಷಗಳು ಉತ್ತಮವಾಗಿ ನಡೆದವು, ನಂತರ ದೇಶದಲ್ಲಿ ಆದ ಕೆಲ ಬದಲಾವಣೆಗಳಿಂದ ಪ್ರಮುಖವಾಗಿ ಪಾಕಿಸ್ತಾನ, ಬಾಂಗ್ಲಾದೇಶಗಳ ಯುದ್ಧಗಳಿಂದ ದೇಶದ ಅಭಿವೃದ್ಧಿ ಕುಂಠಿತವಾಯಿತು.

ಇಂದಿರಾಗಾಂಧಿ ಅವರ ನಂತರ ರಾಜೀವ್ ಗಾಂಧಿ ಅವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ದೇಶದ ಅಭಿವೃದ್ಧಿಯೂ ಶೇ.6.2 ರಷ್ಟಿತ್ತು. ನಂತರ ಅವರ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿದ್ದರ ಪರಿಣಾಮವಾಗಿ ಅದು 2.5 ರಿಂದ ಶೇ.3 ರಷ್ಟು ಹೆಚ್ಚಿತ್ತು. ಅವರ ನಂತರ 1991ರಲ್ಲಿ ಬಂದ ಪಿ.ವಿ. ನರಸಿಂಹರಾವ್ ಅವರ ಆಡಳಿತದ ಸಂದರ್ಭದಲ್ಲಿ ಶೇ8.2 ರಷ್ಟು ಅಭಿವೃದ್ಧಿಯಾಗಿತ್ತು. 2009 ರಿಂದ ದೇಶದಲ್ಲಿ ಶೇ.9.2 ರಷ್ಟು ಅಭಿವೃದ್ಧಿ ಪಥದಲ್ಲಿದ್ದು, ಇಂತಹ ಸಮೃದ್ಧಿ ದೇಶ ಶ್ರೀಲಂಕಾ ಮಾದರಿಯಾಗಲು ಸಾಧ್ಯವಿಲ್ಲ ಎಂದರು.


ಅಜಾದಿ ಕೆ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಕಳೆದ 1 ವರ್ಷಗಳಿಂದ ದೇಶಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು ಅದರಂತೆ ನಮ್ಮ ವಿವಿಯಲ್ಲೂ ಸಹ ಕಾರ್ಯಕ್ರಮಗಳನ್ನು ನಡೆಸಲಾಯಿತು. ಇಂದಿನ ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತಿಳಿಸಬೇಕು. ಹರ್ ಘರ್ ತಿರಂಗ ಇರುವುದರಿಂದ ವಿವಿ ವತಿಯಿಂದ 750ಕ್ಕೂ ಹೆಚ್ಚು ಬಾವುಟಗಳನ್ನು ಖರೀದಿ ಮಾಡಿದ್ದು ಎಲ್ಲಾ ಸಹೋದ್ಯೋಗಿಗಳು ಆ.13 ರಿಂದ 15ರ ವರೆಗೂ ತಮ್ಮ ಮನೆಗಳಲ್ಲಿ ಬಾವುಟವನ್ನು ಹಾರಿಸಲಿದ್ದೇವೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಡಾ.ಎಸ್. ವಿದ್ಯಾಶಂಕರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ರಾಷ್ಟ್ರಧ್ವಜ ವಿತರಣೆ ಮಾಡಲಾಯಿತು ಈ ವೇಳೆ ಭಾರತ್ ಮಾತಾಕಿ ಜೈ ಎಂಬ ಜೈಕಾರಗಳು ಕೇಳಿಬಂತು. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಸಚಿವ ಡಾ.ಎ. ಖಾದರ್ ಪಾಷ, ಕರ್ನಾಟಕ ರಾಜ್ಯ ಮುಕ್ತ ವಿವಿ ನೋಡಲ್ ಅಧಿಕಾರಿ ಡಾ.ಎನ್.ಆರ್. ಚಂದ್ರೇಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ

ಮೈಸೂರು, ಆ. 11– ವಿಪ್ರ ಜಾಗೃತಿ ವೇದಿಕೆ ವತಿಯಿಂದ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 80 ರಷ್ಟು ಅಂಕ ಗಳಿಸಿರುವ ವಿದ್ಯಾರ್ಥಿಗಳು ಇತ್ತೀಚಿನ ಭಾವಚಿತ್ರ, ಅಂಕಪಟ್ಟಿಯನ್ನು ಸೆ. 8ರೊಳಗೆ ಕಚೇರಿಗೆ ತಲುಪಿಸಲು ಕೋರಲಾಗಿದೆ. ಮಾಹಿತಿಗೆ ಮೊ. 9141637888 ಸಂಪರ್ಕಿಸಬಹುದು.

ಶಿವಮೊಗ್ಗ ಸುಬ್ಬಣ್ಣ ನಿಧನ



ಬೆಂಗಳೂರು: ಕರ್ನಾಟಕ ಸುಗಮ ಸಂಗೀತದ ಪ್ರಸಿದ್ಧ ಗಾಯಕರು, ನಾಡಿನ ಜನರ ಮನಸೂರೆಗೊಂಡಿದ್ದ ಶಿವಮೊಗ್ಗ ಸುಬ್ಬಣ್ಣ (83) ಅವರು ಹೃದಯಾಘಾತದಿಂದ ಗುರುವಾರ ರಾತ್ರಿ ಮೃತಪಟ್ಟಿದ್ದಾರೆ. ಅವರನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮಕ್ಕಳಾದ ಶ್ರೀರಂಗ ಮತ್ತು ಬಾಗೇಶ್ರೀ ಅವರನ್ನು ಅಗಲಿದ್ದಾರೆ.

ಸುಬ್ಬಣ್ಣ ಅವರು ಶಿವಮೊಗ್ಗ ಜಿಲ್ಲೆಯ ನಗರ ಎಂಬ ಸಣ್ಣ ಊರಿನಲ್ಲಿ 1938ರ ಡಿಸೆಂಬರ್ 14ರಂದು ಜನಿಸಿದರು. ತಂದೆ ಗಣೇಶರಾಯರು, ತಾಯಿ ರಂಗನಾಯಕಿ. ತಾತ ಶಾಮಣ್ಣ, ನಂತರ ಎಂ. ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದರು. ಕವಿಗೀತೆಗಳನ್ನು ಹಾಡುವುದರಲ್ಲಿ ನಿಸ್ಸೀಮರಾದ ಸುಬ್ಬಣ್ಣ ಅವರು, ಕುವೆಂಪು, ಬೇಂದ್ರೆ ಹಾಗೂ ನಾಡಿನ ಇನ್ನಿತರ ಶ್ರೇಷ್ಠ ಕವಿಗಳ ಕವಿತೆಗಳನ್ನು ರಾಗ ಸಂಯೋಜಿಸಿ ಹಾಡುವುದರ ಮೂಲಕ ಮನೆ ಮಾತಾದರು.

1979ರಲ್ಲಿ ಕಾಡುಕುದುರೆ ಚಲನಚಿತ್ರದಲ್ಲಿ ಅವರು ಹಾಡಿದ 'ಕಾಡು ಕುದುರೆ ಓಡಿ ಬಂದಿತ್ತಾ' ಹಾಡಿಗೆ ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ ರಜತ ಕಮಲ ರಾಷ್ಟ್ರಪ್ರಶಸ್ತಿ ಪಡೆದು, ಆ ಮೂಲಕ ಈ ಪ್ರಶಸ್ತಿಗೆ ಭಾಜನರಾದ ಮೊದಲ ಕನ್ನಡಿಗ ಎನಿಸಿಕೊಂಡರು.

ಆಕಾಶವಾಣಿ ಮತ್ತು ದೂರದರ್ಶನದ 'ಎ' ಟಾಪ್ ಶ್ರೇಣಿಯ ಗಾಯಕರಾಗಿದ್ದರು. 1985ರಲ್ಲಿ ರಾಜ್ಯೋತ್ಸವ ಪುರಸ್ಕಾರ, 1988ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪುರಸ್ಕಾರ, 1999ರಲ್ಲಿ ಸಂತ ಶಿಶುನಾಳ ಷರೀಫ ಪ್ರಶಸ್ತಿ, 2008ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, 2003ರಲ್ಲಿ ಬೆಂಗಳೂರು ಗಾಯನ ಸಮಾಜದಿಂದ 'ವರ್ಷದ ಕಲಾವಿದ' ಅಲ್ಲದೇ ಇನ್ನೂ ಅನೇಕ ಪ್ರಶಸ್ತಿ, ಪುರಸ್ಕಾರಗಳು ಅವರಿಗೆ ದೊರೆತಿವೆ.

ರಾಷ್ಟ್ರವಲ್ಲದೇ ಅಮೆರಿಕ, ಸಿಂಗಾಪುರ ಮೊದಲಾದ ಕಡೆ ಸುಗಮ ಸಂಗೀತದ ಕಂಪು ಹರಡಿದ್ದಾರೆ. ಅವರ ನೂರಾರು ಧ್ವನಿಸುರಳಿಗಳು ನಾಡಿನ ಮೂಲೆಮೂಲೆಗೂ ತಲುಪಿವೆ. ಎರಡು ಬಾರಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಕೆಲಸ ನಿರ್ವಹಿಸಿರುವ ಸುಬ್ಬಣ್ಣ ಅವರು, ಆಕಾಶವಾಣಿ ನಡೆಸುವ ವಾರ್ಷಿಕ ಸಂಗೀತ ಸ್ಪರ್ಧೆಗಳ ತೀರ್ಪುಗಾರರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ರಾಜ್ಯ ಚಲನಚಿತ್ರ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ಇರ್ವಿನ್ ರಸ್ತೆ ಅಗಲೀಕರಣ: ಬಾಕಿ ಇದ್ದ ಕಟ್ಟಡಗಳ ತೆರವು

ಮೈಸೂರು,ಆ.11– ಮೈಸೂರಿನ ವಿವಾದಾತ್ಮಕ ಹಳೇಯ ಇರ್ವಿನ್ ರಸ್ತೆ ಅಗಲೀಕರಣಕ್ಕೆ ಮತ್ತೆ ಚಾಲನೆ ದೊರೆತಿದ್ದು, ಕೆಲ ವಾಣಿಜ್ಯ ಕಟ್ಟಡಗಳು ಸೇರಿದಂತೆ ಕೆಲವು ನಿರ್ಮಾಣಗಳ ತೆರವು ಕಾರ್ಯ ಆರಂಭವಾಗಿದೆ. ಇರ್ವಿನ್ ರಸ್ತೆಯಲ್ಲಿರುವ ಕೆಲ ವಾಣಿಜ್ಯ ಕಟ್ಟಡಗಳು ಮತ್ತು ಇನ್ನಿತರ ನಿರ್ಮಾಣಗಳ ತೆರವಿಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದ ಹಿನ್ನಲೆಯಲ್ಲಿ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ಈಗ ರಸ್ತೆ ಅಗಲೀಕರಣಕ್ಕೆ ಹೈಕೋರ್ಟ್ ಆದೇಶ ನೀಡಿರುವುದರಿಂದಾಗಿ ಮತ್ತೆ ಅಗಲೀಕರಣಕ್ಕೆ ಮುಂದಾಗಿದ್ದೇವೆ ಎಂದು ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಇರ್ವಿನ್ ರಸ್ತೆ ಅಗಲೀಕರಣಕ್ಕೆ ಇದ್ದಂತಹ ಸಮಸ್ಯೆಗಳು ಬಗೆಹರಿದಿದ್ದು, ನಿರ್ಮಾಣಗಳ ತೆರವಿಗೆ ಸಂಬಂಧಪಟ್ಟವರು ಒಪ್ಪಿಗೆ ಸೂಚಿಸಿದ್ದು, ಇನ್ನೆರಡು ದಿನಗಳಲ್ಲಿ ಅಗಲೀಕರಣ ಕಾಮಗಾರಿ ಸಂಪೂರ್ಣವಾಗಲಿದೆ ಎಂದು ತಿಳಿಸಿದರು.

ಮಠ, ದೇವಾಲಯಗಳಲ್ಲೂ ರಾಷ್ಟ್ರಧ್ವಜ ಹಾರಿಸಲು ಜಾಗೃತಿ



ಮೈಸೂರು,ಆ.11(ಆರ್‌ಕೆಬಿ)– ಮೈಸೂರಿನ ಜಯನಗರ ಶ್ರೀರಾಮ ಮಂದಿರದಲ್ಲಿ ಮೈಸೂರು ಬ್ರಾಹ್ಮಣ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣರ ಯಜುರುಪಾಕರ್ಮ ಆಚರಣೆ ಮತ್ತು 75ನೇ ಸ್ವಾತಂತ್ರ್ಯ ದಿನಾಚರಣೆ ಅಮೃತ ಮಹೋತ್ಸವ ಆಚರಣೆ ಅಂಗವಾಗಿ ಅರ್ಚಕ ಪುರೋಹಿತರಿಗೆ ರಾಷ್ಟ್ರಧ್ವಜ ನೀಡಿ ಮಠ, ದೇವಸ್ಥಾನ, ರಾಮ ಮಂದಿರಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವಂತೆ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮನೆ ಮನೆಯಲ್ಲೂ ರಾಷ್ಟ್ರ ಧ್ವಜಾರೋಹಣಕ್ಕೆ ಪ್ರಧಾನಿ ಮೋದಿ ಕರೆ ನೀಡಿದ್ದು, ಇದರಿಂದ ಯುವ ಪೀಳಿಗೆಯಲ್ಲಿ ದೇಶಪ್ರೇಮ ಮೂಡಿಸುತ್ತದೆ. ಮನೆಗಳಲ್ಲಿ ಧ್ವಜಾರೋಹಣ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಹೋರಾಟಗಾರರು, ವೀರಯೋಧರನ್ನು ಸ್ಮರಿಸೋಣ. ಆ.13ರಿಂದ 15ರವರೆಗೆ ತ್ರಿವರ್ಣ ಧ್ವಜಗಳನ್ನು ಮಠ, ದೇವಸ್ಥಾನ, ರಾಮಮಂದಿರಗಳಲ್ಲಿ ಹಾರಿಸುವ ಮೂಲಕ ಸಕಲ ಜನರ ಒಳಿತಿಗಾಗಿ ಭಾರತ ಮಾತೆಯಲ್ಲಿ ಪ್ರಾರ್ಥಿಸೋಣ ಎಂದರು.

> “ಸರ್ಕಾರಿ ಕಚೇರಿ, ಶಾಲಾ ಕಚೇರಿಗಳಲ್ಲಿ ಮಾತ್ರ ಆಚರಿಸಲಾಗುತ್ತಿದ್ದ ಸ್ವಾತಂತ್ರ್ಯ ಧ್ವಜಾರೋಹಣವನ್ನು ಮನೆ ಮನೆಗಳಲ್ಲೂ 3 ದಿನಗಳ ಕಾಲ ಹಾರಿಸಲು ಕರೆ ನೀಡುವ ಮೂಲಕ ಪ್ರಧಾನಿ ಮೋದಿ, ಭಾರತೀಯರಲ್ಲಿ ದೇಶಭಕ್ತಿ ಇಮ್ಮಡಿಯಾಗುವಂತೆ ಮಾಡಿದ್ದಾರೆ.
> –ಅರುಣ್‌ಕುಮಾರ್ ಶರ್ಮಾ

ಜಯನಗರ ರಾಮಮಂದಿರದ ಅಧ್ಯಕ್ಷ ಅರುಣ್‌ಕುಮಾರ್ ಶರ್ಮಾ, ಹಿರಿಯ ಚಿಂತಕ ಕೆ.ರಘುರಾಂ ವಾಜಪೇಯಿ, ಮೈಸೂರು ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಮುಖಂಡರಾದ ವಿನಯ್ ಕಣಗಾಲ್, ಪ್ರದೀಪ್, ವೆಂಕಟೇಶ್ ರಾವ್, ಶೇಷಾಚಲ, ಹರ್ಷ, ಶ್ರೀನಾಥ್, ಸತ್ಯನಾರಾಯಣ, ರವೀಂದ್ರ, ಗಣೇಶ್, ಆನಂದ್ ಇನ್ನಿತರರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಜನ್ಮದಿನದ ಪ್ರಯುಕ್ತ ಇಂದು ವಿವಿಧ ಸೇವಾ ಕಾರ್ಯಕ್ರಮ



ಮೈಸೂರು,ಆ.11(ಪಿಎಂ)– ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ 75ನೇ ವರ್ಷದ ಜನ್ಮದಿನದ ಅಮೃತ ಮಹೋತ್ಸವದ ಅಂಗವಾಗಿ ಆ.12ರಂದು ವಿವಿಧ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಹಿನಕಲ್ ಪ್ರಕಾಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10ಕ್ಕೆ ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಾರ್ವಜನಿಕರಿಗೆ ಸಿಹಿ ಹಂಚಲಾಗುವುದು. ಬಳಿಕ ಬೆಳಗ್ಗೆ 11ಕ್ಕೆ ದೇವರಾಜ ಮಾರುಕಟ್ಟೆ ಎದುರು ರಸ್ತೆಬದಿ ವ್ಯಾಪಾರ ಮಾಡುವ ಸುಮಾರು 250 ಬಡ ಮಹಿಳೆಯರಿಗೆ ಸೀರೆಗಳನ್ನು ಹಂಚಲಾಗುವುದು ಎಂದರು. ಮಧ್ಯಾಹ್ನ 12.30ಕ್ಕೆ ಜಯಪುರ ಹೋಬಳಿಯ ಡಿ.ಸಾಲುಂಡಿಯಲ್ಲಿರುವ ಶ್ರೀಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ.

ನಂತರ ಮಧ್ಯಾಹ್ನ 2ಕ್ಕೆ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಚಿಗುರು ಆಶ್ರಮದಲ್ಲಿ ಅಲ್ಲಿನ ವಾಸಿಗಳಿಗೆ ಹಣ್ಣು–ಹಂಪಲು ವಿತರಣೆ ಮಾಡಲಾಗುವುದು ಎಂದು ತಿಳಿಸಿದರು. ಕಾಂಗ್ರೆಸ್ ಮುಖಂಡರಾದ ಮಹೇಶ್‌ಗೌಡ, ಬ್ರಾಡ್ ವೇ ಕಿರಣ್, ಮೈಸೂರು ಬಸವಣ್ಣ, ಬಳಗದ ಜಿಲ್ಲಾಧ್ಯಕ್ಷ ಜೋಗಾದಿ ಕೆ.ಮಹದೇವಸ್ವಾಮಿ, ನಗರಾಧ್ಯಕ್ಷ ಹೆಬ್ಬಾಳ್ ವಿಜಯ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಆಡಳಿತ ಮಂಡಳಿ ನೂತನ ಸದಸ್ಯರಾಗಿ ನೇಮಕಗೊಂಡ ನಗರಪಾಲಿಕೆ ಮಾಜಿ ಸದಸ್ಯ ಗಿರೀಶ್ ಪ್ರಸಾದ್ ಅವರನ್ನು ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ ಅಭಿನಂದಿಸಿದರು. ಪಾಲಿಕೆ ಸದಸ್ಯ ಚಿಕ್ಕವೆಂಕಟು, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿನೇಶ್‌ಗೌಡ, ಯತೀಶ್, ಗೋಕುಲಂ ಪ್ರಕಾಶ್, ಜಯಣ್ಣ, ಅಶೋಕ್, ಚಂದ್ರಶೇಖರ್, ಹರೀಶ್, ದಶರಥ ಇದ್ದರು.

ಗೋಪಾಲಕೃಷ್ಣ ನಿಧನ



ಮೈಸೂರು, ಆ. 11– ಪಾಂಡವಪುರದ ಸೋಮೇಗೌಡರ ಪುತ್ರ, ಎಲೆಕ್ಟ್ರಿಕ್ ಕಂಟ್ರಾಕ್ಟರ್ ಗೋಪಾಲಕೃಷ್ಣ (48) ಅವರು ಬುಧವಾರ ನಿಧನರಾದರು. ಮೃತರು ಪತ್ನಿ ಕವಿತಾ ಸೇರಿದಂತೆ ಅಪಾರ ಸ್ನೇಹಿತರು, ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಪಾಂಡವಪುರದಲ್ಲಿರುವ ರುದ್ರಭೂಮಿಯಲ್ಲಿ ಗುರುವಾರ ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.08.2022 ಶುಕ್ರವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಪೂರ್ಣಿಮಾ, ನಕ್ಷತ್ರ : ಧನಿಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರೀ ಲಕ್ಷ್ಮೀಹಯಗ್ರೀವ ಜಯಂತಿ, ಯಜುರುಪಾಕರ್ಮ, ಶ್ರಾವಣ ಹುಣ್ಣಿಮೆ, ಪವಮಾನ ಹೋಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು:** ಸ್ವಚ್ಛತಾ ಶಿಬಿರ, ಮುಖ್ಯ ಅತಿಥಿಗಳು: ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಆರೋಗ್ಯಾಧಿಕಾರಿ ಡಾ.ನಾಗರಾಜು, ಎನ್‌ಎಸ್‌ಎಸ್ ಕಾರ್ಯಕ್ರಮ ಸಮನ್ವಯಾಧಿಕಾರಿ ಡಾ.ಸುರೇಶ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ರವಿ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 8ಕ್ಕೆ.

■ **ಸೇಂಟ್ ಫಿಲೋಮಿನಾ ಕಾಲೇಜು:** ಇನ್ ಸೆಂಟಿಯಾ–2022, ಉದ್ಘಾಟನೆ: ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಅಧ್ಯಕ್ಷತೆ: ರೆ.ಫಾ.ಬರ್ನಾಡ್ ಪ್ರಕಾಶ್ ಬಾರ್ನೀಸ್, ಉಪಸ್ಥಿತರು: ಮರಿಯಾ ಕ್ಷೇವಿಯರ್, ಪ್ರಿನ್ಸಿಪಾಲ್ ಡಾ. ರವಿ, ಸ್ಥಳ: ಕಾಲೇಜು ಒಳಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ವಿಠ್ಠಲ ಮುಖ್ಯಪ್ರಾಣ ರಾಘವೇಂದ್ರ ಸೇವಾ ಸಮಿತಿ, ಶ್ರೀ ವಿಟ್ಠಲ ಧಾಮ, ಪೇಜಾವರ ಮಠ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 6ಕ್ಕೆ ಸುಪ್ರಭಾತ, 7ರಿಂದ ಮಹಾಪಂಚಾಮೃತ ಅಭಿಷೇಕ, 10.30ರಿಂದ ಕನಕಾಭಿಷೇಕ, ಸರ್ವಸೇವೆ, ಪಾದಪೂಜೆ, 12ಕ್ಕೆ ಮಹಾಮಂಗಳಾರತಿ, ಸಂಜೆ 5ರಿಂದ ಭಜನೆ, ವಿದ್ವಾಂಸರಿಂದ ಪ್ರವಚನ. ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಜೆ.ಪಿ.ನಗರ.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಸಂಜೆ 6ಕ್ಕೆ ಸುಪ್ರಭಾತ, 8ರಿಂದ ರಾಘವೇಂದ್ರ ಅಷ್ಟಾಕ್ಷರ ಜಪ, 9ರಿಂದ ಹೋಮ, 11ರಿಂದ ಅಷ್ಟೋತ್ತರ ಸೇವೆ, 11.30ರಿಂದ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಸಂಜೆ 6 ರಿಂದ ಉಪನ್ಯಾಸ ಹಾಗೂ ಸಂಗೀತ ಸೇವೆ, 9.30 ರಿಂದ ಮಹಾಮಂಗಳಾರತಿ, ಹೋಮ, ವಿಶೇಷ ಪೂಜೆ, ಬೆಳಗ್ಗೆ 8 ಗಂಟೆಗೆ ಶ್ರೀ ಸೋಮನಾಥೇಶ್ವರ ದೇವಸ್ಥಾನದಿಂದ ವಾಹನೋತ್ಸವ, ಸ್ಥಳ: ಸೋಮನಾಥನಗರ.

■ **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಪಾದಪೂಜೆ, 9ಕ್ಕೆ ಪಂಚಾಮೃತ, 12.30ಕ್ಕೆ ಅಲಂಕಾರ, ಸಂಜೆ 6.45ರಿಂದ ವಿದುಷಿ ಅರ್ಚನಾ ಎಲ್.ರಾವ್‌ರಿಂದ ಗಾಯನ, ವಿದ್ವಾನ್ ಮೈಸೂರು ಕೇಶವ್–ಪಿಟೀಲು, ವಿದ್ವಾನ್ ಸಾಯಿ ಶಿವು ಲಕ್ಷ್ಮೀ ಕೇಶವ–ಮೃದಂಗ, ಪಲ್ಲಕ್ಕಿ ಉತ್ಸವ, ರಥೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ, ವಿ.ವಿ.ಮೊಹಲ್ಲಾ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಸ್ವಾತಂತ್ರ್ಯೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನ, ಉದ್ಘಾಟನೆ: ಕಾಲೇಜು ಶಿಕ್ಷಣ ಇಲಾಖೆ ವಿಶೇಷ ಅಧಿಕಾರಿ ಡಾ.ಕೆಂಪೇಗೌಡ, ವಿಶೇಷ ಆಹ್ವಾನಿತರು: ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ, ಸ್ಥಳ: ಗ್ರಂಥಾಲಯ ಅಧ್ಯಯನ ವಿಭಾಗ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** ಸ್ವಾತಂತ್ರ್ಯ ಅಮೃತ ಮಹೋತ್ಸವ ನಡಿಗೆ... ಪ್ರಬುದ್ಧ ಭಾರತದ ಕಡೆಗೆ ವಿಚಾರ ಸಂಕಿರಣ, ಉದ್ಘಾಟನೆ: ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತಕುಮಾರ್, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ರಿಂದ.

■ **ಮಹಾರಾಜ ಕಾಲೇಜು:** ಜನಪದ ಜಾತ್ರೆ, ಉದ್ಘಾಟನೆ: ಕಾಲೇಜು ಪ್ರಿನ್ಸಿಪಾಲ್ ಡಾ.ಯಶೋಧ, ಮುಖ್ಯ ಅತಿಥಿಗಳು: ಡಾ.ಜಯಲಕ್ಷ್ಮೀ ಸೀತಾಪುರ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ. ಅನಿಟ ವಿಮ್ಲ ಬ್ರ್ಯಾಗ್ಸ್, ಉಪಸ್ಥಿತರು: ಆಡಳಿತಾಧಿಕಾರಿ ಡಾ.ಜಿ.ಎಚ್.ನಾಗರಾಜು, ಸ್ಥಳ: ಕಾಲೇಜು ಒಳಾಂಗಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ಡೆವಲಪ್‌ಮೆಂಟ್ ರಿಸರ್ಚ್:** ಸುಸ್ಥಿರ ಅಭಿವೃದ್ಧಿಯಲ್ಲಿ ಸಮಸ್ಯೆಗಳು ಸವಾಲುಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಯೂನಿವರ್ಸಿಟಿ ಅನುದಾನ ಆಯೋಗದ ಸದಸ್ಯ ಪ್ರೊ.ಶಿವರಾಜು, ಅಧ್ಯಕ್ಷತೆ: ಮುಕ್ತ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಸ್ಥಳ: ಕಾವೇರಿ ಸಭಾಂಗಣ, ಮುಕ್ತಗಂಗೋತ್ರಿ, ಬೆಳಗ್ಗೆ 10.30ರಿಂದ.

■ **ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ, ಮೈಸೂರು ವಿವಿ ಮಾಹಿತಿ ಮತ್ತು ಗ್ರಂಥಾಲಯ ಸಂಘ:** ವಿದ್ಯಾರ್ಥಿ ಸಂಘದ ಸಮಾರೋಪ ಹಾಗೂ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಪ್ರೊ.ಲೋಕನಾಥ್, ಉಪಸ್ಥಿತರು: ಡಾ.ಜೆ.ಲೋಹಿತ್, ಸ್ಥಳ: ಡಾ.ಎಸ್.ಆರ್.ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ ಅಂಗವಾಗಿ ವಿವಿಧ ಜಾತಿಯ ತುಳಸಿ ಗಿಡ ವಿತರಣೆ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ, ಕಾಮಾಕ್ಷಿ ಆಸ್ಪತ್ರೆ ಮುಖ್ಯಸ್ಥ ಮಹೇಶ್‌ಶೆಣೈ, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಎನ್.ಎಂ.ನವೀನ್ ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಚಾಮುಂಡಿಪುರಂ, ಬೆಳಗ್ಗೆ 11ಕ್ಕೆ.

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11.30 ರಿಂದ.

■ **ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಸಾರ ಸಮಿತಿ:** ಮಾಜಿ ಸಿಎಂ ಸಿದ್ದರಾಮಯ್ಯ ಹುಟ್ಟುಹಬ್ಬದ ಅಂಗವಾಗಿ ಬಡ ಕುಟುಂಬಗಳಿಗೆ ಅಕ್ಕಿ ವಿತರಣೆ, ಉಪಸ್ಥಿತರು: ಆರ್.ಮೂರ್ತಿ, ಡಾ. ಬಿ.ಜೆ.ವಿಜಯಕುಮಾರ್, ಶಾಸಕರಾದ ತನ್ವೀರ್ ಸೇಠ್, ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು, ಮುಖಂಡ ಕೆ.ಹರೀಶ್‌ಗೌಡ, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣದ ಸಮೀಪ, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ನುಲಿಯ ಚಂದಯ್ಯ ಜಯಂತ್ಯೋತ್ಸವ ಸಮಿತಿ:** ಶ್ರೀ ನುಲಿಯ ಚಂದಯ್ಯ ಜಯಂತಿ, ಉದ್ಘಾಟನೆ: ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕಲಾಮಂದಿರ, ಮಧ್ಯಾಹ್ನ 12ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ–ಪ್ರೊ.ಎನ್.ವೆಂಕೋಬರಾವ್, 6.40 ಅರಿವಿನ ಶಿಖರ, ಗಾಯನ–ಟಿ.ಎನ್.ಅಶ್ವಿನಿ ಮತ್ತು ಎಂ.ಎ.ಶೋಭಾ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 7.15 ಭಾವಗೀತೆ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಎಂ.ಎಸ್.ಆನಂದ್ ಮತ್ತು ಸಂಗಡಿಗರಿಂದ ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಂದನ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ– ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ವಿ.ರವಿಕುಮಾರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ಸಿರಿಧಾನ್ಯಗಳ ಕೃಷಿ, ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಬಿ.ಮಹೇಶ್‌ಕುಮಾರ್ ಹಾಗೂ ಸೌಮ್ಯ ಅವರೊಂದಿಗೆ ಮಾತುಕತೆ, 9.00 ಕನ್ನಡ ಭಾರತಿ–ವಿಶ್ವಕೋಶ– ಪರಿಕ್ರಮ ಪ್ರಯೋಜನ ಕುರಿತು ಸಂವಾದದಲ್ಲಿ ಭಾಗವಹಿಸುವವರು ಡಾ.ಜಿ.ಎಲ್.ಹೆಗಡೆ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತು ಜಿ.ಎಸ್.ಭಟ್ ನಡೆಸಿಕೊಡುವವರು ದಿವಾಕರ ಹೆಗಡೆ

■ **ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ ಅಭಿವೃದ್ಧಿ ಸಮಿತಿ :** ದೇವಸ್ಥಾನದ 32ನೇ ವಾರ್ಷಿಕೋತ್ಸವ, ಬೆಳಗ್ಗೆ ಅರಳೀಕಟ್ಟೆ ಈಶ್ವರನ ಸನ್ನಿಧಿಯಲ್ಲಿ ಪೂಜೆ, ಮಂಗಳಾರತಿ, ತೀರ್ಥ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ, ಬನ್ನಿಮಂಟಪ 1ನೇ ಹಂತ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಕು. ನಯನಾ ನಾಗರಾಜ್ ಅವರಿಂದ ದಾಸವಾಣಿ, ರಾತ್ರಿ 8ಕ್ಕೆ ಕು. ಆಶಿಕಾ ಮತ್ತು ಹರಿಹರನ್ ಅವರಿಂದ ಭರತನಾಟ್ಯ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ನಾರಾಯಣಶಾಸ್ತ್ರಿ ರಸ್ತೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7ರಿಂದ ಮಹಾಪಂಚಾಮೃತ ಅಭಿಷೇಕ, 8ರಿಂದ ಕನಕಾಭಿಷೇಕ, ಸರ್ವಸೇವೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30ರಿಂದ ಪ್ರಸಾದ ವಿನಿಯೋಗ, ಸಂಜೆ 7ರಿಂದ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 6.30ರಿಂದ ವಿದುಷಿ ವೃಂದಾ ಆಚಾರ್ಯ ಅವರಿಂದ ಶಾಸ್ತ್ರೀಯ ಸಂಗೀತ, ಸ್ಥಳ:ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಟ್ರಸ್ಟ್ ಅಭಿನವ ಮಂತ್ರಾಲಯ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಸುಪ್ರಭಾತ, ನಿರ್ಮಾಲ್ಯ, ಭಕ್ತರಿಂದ ಪಾದಪೂಜೆ, ಫಲಪಂಚಾಮೃತ, ಅಷ್ಟೋತ್ತರ, ಪುಷ್ಪಾಲಂಕಾರ, ಪುಷ್ಪಾರ್ಚನೆ, ಮಹಾಮಂಗಳಾರತಿ, ಸಂಜೆ ದೀವಿಟಿಗೆ ಸೇವೆ, ವೇದಪಾರಾಯಣ, ಡೋಲೋತ್ಸವ, ದೀಪಾರಾಧನೆ, ರಜತ ಪಲ್ಲಕ್ಕಿ, ರಜತರಥ ಸೇವೆ, ಅಷ್ಟಾವಧಾನ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಬೃಂದಾವನ ಟ್ರಸ್ಟ್, ಕೃಷ್ಣಮೂರ್ತಿಪುರಂ.

■ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ :** ಕಲಾ ವೈಭವ, ಜಿಲ್ಲಾ ಮಟ್ಟದ ಗುಡಿ ಕೈಗಾರಿಕೆಗಳ ಕರಕುಶಲ, ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರ ಮಠ, ಉಪಸ್ಥಿತರು: ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಜಿಲ್ಲಾ ಕೈಗಾರಿಕಾ ಜಂಟಿ ನಿರ್ದೇಶಕ ಟಿ. ದಿನೇಶ್, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಸಂಜೆ 4ಕ್ಕೆ.

■ **ತನುಮನ ಸಂಸ್ಥೆ:** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಸಾನ್ನಿಧ್ಯ: ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಸಂಜೆ 5.30ಕ್ಕೆ.

■ **ಸಂಸ್ಕೃತ ಭಾರತಿ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನಂ:** ಸಾಮವೇದ, ಸಂಸ್ಕೃತ ಸಪ್ತಾಹ–2022, ಡಾ. ಸುರೇಶ ಹಾಗೂ ಡಾ.ವಿವೇಕರಿಂದ ರಘುವಂಶದ ಮೊದಲ ಸರ್ಗ, ರಾಮಾಯಣದಲ್ಲಿ ನಿರ್ವಹಣೆಯ ಕಲೆ ಕುರಿತು ಪ್ರವಚನ, ಸ್ಥಳ: ವಿಶ್ವಂ ಸಭಾಂಗಣ, ಸರಸ್ವತಿಪುರಂ, ಸಂಜೆ 5.50ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಶ್ರುತಿಮಂಜರಿ ಪ್ರತಿಷ್ಠಾನ:** 23ನೇ ಶ್ರಾವಣ ಯುವ ಸಂಗೀತೋತ್ಸವ, ಉದ್ಘಾಟನೆ: ರೋಟರಿ ಪಶ್ಚಿಮ ಸಂಸ್ಥೆ ಅಧ್ಯಕ್ಷ ಉಲ್ಲಾಸ್ ಪಂಡಿತ್, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಹರಿಭಟ್ ಅವರಿಂದ ಗಾಯನ, ವಿದುಷಿ ಶ್ರುತಿ ಸಿ.ವಿ.–ಪಿಟೀಲು, ವಿದ್ವಾನ್ ಪವನ್‌ಮಾಧವ್ ಮಾಸುರ್–ಮೃದಂಗ, ವಿದ್ವಾನ್ ಪ್ರಹ್ಲಾದ್ ಚಕ್ರವರ್ತಿ–ಖಂಜಿರ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ.

■ **ಗಾನಭಾರತೀ :** ಸ್ವರಮೂರ್ತಿ ವಿ.ಎನ್.ರಾವ್ ನೆನಪಿನ ಸಂಗೀತ ಕಛೇರಿ, ವಿದ್ವಾನ್ ಎಸ್.ವಿಜಯರಾಘವನ್ ಅವರಿಂದ ವೀಣಾವಾದನ, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಗಾಯತ್ರಿ ಎಂಟರ್‌ಪ್ರೈಸಸ್, ಕನ್ನಡ ಸಾಹಿತ್ಯ ಕಲಾಕೂಟ :** ಹಿರಿಯ ಕಲಾವಿದರು, ಛಾಯಾಚಿತ್ರ ಪತ್ರಕರ್ತರೂ ಆದ ಎಸ್.ಎಂ. ಜಂಬುಕೇಶ್ವರ ಅವರ 'ವರ್ಣದಿಂದ ವಿಶ್ವದೆಡೆಗೆ' ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಕೃತಿ ಲೋಕಾರ್ಪಣೆ : ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಕೃತಿ ಪರಿಚಯ : ಹಿರಿಯ ಪತ್ರಕರ್ತ ಡಾ. ಎಂ. ಮಹ್ಮದ್ ಪಾಷ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಸಂಜೆ 6ಕ್ಕೆ.

■ **ದೀಕ್ಷಿತ್ ಆರೋಗ್ಯಧಾಮ :** ಆನಂದ ಆರೋಗ್ಯ ಕಾರ್ಯಕ್ರಮ, ವಿದುಷಿ ಪೃಥ್ವಿ ಭಾಸ್ಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಶಮಿತ್ ಎಸ್. ಗೌಡ –ಘಟಂ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6 ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ:** ಶ್ರಾವಣ ಮಾಸ ಪೂಜಾನುಷ್ಠಾನ–ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ.ಹೆಚ್.ಬಿ.ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಕ ಡಿ.ಎಂ.ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮೈಸೂರು ಪಾಲಿಕೆಯಿಂದ 1.50 ಲಕ್ಷ ತ್ರಿವರ್ಣ ಧ್ವಜ ಮಾರಾಟಕ್ಕೆ ಸಿದ್ಧತೆ

● ಧ್ವಜವೊಂದಕ್ಕೆ 25 ರೂ. ನಿಗದಿ ● ಧ್ವಜ ಖರೀದಿಗೆ ಸ್ವಯಂಪ್ರೇರಣೆಯಿಂದ ಮುಂದಾದ ಜನ




ಮೈಸೂರಿನ ಜೆ.ಪಿ.ನಗರದಲ್ಲಿ ನಗರ ಪಾಲಿಕೆ ಸಿಬ್ಬಂದಿ ಬಾವುಟ ಮಾರಾಟ ಮಾಡುತ್ತಿರುವುದು.

ಮೈಸೂರು,ಆ.11 (ಎಂ.ಟಿ.ವೈ)– ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಸಂದ ಹಿನ್ನೆಲೆಯಲ್ಲಿ ದೇಶಾದ್ಯಂತ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವವನ್ನು ಸಂಭ್ರಮದಿಂದ ಆಚರಣೆ ಮಾಡಲು ನಿರ್ಧರಿಸಿದ್ದು, ಮನೆ–ಮನೆ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಕಾರ್ಯಕ್ರಮಕ್ಕಾಗಿ ಮೈಸೂರು ಮಹಾನಗರ ಪಾಲಿಕೆ 1.50 ಲಕ್ಷ ರಾಷ್ಟ್ರಧ್ವಜವನ್ನು ಮನೆ ಬಾಗಿಲಿಗೆ ಕೊಂಡೊಯ್ದು ಮಾರಾಟ ಮಾಡಲು ಮುಂದಾಗಿದೆ.

ಪಾಲಿಕೆಯ 9 ವಲಯಗಳಲ್ಲಿ ಧ್ವಜ ಮಾರಾಟಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ವಿವಿಧ ವಾರ್ಡ್‌ಗಳಲ್ಲಿ ಧ್ವಜ ಹೊತ್ತು ಹೋಗುತ್ತಿರುವ ಸಿಬ್ಬಂದಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮನೆ, ಮಳಿಗೆಗಳ ಮೇಲೆ ಹಾರಿಸಲು ಯೋಗ್ಯವಾದ ಅಳತೆಯಲ್ಲಿ ತಯಾರಿಸಿರುವ ಧ್ವಜಕ್ಕೆ 25 ರೂ. ನಿಗದಿ ಮಾಡಲಾಗಿದ್ದು, ಖರೀದಿಸಿದವರಿಗೆ ರಶೀದಿಯನ್ನೂ ನೀಡಲಾಗುತ್ತಿದೆ.

ಕೆಲವು ದೊಡ್ಡ ವಲಯಗಳಿಗೆ 30 ಸಾವಿರ, ಚಿಕ್ಕ ವಲಯಗಳಿಗೆ 15 ಸಾವಿರ ಧ್ವಜವನ್ನು ನೀಡಲಾಗಿದೆ. ಮನೆಗಳಿಗೆ ಧ್ವಜ ಮಾರಾಟ ಮಾಡುವುದಕ್ಕೆ ಕಂದಾಯ ಸಿಬ್ಬಂದಿ, ಹೆಲ್ತ್ ಇನ್ಸ್‌ಪೆಕ್ಟರ್ ಸೇರಿದಂತೆ ಇನ್ನಿತರರನ್ನು ನಿಯೋಜಿಸಲಾಗಿದೆ. ಅವರೊಂದಿಗೆ ಪೌರ ಕಾರ್ಮಿಕರು ಧ್ವಜ ಹಿಡಿದುಕೊಂಡು ವಾರ್ಡ್‌ಗಳಲ್ಲಿ ಸಾಗುತ್ತಿದ್ದಾರೆ. ಕೆಲವು ವಾರ್ಡ್‌ಗಳಲ್ಲಿ 200ರಿಂದ 300 ಧ್ವಜಗಳು ಕೆಲವೇ ಕೆಲವು ಗಂಟೆಗಳಲ್ಲೇ ಮಾರಾಟವಾಗುತ್ತಿರುವುದು ಕಂಡು ಬಂದಿದೆ.



ಬಾವುಟ ಖರೀದಿಸಿದವರಿಗೆ ಪಾಲಿಕೆ ನೀಡಿರುವ ರಶೀದಿ.

2–3 ಧ್ವಜ ತೆಗೆದುಕೊಳ್ಳುತ್ತಿದ್ದಾರೆ: ಮೈಸೂರಿನ ಜೆಪಿ ನಗರದ 'ಎ' ಬ್ಲಾಕ್‌ನಲ್ಲಿ ಇಂದು ಧ್ವಜ ಮಾರಾಟದ ಉಸ್ತುವಾರಿ ವಹಿಸಿದ್ದ ಪಾಲಿಕೆ ಸಿಬ್ಬಂದಿ ಮುರುಗೇಶ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ತ್ರಿವರ್ಣ ಧ್ವಜ ಮಾರಾಟ ಮಾಡುವುದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಯಾರು ಕೂಡ ದರದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಕೆಲವರು ಸ್ವಯಂಪ್ರೇರಣೆಯಿಂದ ಬಾವುಟ ಖರೀದಿಸುತ್ತಿದ್ದಾರೆ. ಕೆಲವರು 2–3 ಬಾವುಟ ಖರೀದಿಸುತ್ತಿದ್ದಾರೆ. ಧ್ವಜ ಮಾರಾಟ ಮಾಡುತ್ತಿರುವುದಕ್ಕೆ ಖುಷಿಯಾಗುತ್ತಿದೆ.

2 ದಿನದಲ್ಲಿ 30 ಸಾವಿರ ಮಾರಾಟ

"ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 3ಕ್ಕೆ 30 ಸಾವಿರ ಬಾವುಟ ನೀಡಲಾಗಿತ್ತು. ನಮ್ಮ ವಲಯ ವ್ಯಾಪ್ತಿಗೆ ಬರುವ ಶಾರದಾದೇವಿನಗರ, ಕುವೆಂಪುನಗರ, ಬೋಗಾದಿ, ದಟ್ಟಗಳ್ಳಿ, ರಾಮಕೃಷ್ಣನಗರ, ಟಿ.ಕೆ.ಲೇಔಟ್ ಬಡಾವಣೆಗಳ ವ್ಯಾಪ್ತಿಯಲ್ಲಿರುವ 8 ವಾರ್ಡ್‌ಗಳಲ್ಲಿರುವ ಮನೆ, ಶಾಲೆ ಹಾಗೂ ಕಚೇರಿಗಳಿಗೆ ಎರಡು ದಿನದಲ್ಲಿ 30 ಸಾವಿರ ಬಾವುಟ ಮಾರಾಟ ಮಾಡಲಾಗಿದೆ. ಅಲ್ಲದೇ, ತ್ರಿವರ್ಣ ಧ್ವಜ ಹಾರಿಸುವ ಬಗ್ಗೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.


–ಪ್ರಕಾಶ್ ಬಿ.ಎಂ, ವಲಯ 3ರ ಆಯುಕ್ತರು


ಪಾಲಿಕೆ ವ್ಯಾಪ್ತಿಯಲ್ಲಿ 1.50 ಲಕ್ಷ ಬಾವುಟ ಮನೆ ಮನೆಗೂ ಮಾರಾಟ ಮಾಡಲಾಗಿದೆ

"ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಎಸ್‌ಓಪಿಯಂತೆ 25 ರೂ. ದರ ನಿಗದಿ ಮಾಡಲಾಗಿದೆ. ಜಿಲ್ಲಾಡಳಿತದ ವತಿಯಿಂದ ನೀಡಲಾಗಿದ್ದ 1.50 ಲಕ್ಷ ಧ್ವಜವನ್ನು ಪಾಲಿಕೆಯ ಎಲ್ಲಾ ವಲಯ ಕಚೇರಿಗಳಿಗೂ ಹಂಚಿಕೆ ಮಾಡಲಾಗಿದೆ. ಪಾಲಿಕೆ ವತಿಯಿಂದಲೇ ರಶೀದಿಯ ಪುಸ್ತಕ ಮುದ್ರಿಸಿ ನೀಡಲಾಗಿದ್ದು, ಜನತೆ ಬಾವುಟ ಖರೀದಿಸಿ, ರಶೀದಿ ಪಡೆಯುತ್ತಿದ್ದಾರೆ. ಇದರಿಂದ ಜನರು ಆಸಕ್ತಿಯಿಂದ ಬಾವುಟ ಖರೀದಿಸುತ್ತಿದ್ದಾರೆ.

–ರೂಪ, ಎಡಿಸಿ, ಮೈಸೂರು ನಗರ ಪಾಲಿಕೆ

ಅಭಿಮನ್ಯು ನಾಯಕನಾದರೂ ಅರ್ಜುನ ಬಲು ಭಾರ!





ಮೈಸೂರು, ಆ.11(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಶಿಬಿರಗಳಿಂದ ಅರಮನೆಯ ಅಂಗಳಕ್ಕೆ ಬಂದು ಬೀಡುಬಿಟ್ಟಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಎಲ್ಲಾ 9 ಆನೆಗಳನ್ನು ಗುರುವಾರ ತೂಕ ಮಾಡಿಸಲಾಯಿತು.

ಅರಮನೆ ಆವರಣದಿಂದ ಬೆಳಗ್ಗೆ 7.45ಕ್ಕೆ ಬಲರಾಮ ದ್ವಾರದಿಂದ ಸಾಲಾಗಿ ಹೊರ ಬಂದ ಗಜಪಡೆ ಕೆ.ಆರ್. ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕೋ. ತೂಕದ ಕೇಂದ್ರಕ್ಕೆ ಕರೆತರಲಾಯಿತು. ಬಳಿಕ ಅಲ್ಲಿ ಎಲ್ಲಾ ಆನೆಗಳಿಗೂ ತೂಕ ಮಾಡಿಸಿ, ದಾಖಲೀಕರಿಸಿದ ಬಳಿಕ ದಿವಾನ್ಸ್ ರಸ್ತೆ, ಇರ್ವಿನ್ ರಸ್ತೆ ಮೂಲಕ ಸಾಗಿ ಕೆ.ಆರ್.ಆಸ್ಪತ್ರೆಯ ವೃತ್ತ ತಲುಪಿತು. ಬಳಿಕ ಮತ್ತೆ ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತದ ಮೂಲಕ ಅರಮನೆಗೆ ವಾಪಸ್ಸಾದವು.

ಅರ್ಜುನನೇ ಮುಂದು: ಗಜಪಡೆಯ ಹಿರಿಯ ಸದಸ್ಯನಾದ 63 ವರ್ಷ ವಯಸ್ಸಿನ ಅರ್ಜುನ ಬರೋಬ್ಬರಿ 5,725 ಕೆ.ಜಿ ತೂಗಿದ್ದಾನೆ. ನಂತರದ ಸ್ಥಾನದಲ್ಲಿ 39 ವರ್ಷ ವಯಸ್ಸಿನ ಗೋಪಾಲಸ್ವಾಮಿ 5,240 ಕೆ.ಜಿ ಮತ್ತು ದುಬಾರೆ ಶಿಬಿರದಿಂದ ಬಂದಿರುವ ಧನಂಜಯ 4,800 ಕೆ.ಜಿ ಭಾರ ಇದ್ದಾನೆ. 57 ವರ್ಷದ ಅಂಬಾರಿ ಆನೆ ಅಭಿಮನ್ಯು 4,770 ಕೆ.ಜಿ ಭಾರವಿದ್ದು, ಕಳೆದ ವರ್ಷಕ್ಕಿಂತಲೂ 50 ಕೆ.ಜಿ ದೇಹ ತೂಕವನ್ನು ವೃದ್ಧಿಸಿಕೊಂಡಿದ್ದಾನೆ. ಇದೇ ಮೊದಲ ಸಲ ದಸರೆಯಲ್ಲಿ ಪಾಲ್ಗೊಂಡಿರುವ 39 ವರ್ಷ ವಯಸ್ಸಿನ ಮಹೇಂದ್ರ 4,260 ಕೆ.ಜಿ., 2017ರ ನಂತರ ದಸರೆಗೆ ಬಂದಿರುವ 22 ವರ್ಷದ ಭೀಮ 3,950 ಕೆ.ಜಿ ದೇಹ ತೂಕ ಹೊಂದಿದ್ದಾನೆ. ಹೆಣ್ಣಾನೆಗಳಲ್ಲಿ ಕಾವೇರಿ 3,110, ಚೈತ್ರಾ 3,050 ಹಾಗೂ ಲಕ್ಷ್ಮೀ 2,920 ಕೆ.ಜಿ. ತೂಕ ಹೊಂದಿದೆ.

ಭರವಸೆ ಮೂಡಿಸಿದ ಹೊಸ ಆನೆ ಮಹೇಂದ್ರ: ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಮಹೇಂದ್ರ ಇಂದು ತೂಕ ಮಾಡಿಸಲು ಅರಮನೆಯಿಂದ ಕರೆತಂದು ರಸ್ತೆಯಲ್ಲಿ ನಡೆಸಿಕೊಂಡು ಹೋಗುವ ವೇಳೆ ವಾಹನಗಳ ಶಬ್ದಕ್ಕೆ ಹೆದರದೇ ಭರವಸೆ ಮೂಡಿಸಿತು. ಸಾಮಾನ್ಯವಾಗಿ ಹೊಸದಾಗಿ ಬರುವ ಆನೆಗಳು ವಾಹನ ಶಬ್ದ ಹಾಗೂ ನಗರದ ವಾತಾವರಣ ಕಂಡು ಹಿಂದೇಟು ಹಾಕುವಂತೆ ವರ್ತಿಸುತ್ತವೆ. ಆದರೆ ಮಹೇಂದ್ರ ಮಾತ್ರ ಅಳುಕಿಲ್ಲದೇ ಸಾಗುವ ಮೂಲಕ ಗಮನ ಸೆಳೆಯಿತು.

ಆ.14ರಿಂದ ತಾಲೀಮು: ಗಜಪಡೆಗೆ ಶುಕ್ರವಾರದಿಂದ (ಆ.12) ಅರಮನೆ ಆವರಣದಲ್ಲೇ ತಾಲೀಮು ಆರಂಭಿಸಲಾಗುತ್ತದೆ. ಎರಡು ದಿನಗಳ ಕಾಲ ಅರಮನೆ ಆವರಣದಲ್ಲೇ ಪ್ರತಿದಿನ ಬೆಳಗ್ಗೆ ಹಾಗೂ ಸಂಜೆ ವೇಳೆ ತಲಾ ಮೂರು ವರೆ ಕಿ.ಮಿ ದೂರ ನಡೆಸಿ ತಾಲೀಮು ನಡೆಸಲಾಗುತ್ತದೆ. ಆ.14ರಂದು ಬೆಳಗ್ಗೆ 7 ಗಂಟೆ ದಸರಾ ಗಜಪಡೆಯನ್ನು ಅರಮನೆಯಿಂದ ಹೊರಗೆ ಕರೆತಂದು ತಾಲೀಮು ಆರಂಭಿಸಲಾಗುತ್ತದೆ. ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಕೆಲವು ದಿನ ತಾಲೀಮು ನಡೆಸಿ ಆ ನಂತರ ಹಂತಹಂತವಾಗಿ ಭಾರ ಹೊರುವ ತಾಲೀಮು ಆರಂಭಿಸಲಾಗುತ್ತದೆ. ಈ ಸಂದರ್ಭದಲ್ಲಿ ಆರ್‌ಎಫ್‌ಓ ಸಂತೋಷ್‌ಕುಮಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಆನೆಗಳಿಗೆ ವಿಶೇಷ ಆಹಾರ

ಆನೆಗಳಿಗೆ ವಿಶೇಷ ಆಹಾರ ನೀಡಲಾಗುತ್ತದೆ. ಮೊಳಕೆ ಕಾಳು, ಭತ್ತ, ಬೆಲ್ಲ, ಬೆಣ್ಣೆ ವಿವಿಧ ಬಗೆಯ ಸೊಪ್ಪುಗಳ ಜತೆಗೆ ಕೊಬ್ಬರಿ, ತೆಂಗಿನಕಾಯಿಯನ್ನು ನಿತ್ಯ ಬೆಳಗ್ಗೆ ಮತ್ತು ಸಂಜೆ ಎರಡು ಸಲ ನೀಡಲಾಗುತ್ತದೆ. ಅದರಲ್ಲೂ ಅಂಬಾರಿ ಹೊರುವ ಅಭಿಮನ್ಯುವಿಗೆ ವಿಶೇಷ ಆಹಾರದ ಜತೆಗೆ ಹೆಚ್ಚಿನ ಬೆಣ್ಣೆ, ಬೆಲ್ಲ ಹಾಗೂ ಕೊಬ್ಬರಿ, ಕಬ್ಬು ನೀಡಿ ಜಂಬೂ ಸವಾರಿಯ ವೇಳೆಗೆ ಮತ್ತಷ್ಟು ಬಲಶಾಲಿಯಾಗಿ ಮಾಡಲಾಗುತ್ತದೆ. ತಾಲೀಮು ಮುಗಿಸಿಕೊಂಡು ಬಂದ ಬಳಿಕ ಇವುಗಳಿಗೆ ಊಟ ನೀಡಲಾಗುತ್ತದೆ.

ಆನೆಗಳ ಆರೋಗ್ಯ ಕಾಪಾಡಲು ಕ್ರಮ

"ಜಂಬೂ ಸವಾರಿ ಮೆರವಣಿಗೆಯ ಪ್ರಮುಖ ಆಕರ್ಷಣೆಯಾದ ಗಜಪಡೆಯ ಆರೋಗ್ಯದ ಮೇಲೆ ನಿಗಾ ಇಡಲಾಗುತ್ತದೆ. ಅದಕ್ಕಾಗಿ ಅವುಗಳ ಆರೈಕೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಪೌಷ್ಟಿಕ ಆಹಾರ ನೀಡುವುದರೊಂದಿಗೆ ಸಮರ್ಪಕ ಆಹಾರ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ದಸರಾ ಮುಗಿದ ಬಳಿಕ ಕಾಡಿಗೆ ಆನೆಗಳನ್ನು ಕಳುಹಿಸುವ ಮುನ್ನವೂ ಮತ್ತೊಮ್ಮೆ ದೇಹ ತೂಕ ಪರೀಕ್ಷೆ ನಡೆಸಲಾಗುತ್ತದೆ. ಜಂಬೂಸವಾರಿ ವೇಳೆಗೆ ಒಂದೊಂದು ಆನೆ 200ರಿಂದ 500 ಕೆಜಿ ತೂಕ ಹೆಚ್ಚಿಸಿಕೊಳ್ಳುತ್ತವೆ. ನಮ್ಮ ಉದ್ದೇಶ ತೂಕ ಹೆಚ್ಚಿಸುವುದಲ್ಲ, ಆದರೆ ಆನೆಗಳ ಶಕ್ತಿ ವೃದ್ಧಿಸುವಿಕೆ ಹಾಗೂ ಅವುಗಳ ಆರೋಗ್ಯ ಕಾಪಾಡುವುದೇ ಆಗಿದೆ. ದಸರಾ ವೇಳೆಗೆ ಎಲ್ಲಾ ಆನೆಗಳ ಶಕ್ತಿ ವೃದ್ಧಿಸಿಕೊಳ್ಳುತ್ತವೆ. ಗಜಪಡೆಯಲ್ಲಿರುವ ಎಲ್ಲಾ ಆನೆಗಳು ಫಿಟ್ ಆಗಿವೆ.

–ಡಾ. ವಿ.ಕರಿಕಾಳನ್,
ಡಿಸಿಎಫ್ ಮೈಸೂರು ವನ್ಯಜೀವಿ ವಿಭಾಗ

ರಕ್ಷಾ ಬಂಧನ ಆಚರಿಸಿದ ಪ್ರಧಾನಿ ಮೋದಿ

ನವದೆಹಲಿ, ಆ.11– ಪ್ರಧಾನ ಮಂತ್ರಿ ಕಚೇರಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಸಣ್ಣ ಪುತ್ರಿಯರಿಂದ ರಾಖಿ ಕಟ್ಟಿಸಿಕೊಳ್ಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ತಮ್ಮ ನಿವಾಸದಲ್ಲಿ ರಕ್ಷಾ ಬಂಧನ ಆಚರಿಸಿದ್ದಾರೆ. ರಕ್ಷಾ ಬಂಧನ ಆಚರಣೆಯಲ್ಲಿ ಭಾಗವಹಿಸಿದವರಲ್ಲಿ ಪ್ರಧಾನ ಮಂತ್ರಿ ಕಚೇರಿಯಲ್ಲಿ ಕೆಲಸ ಮಾಡುವ ಸ್ವಚ್ಛಗೊಳಿಸುವವರು, ಜವಾನರು, ಗಾರ್ಡನ್ ನೋಡಿಕೊಳ್ಳುವವರು, ಚಾಲಕರು ಮತ್ತು ಇತರರ ಪುಟ್ಟ ಹೆಣ್ಣುಮಕ್ಕಳು ಸೇರಿ ರಕ್ಷಾ ಬಂಧನ ಆಚರಿಸಿದ್ದಾರೆ.



ಸಂಭ್ರಮಾಚರಣೆ ಮತ್ತು ಪುಟಾಣಿ ಮಕ್ಕಳೊಂದಿಗೆ ಪ್ರಧಾನಿಯವರು ಸಂವಾದ ನಡೆಸುತ್ತಿರುವ ವಿಡಿಯೋವನ್ನು ಅಧಿಕಾರಿಗಳು ಹಂಚಿಕೊಂಡಿದ್ದಾರೆ. ಅಲ್ಲದೆ, ಮೋದಿ ಮಕ್ಕಳೊಂದಿಗೆ ತೆಗೆಸಿಕೊಂಡಿರುವ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಇದಕ್ಕೂ ಮುನ್ನ ಮೋದಿ, ಎಲ್ಲರಿಗೂ ರಕ್ಷಾ ಬಂಧನದ ಶುಭಾಶಯ ಕೋರಿದ್ದರು. 'ರಕ್ಷಾ ಬಂಧನದ ವಿಶೇಷ ಸಂದರ್ಭದಲ್ಲಿ ಎಲ್ಲರಿಗೂ ಶುಭಾಶಯಗಳು' ಎಂದು ಟ್ವೀಟ್ ಮಾಡಿದ್ದರು.

ನಾಳೆಯಿಂದ ಮೈಸೂರಲ್ಲಿ ಭರತರಂಗ–22 ನಾಟಕೋತ್ಸವ

ಮೈಸೂರು,ಆ.11(ಪಿಎಂ)–ರಂಗಯಾನ ಟ್ರಸ್ಟ್ ಮೈಸೂರು ವತಿಯಿಂದ ರಂಗಗೀತೆಗಳು, ನಾಟಕಗಳು, ಜಾನಪದ ನೃತ್ಯ ಹಾಗೂ ನೃತ್ಯ ರೂಪಕ ಒಳಗೊಂಡ 'ಭರತರಂಗ–22' ನಾಟಕೋತ್ಸವ ಆ.13ರಿಂದ 15ರವರೆಗೆ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ವಿಕಾಸ್‌ಚಂದ್ರ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ನಾಟಕೋತ್ಸವ ನಡೆಯಲಿದೆ. ಪ್ರತಿದಿನ ಸಂಜೆ 6ಕ್ಕೆ ವಿವಿಧ ಕಲಾ ಪ್ರಕಾರಗಳ ಪ್ರದರ್ಶನ ಇರಲಿದ್ದು, ಬಳಿಕ ಸಂಜೆ 7ಕ್ಕೆ ನಾಟಕ ಪ್ರದರ್ಶನ ನಡೆಯಲಿದೆ. ಪ್ರದರ್ಶನಗಳನ್ನು ವೀಕ್ಷಿಸಲು 100 ರೂ.ಗಳ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಆ.13ರಂದು ಸಂಜೆ 6.30ಕ್ಕೆ ನಾಟಕೋತ್ಸವದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ರಂಗಕರ್ಮಿಗಳಾದ ರಾಜಶೇಖರ ಕದಂಬ, ಸುರೇಶ್‌ಬಾಬು, ದೀಪಕ್ ಮೈಸೂರು, ಪ್ರಸಾದ್ ಕುಂದೂರು, ಕೃಷ್ಣ ಜನಮನ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಬಳಿಕ ಜಾನಪದ ನೃತ್ಯ ಹಾಗೂ ರಂಗಗೀತೆಗಳ ಕಾರ್ಯಕ್ರಮ ನಡೆಯಲಿದ್ದು, ಇದಾದ ನಂತರ ಸಂಜೆ 7ಕ್ಕೆ ಮಹಿಳಾ ಪ್ರಧಾನ ಏಕವ್ಯಕ್ತಿ ನಾಟಕ 'ಉಧೋ ಉಧೋ ಎಲ್ಲವ್ವ' ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು. ಅಂತೆಯೇ ಆ.14ರಂದು ಸಂಜೆ 6ಕ್ಕೆ ಜಾನಪದ ನೃತ್ಯ, 6.30ಕ್ಕೆ ಸೂಫಿ ಗೀತಗಾಯನ, 7ಕ್ಕೆ 'ವಿಶ್ವಾಮಿತ್ರ ಮತ್ತು ಮೇನಕೆ ಡ್ಯಾನ್ಸ್ ಮಾಡೋದು ಏನಕೆ? ಆಸ್ಕ್ ಮಿಸ್ಟರ್ ವೈಎನ್‌ಕೆ' ನಾಟಕ ಪ್ರದರ್ಶನ ನಡೆಯಲಿದೆ. ಆ.15ರಂದು ಸಂಜೆ 6ಕ್ಕೆ ಸೋದೇದಿಮ್ಮಿ ಬುಡಕಟ್ಟು ನೃತ್ಯ, 6.30ಕ್ಕೆ ನೃತ್ಯರೂಪಕ ಪ್ರದರ್ಶನ ಇರಲಿದೆ. ಸಂಜೆ 7ಕ್ಕೆ 'ಸೋಲಿಗರ ಬಾಲೆ' ನಾಟಕ ಪ್ರದರ್ಶನ ನಡೆಯಲಿದೆ. ಇದಕ್ಕೂ ಮುನ್ನ ನಡೆಯುವ ಸಮಾರೋಪ ಸಮಾರಂಭದಲ್ಲಿ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಅರಗು ಮತ್ತು ಬಣ್ಣ ಕಾರ್ಖಾನೆ ಮಾಜಿ ಅಧ್ಯಕ್ಷ ಎನ್.ವಿ.ಫಣೀಶ್ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ನೆರೆ ರಾಜ್ಯದಲ್ಲಿ ಕನ್ನಡದ ಸೇವೆಗೈಯುತ್ತಿರುವ ಹೈದರಾಬಾದ್‌ನ ಕರ್ನಾಟಕ ಸಾಹಿತ್ಯ ಮಂದಿರದ ಅಧ್ಯಕ್ಷ ವಿಠ್ಠಲಜೋಷಿ ಅವರಿಗೆ 'ಭರತರಂಗ' ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು. ನಾಟಕ ನಿರ್ದೇಶಕ ಉದಯ್ ನುಸ್ರತ್ ಸಾಬ್ರಿ, ಟ್ರಸ್ಟ್‌ನ ಕಲಾವಿದರಾದ ಅರುಣಾ ಕುಮಾರಿ, ತ್ಯಾಗರಾಜ ದೇವರಹಳ್ಳಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಇಂದು ಭಾರತ ಸೇವಾ ದಳದ ರೂವಾರಿ ರಾಮರಾವ್ ಐಎನ್‌ಎ ಅವರ ಸಂಸ್ಮರಣೆ

ಮೈಸೂರು, ಆ.11–ಭಾರತ ಸೇವಾ ದಳ ರಾಜ್ಯ ಮಟ್ಟದ ಅಭಿಮಾನಿ ಬಳಗ, ಶೇಷಾದ್ರಿಪುರಂ ಡಿಗ್ರಿ ಕಾಲೇಜು, ಗಾಂಧಿ ಅಧ್ಯಯನ ಕೇಂದ್ರ, ಎನ್‌ಸಿಸಿ, ಎನ್‌ಎಸ್‌ಎಸ್ ಸಂಯುಕ್ತಾಶ್ರಯದಲ್ಲಿ ನಾಳೆ (ಆ.12) ಬೆಳಗ್ಗೆ 9 ಗಂಟೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಕ್ವಿಟ್ ಇಂಡಿಯಾ ಚಳವಳಿಯ 80ನೇ ವರ್ಷಾಚರಣೆ ಮತ್ತು ಭಾರತ ಸೇವಾ ದಳದ ಹಿರಿಯ ನೇತಾರ ರಾಮರಾವ್ ಐಎನ್‌ಎ ಸಂಸ್ಮರಣೆ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9 ಗಂಟೆಗೆ ರಾಮಲಿಂಗೇಶ್ವರ ದೇವಸ್ಥಾನ ಉದ್ಯಾನವನದಿಂದ ಹೊರಡುವ ಪ್ರಭಾತ್ ಫೇರಿ ಮೆರವಣಿಗೆ ಶಾರದಾನಿಕೇತನ ಭವನದವರೆಗೆ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಎಸ್.ಎ.ರಾಮದಾಸ್ ವಹಿಸಲಿದ್ದು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಪ್ರಭಾತ್ ಫೇರಿ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ರಾಮರಾವ್ ಐಎನ್‌ಎ ಅವರ ಧರ್ಮಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಮ್ಮ ಅವರಿಗೆ ಗೌರವ ಸಮರ್ಪಣೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ನಾಯಕರು ರಾಜಕೀಯ ನಿರುದ್ಯೋಗಿಗಳು: ಪ್ರತಿದಿನ ಸುದ್ದಿಯಲ್ಲಿರಲು ಸಿಎಂ ಬದಲಾವಣೆ ಹೇಳಿಕೆ ನೀಡುತ್ತಿದ್ದಾರೆ



ಬೆಂಗಳೂರು, ಆ.11(ಕೆಎಂಶಿ)–ಕಾಂಗ್ರೆಸ್ ನಾಯಕರು ರಾಜಕೀಯ ನಿರುದ್ಯೋಗಿಗಳಾಗಿರುವುದರಿಂದ ಸಿಎಂ ಬದಲಾವಣೆ ಬಗ್ಗೆ ಮಾತನಾಡುತ್ತಿದ್ದಾರೆ. ಪ್ರತಿದಿನ ಸುದ್ದಿಯಲ್ಲಿರಲು ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರ ಅಜ್ಞಾನಕ್ಕೆ ನಗಬೇಕಷ್ಟೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಕಾಂಗ್ರೆಸ್‌ನವರು ರಾಜಕೀಯವಾಗಿ ಕ್ರಿಯಾಶೀಲರಾಗಿರಲು ಈ ರೀತಿಯ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಮಾಜಿ ಶಾಸಕರು ಈ ಹೇಳಿಕೆ ನೀಡಿದ್ದರೆ, ಅದಕ್ಕೆ ಅವರೇ ಜವಾಬ್ದಾರಿಯುತರಾಗುತ್ತಾರೆಯೇ ಹೊರತು, ಅದಕ್ಕೆ ಪಕ್ಷವನ್ನು ಹೊಣೆಯಾಗಿಸಲು ಸಾಧ್ಯವಿಲ್ಲ. ಮುಂದಿನ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಬೊಮ್ಮಾಯಿ ಅವರ ನೇತೃತ್ವದಲ್ಲೇ ಎದುರಿಸಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಹಿರಿಯರು ಹೇಳಿದ್ದಾರೆ. ಹೀಗಾಗಿ ಈ ಬಗ್ಗೆ ಯಾವುದೇ ಗೊಂದಲ ಇಲ್ಲ ಎಂದು ಸ್ಪಷ್ಟಪಡಿಸಿದರು. ಬೊಮ್ಮಾಯಿ ಅವರು ಅತೀ ಕಡಿಮೆ ಅವಧಿಯಲ್ಲಿ ರೈತರು, ಮಹಿಳೆಯರು, ಯುವಜನರಿಗೆ ಉತ್ತಮ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಡಳಿತವನ್ನು ಉತ್ತಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಕೇಂದ್ರ ನಾಯಕರ ಜೊತೆಗೆ ಉತ್ತಮ ಸಂಬಂಧ ಇರಿಸಿಕೊಳ್ಳಲು ಅವರು ಆಗಾಗ್ಗೆ ದೆಹಲಿಗೆ ಹೋಗುತ್ತಾರೆ. ಇದು ಸಹಜ ವಿಚಾರ ಎಂದರು.

ಕಾಂಗ್ರೆಸ್ ಡಬಲ್ ಡೋರ್ ಬಸ್: ಕಾಂಗ್ರೆಸ್ ಈಗ ಡಬಲ್ ಡೋರ್ ಬಸ್‌ನಲ್ಲಿದೆ. ಈ ಬಸ್‌ನಿಂದ ಯಾರನ್ನು ಮೊದಲು ಇಳಿಸುತ್ತಾರೋ ಗೊತ್ತಿಲ್ಲ. ಈ ಬಸ್‌ಗೆ ಎರಡು ಸ್ಟೇರಿಂಗ್ ಇದ್ದು, ಒಬ್ಬರು ಒಂದು ಕಡೆ ತಿರುಗಿಸಿದರೆ, ಮತ್ತೊಬ್ಬರು ಇನ್ನೊಂದು ಕಡೆಗೆ ತಿರುಗಿಸುತ್ತಿದ್ದಾರೆ. ಈ ಬಸ್ ಯಾವ ಕಡೆಗೆ ಹೋಗುವುದೋ ಗೊತ್ತಿಲ್ಲ ಎಂದು ಸಚಿವ ಡಾ.ಕೆ.ಸುಧಾಕರ್ ವ್ಯಂಗ್ಯವಾಡಿದರು.

ಬಾಯಿ ಮುಚ್ಚಿಕೊಂಡಿದ್ರೆ ಸರಿ, ನಿನ್ನ ಕಥೆ ಎಲ್ಲ ಹೇಳಬೇಕಾಗುತ್ತೆ...!



ಚಿಕ್ಕಬಳ್ಳಾಪುರ: ಸುಧಾಕರ್ ಬಾಯಿ ಮುಚ್ಚಿಕೊಂಡಿದ್ದರೆ ಸರಿ. ಇಲ್ಲ ಅಂದರೆ ನಿನ್ನ ಎಲ್ಲಾ ಕಥೆ ಬಿಚ್ಚಿಡಬೇಕಾಗುತ್ತದೆ ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್‌ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾರ್ನಿಂಗ್ ನೀಡಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸುಧಾಕರ್ ಹಿಂದೆ ಎಲ್ಲಿದ್ರು, ಯಾವ ಪಕ್ಷದಲ್ಲಿದ್ರು, ಸುಧಾಕರ್‌ಗೆ ಟಿಕೆಟ್ ಕೊಟ್ಟಿದ್ದು ಯಾರು ಗೊತ್ತಾ. ಟಿಕೆಟ್ ಕೊಡಿಸಿದ್ದು ನಾನು. ಬಾಯಿ ಮುಚ್ಚಿಕೊಂಡು ಇರು. ಇಲ್ಲ ಅಂದರೆ ನಿನ್ನ ಎಲ್ಲಾ ಕಥೆ ಹೇಳಬೇಕಾಗುತ್ತದೆ. ಟಿಕೆಟ್ ಕೊಡಿಸಿ ನಾನೇ ತಪ್ಪು ಮಾಡಿಬಿಟ್ಟಿದ್ದೇನೆ. ಈಗ ಏನು ಹೇಳುವುದು ಬೇಡ. ಬಾಯಿ ಮುಚ್ಚಿಕೊಂಡಿದ್ದರೆ, ನಾನು ಏನೂ ಹೇಳಲ್ಲ. ಈ ಬಾರಿ ಸುಧಾಕರ್ ವಿರುದ್ಧ ಪ್ರಬಲ ಅಭ್ಯರ್ಥಿ ಹಾಕುತ್ತೇವೆ. ಮುಂದಿನ ಚುನಾವಣೆಯಲ್ಲಿ ಸೋಲಿಸುತ್ತೇವೆ ಎಂದಿದ್ದಾರೆ. ಎಸಿಬಿಯಲ್ಲಿನ ಪ್ರಕರಣಗಳನ್ನು ಲೋಕಾಯುಕ್ತ ವರ್ಗಾವಣೆ ಮಾಡಿ ಎಸಿಬಿಯನ್ನು ಲೋಕಾಯುಕ್ತ ವ್ಯಾಪ್ತಿಗೆ ತರುವಂತೆ ಆದೇಶ ಮಾಡಿರುವ ಹೈಕೋರ್ಟ್‌ನ ಆದೇಶವನ್ನು ಗೌರವಿಸುತ್ತೇನೆ. ಪೂರ್ಣ ಪ್ರಮಾಣದ ಆದೇಶ ನೋಡಿದ ಮೇಲೆ ಮತ್ತೆ ಮರು ಪ್ರತಿಕ್ರಿಯಿಸುವೆ. ಎಸಿಬಿ ಸ್ವತಂತ್ರ ತನಿಖಾ ಸಂಸ್ಥೆ. ನಮ್ಮ ರಾಜ್ಯದಲ್ಲಿ ಮಾತ್ರ ಎಸಿಬಿ ಇರಲಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಎಸಿಬಿ ಇದೆ ಎಂದು ತಿಳಿಸಿದ್ದಾರೆ.



ಮೈಸೂರಿನ ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ರಕ್ಷಾ ಬಂಧನ ಆಚರಿಸಲಾಯಿತು. ವಿದ್ಯಾರ್ಥಿ–ವಿದ್ಯಾರ್ಥಿನಿಯರು ರಾಖಿ ಕಟ್ಟುವ ಸಡಗರದಲ್ಲಿ ಪಾಲ್ಗೊಂಡು ಸಹೋದರ ಸಂಬಂಧ ಮಹತ್ವ ಸಾರುವ ರಕ್ಷಾ ಬಂಧನದ ವಿಶೇಷ ಅರಿತುಕೊಂಡರು.



ಮೈಸೂರಲ್ಲಿ ರಕ್ಷಾ ಬಂಧನ ಹಬ್ಬ ಆಚರಿಸಲಾಯಿತು. ಸಹೋದರಿಯರು ತಮ್ಮ ಸಹೋದರರಿಗೆ ರಕ್ಷೆಯನ್ನು ಕಟ್ಟುವ ಮೂಲಕ ಶುಭ ಕೋರಿದರು.

ಇಂದು ಮೈಸೂರಲ್ಲಿ ಸಂಸ್ಕೃತೋತ್ಸವ

ಮೈಸೂರು, ಆ.11–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನಲ್ಲಿ ನಾಳೆ(ಆ.12) ಮಧ್ಯಾಹ್ನ 3 ಗಂಟೆಗೆ ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ವಹಿಸಲಿದ್ದು, ವಿದ್ವಾನ್ ಟಿ.ಎನ್. ಪ್ರಭಾಕರ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಜೆಎಸ್‌ಎಸ್ ಪದವಿ ಕಾಲೇಜು ಪ್ರಾಂಶುಪಾಲ ಪ್ರೊ. ವಿಜಯೇಂದ್ರ ಕುಮಾರ್ ಮತ್ತು ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಸ್.ಸೋಮಶೇಖರ್ ಉಪಸ್ಥಿತರಿರುವರು.

ತಿರಂಗ ಅಭಿಯಾನ: ಮೈಸೂರಲ್ಲಿ ಸೈಕಲ್ ರ್ಯಾಲಿ



ಮೈಸೂರು,ಆ.11(ಎಸ್‌ಬಿಡಿ)–ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ಪ್ರತಿ ಮನೆಯಲ್ಲೂ ತಿರಂಗ' ಅಭಿಯಾನಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಬಿಜೆಪಿ ಮೈಸೂರು ನಗರ ಓಬಿಸಿ ಮೋರ್ಚಾ ವತಿಯಿಂದ ಗುರುವಾರ ಸೈಕಲ್ ಜಾಥಾ ನಡೆಸಿ, ತ್ರಿವರ್ಣ ಧ್ವಜ ಹಾರಿಸುವ ಪ್ರತಿಜ್ಞೆ ಸ್ವೀಕರಿಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಸೈಕಲ್ ಜಾಥಾಗೆ ಚಾಲನೆ ನೀಡಿದರು. ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಟ್ರಿನ್ ಟ್ರಿನ್ ಸೈಕಲ್ ಏರಿ, ಚಾಮರಾಜ ಜೋಡಿ ರಸ್ತೆ, ತಾತಯ್ಯ ವೃತ್ತ, ನಾರಾಯಣಶಾಸ್ತ್ರಿ ರಸ್ತೆ, ಸಿದ್ಧಪ್ಪ ವೃತ್ತ, ಆರ್‌ಟಿಓ ವೃತ್ತ, ಅಶೋಕ ವೃತ್ತ(ಬಲ್ಲಾಳ್ ಸರ್ಕಲ್), ಕಾಂತರಾಜ ಅರಸ್ ರಸ್ತೆ ಮೂಲಕ ಸವಾರಿ ನಡೆಸಿ, ನ್ಯಾಯಾಲಯದ ಮುಂಭಾಗದಲ್ಲಿರುವ ಮಹಾತ್ಮ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಇದೇ ವೇಳೆ ಸ್ವಾತಂತ್ರ್ಯೋತ್ಸವ ದಿನದಂದು ನಮ್ಮ ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸುತ್ತೇವೆಂದು ಪ್ರತಿಜ್ಞೆ ಮಾಡಿದರು. ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ನಗರ ಮಾಧ್ಯಮ ವಕ್ತಾರ ಮೋಹನ್, ಮಾಧ್ಯಮ ಸಹ ವಕ್ತಾರ ಕೇಬಲ್ ಮಹೇಶ್, ಓಬಿಸಿ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು, ಪಾಲಿಕೆ ಸದಸ್ಯ ಕೆ.ಜೆ.ರಮೇಶ್, ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷ ಬಿ.ಎಂ.ರಘು, ಮುಖಂಡರಾದ ಮಣಿರತ್ನಂ, ಸೋಮಸುಂದರ, ಗೋಪಾಲ, ಮಂಜುನಾಥ್, ಸೂರಜ್, ಕೃಷ್ಣಮೂರ್ತಿ, ಶಿವಪ್ಪ, ಶಿವಲಿಂಗೇಗೌಡ, ರಾಚಪ್ಪಾಜಿ, ದೇವರಾಜ ಗೌಡ, ಮಂಜುನಾಥ ಮತ್ತಿತರರು ಸೈಕಲ್ ಜಾಥಾದಲ್ಲಿ ಭಾಗಿಯಾಗಿದ್ದರು. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಸಂತಾ : ಏನಯ್ಯಾ ವಿಸ್ಕೀನ ಪೈಪ್ ಹಾಕ್ಕೊಂಡು ಕುಡೀತಾ ಇದ್ದೀಯಲ್ಲ ಯಾಕೆ?

ಬಂತಾ : ಹೌದು ಕಣೋ. ವಿಸ್ಕೀನ ಕೈಯಿಂದ ಮುಟ್ಟೋದಿಲ್ಲ ಅಂತ ನನ್ನ ಹೆಂಡತಿಗೆ ಮಾತು ಕೊಟ್ಟಿದ್ದೇನೆ.

ಮೈಸೂರು ಮಿತ್ರ

ಶುಕ್ರವಾರ, 12 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜೀವನದಲ್ಲಿ ದೊಡ್ಡ ಕೆಲಸ, ಕಾರ್ಯವೆಂಬುದು ಇಲ್ಲವೇ ಇಲ್ಲ. ದೊಡ್ಡ ಪ್ರೀತಿಯಿಂದ ಮಾಡಿದ ಸಣ್ಣ ಕೆಲಸವಾದರೂ ಅದು ದೊಡ್ಡ ಕೆಲಸ ಕಾರ್ಯವೇ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಿಡುಕು ಮಾತಿಗೆ ಮಾಡಿಕೊಳ್ಳದಿರು ಕೆಡುಕು.

ನಿಮ್ಮ ಪತ್ರಗಳು

ರಾಷ್ಟ್ರಧ್ವಜದ ಗೌರವ ಕಾಪಾಡೋಣ!

ಮಾನ್ಯರೆ,

ನಮ್ಮ ದೇಶ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸಂತೋಷದ ಶುಭ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿಯವರ ಮಹತ್ವಾಕಾಂಕ್ಷೆಯ ಹರ್ ಘರ್ ತಿರಂಗ ಅಭಿಯಾನದಡಿ ಪ್ರತಿಯೊಬ್ಬರ ಮನೆ ಮನಗಳಲ್ಲಿ ರಾಷ್ಟ್ರಪ್ರೇಮವನ್ನು ಉದ್ದೀಪಿಸುವ ನಿಟ್ಟಿನಲ್ಲಿ ಮೂರು ದಿನ ರಾಷ್ಟ್ರಧ್ವಜವನ್ನು ಹಾರಿಸಬೇಕೆಂಬ ಯೋಜನೆ ಮೆಚ್ಚುವಂತಹದ್ದು.

ಪ್ರತಿಯೊಬ್ಬರ ಮನೆಯ ಮೇಲೂ ತ್ರಿವರ್ಣ ಧ್ವಜ ಹಾರಾಡುತ್ತಿರುವಾಗ ಆಗುವ ಸಂತೋಷ ಹಾಗೂ ಆ ಸುಸಂದರ್ಭದಲ್ಲಿ ನಮ್ಮಲ್ಲಿರುವ ರಾಷ್ಟ್ರಪ್ರೇಮ ಮೂರ್ತ ರೂಪಕ್ಕೆ ಬಂದಂತೆಯೇ ಸರಿ. ದೇಶದಿಂದ ತಾನು ಹಾಗೂ ನನ್ನಿಂದ ರಾಷ್ಟ್ರ ಪ್ರೇಮವನ್ನು ಹೀಗೂ ಬಿಂಬಿಸಲು ಸಾಧ್ಯವೆಂಬ ಮನೋಭಾವ ಪ್ರತಿಯೊಬ್ಬರಲ್ಲೂ ಬರಬೇಕು. ಪ್ರತಿಯೊಬ್ಬರ ಮನೆಯ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಸಂದರ್ಭದಲ್ಲಿ ಧ್ವಜದ ಪಾವಿತ್ರ್ಯತೆಗೆ ತಕ್ಕಮಟ್ಟಿಗೆ ಭಂಗ ಬರುವ ಸಾಧ್ಯತೆಯೂ ಇರಬಹುದು. ಈ ನಿಟ್ಟಿನಲ್ಲಿ ಸರ್ಕಾರ ರಾಷ್ಟ್ರಧ್ವಜ ಬಳಕೆಯ ಬಗ್ಗೆ ಹಾಗೂ ಬಳಸಿದ ಧ್ವಜವನ್ನು ಶಿಷ್ಟಾಚಾರದೊಂದಿಗೆ ಕೆಳಗಿಳಿಸುವ ಬಗ್ಗೆ ದೇಶದ ನಾಗರಿಕರಿಗೆ ಸೂಕ್ತ ಮಾಹಿತಿ ನೀಡುವುದೊಳಿತು. ಇದರ ಜೊತೆಗೆ ನನ್ನ ದೇಶ, ನನ್ನ ಧ್ವಜ, ನಮ್ಮ ದೇಶದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಎಂಬ ರಾಷ್ಟ್ರ ಅಭಿಮಾನದೊಂದಿಗೆ ಪ್ರತಿಯೊಬ್ಬರೂ ರಾಷ್ಟ್ರಧ್ವಜದ ಪಾವಿತ್ರ್ಯತೆಗೆ ಚ್ಯುತಿಬಾರದ ರೀತಿಯಲ್ಲಿ ತ್ರಿವರ್ಣಧ್ವಜ ಹಾರಿಸೋಣ. ಆ ಮೂಲಕ ದೇಶದ ಸ್ವಾತಂತ್ರ್ಯದ ಅಮೃತಮಹೋತ್ಸವದ ಆಚರಣೆಯ ಸಂಭ್ರಮವನ್ನು ಸಾರ್ಥಕಗೊಳಿಸೋಣ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕಾಮನ್‌ವೆಲ್ತ್ ಕ್ರೀಡೆಯಲ್ಲಿ ಭಾರತದ ಸಾಧನೆ ಅಮೋಘ

ಮಾನ್ಯರೆ,

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತವು ನ್ಯೂಜಿಲೆಂಡ್, ಮಲೇಷಿಯಾ ದಂತಹ ಕ್ರೀಡಾ ಸೌಲಭ್ಯವಿರುವ ಮತ್ತು ಕ್ರೀಡೆಗೆ ಹೆಸರುವಾಸಿಯಾದ ದೇಶಗಳನ್ನು ಪದಕ ಪಟ್ಟಿಯಲ್ಲಿ ಹಿಂದಿಕ್ಕಿ, ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ.

ಕಾಮನ್‌ವೆಲ್ತ್ ಕ್ರೀಡಾಕೂಟದ ಮುಖ್ಯ ರೂವಾರಿ ಜಾನ್ ಆಸ್ಟ್ಲೆ ಕೂಪರ್. 1891ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಧೀನ ದೇಶಗಳನ್ನು ಕ್ರೀಡೆಯ ಮೂಲಕ ಒಗ್ಗೂಡಿಸುವ ಯೋಚನೆಯನ್ನು ಮಾಡಿದ ಕೂಪರ್ ಹಲವಾರು ಲೇಖನಗಳನ್ನು ಬರೆಯುವ ಮೂಲಕ ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ಉತ್ತಮ ಅಭಿಪ್ರಾಯ ಮೂಡಿಸುವ ಪ್ರಯತ್ನ ಮಾಡಿದರು.

ಇವರ ಪ್ರಯತ್ನದ ಫಲವಾಗಿ 1930ರಲ್ಲಿ ಕೆನಡಾದ ಹ್ಯಾಮಿಲ್ಟನ್ ನಗರದಲ್ಲಿ "ಬ್ರಿಟಿಷ್ ಸಾಮ್ರಾಜ್ಯ ಕ್ರೀಡೆ" ಹೆಸರಿನಲ್ಲಿ ಪ್ರಾರಂಭವಾಗಿ ನಂತರ ಕಾಮನ್‌ವೆಲ್ತ್ ಕ್ರೀಡಾಕೂಟವಾಗಿ ಜನಪ್ರಿಯತೆಯನ್ನು ಪಡೆದುಕೊಂಡಿತು. ಮೊದಲ ವರ್ಷದ ಕ್ರೀಡಾಕೂಟದಲ್ಲಿ 11 ದೇಶಗಳ 400 ಕ್ರೀಡಾಪಟುಗಳು ಭಾಗವಹಿಸಿದ್ದರು ಮತ್ತು ಇದರ ವೆಚ್ಚ 97, 973 ಡಾಲರ್ ಆಗಿತ್ತು. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕಾಮನ್‌ವೆಲ್ತ್ ಕ್ರೀಡಾಕೂಟ ಎರಡನೇ ಮಹಾಯುದ್ಧದ ಸಮಯದಲ್ಲಿ ನಡೆಯಲಿಲ್ಲ. ನಂತರ ನಿರಾತಂಕವಾಗಿ ನಡೆದುಕೊಂಡು ಬಂದಿದೆ. ಪ್ರಸ್ತುತ ಬ್ರಿಟನ್‌ನ ಬರ್ಮಿಂಗ್ ಹ್ಯಾಮ್‌ನಲ್ಲಿ ನಡೆದ 2022ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 72 ದೇಶಗಳ 5054 ಕ್ರೀಡಾಪಟುಗಳು ಭಾಗವಹಿಸಿದ್ದರು ಮತ್ತು ಈ ಪಂದ್ಯಾವಳಿಯ ವೆಚ್ಚ 778 ಮಿಲಿಯನ್ ಯೂರೋ ಎಂದು ಅಂದಾಜಿಸಲಾಗಿದೆ.

ಇಂತಹ ಪ್ರತಿಷ್ಠಿತ ಕ್ರೀಡಾಕೂಟದಲ್ಲಿ ಭಾರತದ ಸಾಧನೆ ಪ್ರೇರಣೀಯ ಮತ್ತು ಪ್ರಶಂಸನೀಯವಾಗಿದೆ. ಭಾರತ ಒಟ್ಟು 22 ಚಿನ್ನದ ಪದಕ, 16 ಬೆಳ್ಳಿಯ ಪದಕ ಮತ್ತು 23 ಕಂಚಿನ ಪದಕ ಪಡೆಯುವ ಮೂಲಕ ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನು ಅಲಂಕರಿಸಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿನ ಭಾರತೀಯ ಕ್ರೀಡಾಪಟುಗಳ ಸಾಧನೆ, ಯುವ ಕ್ರೀಡಾ ಪ್ರತಿಭೆಗಳಿಗೆ ಪ್ರೇರಣೆಯಾಗಲೆಂದು ಎಲ್ಲಾ ಭಾರತೀಯರ ಪರವಾಗಿ ಅಭಿನಂದನೆ ಸಲ್ಲಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ಪರಿಸರ ಸ್ನೇಹಿ ಗಣಪತಿ ಬಳಸಿ

ಮಾನ್ಯರೆ,

ರಾಜ್ಯ ಸರ್ಕಾರವು ಪರಿಸರ ಸ್ನೇಹಿ ಗಣಪನನ್ನೇ ಪ್ರತಿಷ್ಠಾಪಿಸಲು ಆದೇಶ ನೀಡಿ, ಸಾರ್ವಜನಿಕವಾಗಿ ಗಣೇಶನ ಉತ್ಸವ ಮಾಡಲು ಹಸಿರು ನಿಶಾನೆ ನೀಡಿರುವುದು ಸಂತೋಷದ ಸಂಗತಿ.ನಾವೆಲ್ಲರೂ ಪರಿಸರ ಸ್ನೇಹಿ ಗಣಪನನ್ನೇ ಪೂಜಿಸಿ ವಿಸರ್ಜಿಸಬೇಕು. ಅಷ್ಟೇ ಅಲ್ಲ ಸರ್ಕಾರ ವಿಧಿಸಿದ ನೀತಿ ಸಂಹಿತೆಗಳನ್ನು ಪಾಲಿಸುವ ಹೊಣೆ ಜವಾಬ್ದಾರಿ ನಮ್ಮದಾಗಬೇಕು. ಗಣೇಶನ ಉತ್ಸವ ಆಚರಿಸುವ ಸಂಭ್ರಮದಲ್ಲಿ ಮೈ ಮರೆತು ಪರಿಸರ ಮಾಲಿನ್ಯ, ಶಬ್ದಮಾಲಿನ್ಯ ಮಾಡದೇ ಪರಿಸರ ಜಲ ನೆಲ ರಕ್ಷಿಸುವ ಕರ್ತವ್ಯ ನಮ್ಮದಾಗಬೇಕು. ಈ ಮೂಲಕ ನಿಸರ್ಗದೇವಿಯನ್ನು ಆರಾಧಿಸಿದ ಪುಣ್ಯ ಲಭಿಸುತ್ತದೆ.

–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು

ಮುಚ್ಚಿರುವ ರಸ್ತೆ ಸ್ವಚ್ಛಗೊಳಿಸಿ ಓಡಾಟಕ್ಕೆ ಮುಕ್ತಗೊಳಿಸಿ



ಮಾನ್ಯರೆ,

ಮೈಸೂರಿನ ಉದಯಗಿರಿ ಪಿ ಅಂಡ್ ಟಿ ಕ್ವಾಟ್ರಸ್ಸಿನ ಪಕ್ಕದಲ್ಲೇ ಇರುವ ಸ್ಮಶಾನಕ್ಕೆ ಹೋಗುವ ರಸ್ತೆ ಕಸದ ರಾಶಿಯಿಂದ ತುಂಬಿಕೊಂಡು ಮುಚ್ಚಿ ಹೋಗಿದೆ. ಅಲ್ಲದೆ ಯಾರೋ ಗುಜರಿ ಅಂಗಡಿಯನ್ನು ಇಟ್ಟುಕೊಂಡು ಈ ರಸ್ತೆಯನ್ನು ಸಂಪೂರ್ಣ ಮುಚ್ಚಿದ್ದಾರೆ. ಇದರಿಂದ ಬೀದಿ ನಾಯಿಗಳು ಮತ್ತು ಹಂದಿಗಳ ಕಾಟ ಜಾಸ್ತಿಯಾಗಿದ್ದು, ನಿವಾಸಿಗಳು ಈ ರಸ್ತೆಯಲ್ಲಿ ಓಡಾಡುವುದೇ ತುಂಬಾ ಕಷ್ಟವಾಗಿದೆ. ಆದ್ದರಿಂದ ನಗರ ಪಾಲಿಕೆ ಅಧಿಕಾರಿಗಳು, ಪಾಲಿಕೆ ಸದಸ್ಯರು ಇತ್ತ ಗಮನಹರಿಸಿ ಈ ರಸ್ತೆಯನ್ನು ಸ್ವಚ್ಛಗೊಳಿಸಿ ಓಡಾಟಕ್ಕೆ ಮುಕ್ತಗೊಳಿಸಬೇಕೆಂದು ಈ ಮೂಲಕ ಮನವಿ.

–ಜಾಕಿ ಸಾಮ್, ಮೈಸೂರು.

ಆ.12, 13 ಮತ್ತು 14ನೇ ಆಗಸ್ಟ್ 2022ರಂದು ನಡೆಯುವ ಮಂತ್ರಾಲಯದ ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳ 351ನೇ ಮಹೋತ್ಸವದ ಅಂಗವಾಗಿ ವಿಶೇಷ ಲೇಖನ.

ಶ್ರೀ ಕ್ಷೇತ್ರ ನಂಜನಗೂಡು ಬೃಂದಾವನ ಸಂಗಮ

ಕಪಿಲೆ ಹಾಗೂ ಕೌಂಡಿನಿ ನದಿಗಳ ದಡದಲ್ಲಿರುವ ಪುಣ್ಯಕ್ಷೇತ್ರ ನಂಜನಗೂಡು. ಇದಕ್ಕೆ ಪ್ರಾಚೀನ ಕಾಲದಲ್ಲಿ ಗರಳಪುರಿ ಎನ್ನಲಾಗುತ್ತಿತ್ತು. ಸಮುದ್ರ ಮಂಥನದಲ್ಲಿ ಉದ್ಭವಿಸಿದ ಹಾಲಹಲದ ನಂಜನ್ನೇ ಉಂಡ ಶ್ರೀ ನಂಜುಂಡೇಶ್ವರ ಇಲ್ಲಿನ ಅಧಿದೈವ. ಹಾಗಾಗಿ ಇದನ್ನು ದಕ್ಷಿಣಕಾಶಿ ಎಂದು ಕರೆಯಲಾಗುತ್ತದೆ. ಅಲ್ಲದೆ ಮಣಿ ಕರ್ಣಿಕಾ ಎಂಬ ನದಿ ಚಿಕ್ಕ ತೊರೆಯಾಗಿ ಹರಿದು ಕಪಿಲೆ ಮತ್ತು ಕೌಂಡಿನಿ ನದಿಗಳೊಂದಿಗೆ ಸಂಗಮಿಸಿದ್ದರಿಂದ ಈ ಊರಿನ ಶಿಖರಕ್ಕೆ ತ್ರಿವೇಣಿ ಸಂಗಮ ಎನ್ನುವ ಹೆಮ್ಮೆಯೂ ಇದೆ. ಮಹರ್ಷಿ ಜಮದಗ್ನಿಯ ಆಣತಿಯಂತೆ ಮಗನಾದ ಶ್ರೀ ಪರಶುರಾಮರು ತಾಯಿ ರೇಣುಕೆಯ ಶಿರವನ್ನು ಕತ್ತರಿಸಿ ಪ್ರಾಯಶ್ಚಿತ್ತಕ್ಕಾಗಿ ತಪಸ್ಸು ಮಾಡಿ ದೋಷ ಮುಕ್ತರಾದ್ದರಿಂದ ನಂಜನಗೂಡು ಪರಶುರಾಮ ಕ್ಷೇತ್ರವೆನಿಸಿದೆ. ಇಲ್ಲಿ ಶ್ರೀ ಪರಶುರಾಮರ ಪುರಾತನ ದೇವಸ್ಥಾನ ಹಾಗೂ ಜಗದ್ಗುರು ಶ್ರೀ ಶಂಕರಾಚಾರ್ಯರ ಮಠವನ್ನು ನೋಡಬಹುದು. ಮಹರ್ಷಿ ಗೌತಮರು ಶ್ರೀ ಶ್ರೀಕಂಠೇಶ್ವರನಿಗೆ ದಿವ್ಯ ರಥವನ್ನು ಸಮರ್ಪಿಸಿ ಕೃತಾರ್ಥರಾದ್ದರಿಂದ ಇದು ಗೌತಮ ಕ್ಷೇತ್ರವಾಗಿ ಸ್ಕಂದ ಪುರಾಣದ ಕೇದಾರ ಖಂಡದಲ್ಲಿ ಉಲ್ಲೇಖಿತವಾಗಿದೆ. ಕಾಲಾನಂತರ ನಂಜನಗೂಡು ಪ್ರದೇಶವನ್ನು ಗಂಗರು, ಚೋಳರು ಹಾಗೂ ರಾಷ್ಟ್ರಕೂಟರು ಆಳಿದರು ಎಂದು ತಿಳಿದು ಬರುತ್ತದೆ. ಆನಂತರ ವಿಜಯನಗರದ ಅರಸರು, ಮೈಸೂರು ಸಂಸ್ಥಾನದ ಒಡೆಯರು, ಕಳಲೆ ದಳವಾಯಿಗಳು, ಹದಿನಾರು ಪ್ರಾಂತ್ಯದ ಪಾಳೇಗಾರರು ತಮ್ಮ ಆಳ್ವಿಕೆ ಕಾಲದಲ್ಲಿ ಅಪಾರ ಕೊಡುಗೆಗಳನ್ನು ಕೊಟ್ಟು ಶ್ರೀ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದರು ಎಂಬುದು ಉಲ್ಲೇಖಾರ್ಹ.



ರಾಯರ ಮೂಲ ಪ್ರತೀಕ.

ಭಾರತವು ಸಾಧುಸಂತರ ದೇಶ. ಅನೇಕ ಮಹನೀಯರು ಅವತರಿಸಿ ಧರ್ಮ ರಕ್ಷಣೆ ಮಾಡಿ ಮಾರ್ಗದರ್ಶನ ನೀಡಿದ್ದಾರೆ. ಅಂತಹವರಲ್ಲಿ ಸಂತ ಶ್ರೇಷ್ಠ ಶ್ರೀ ಮಧ್ವಾಚಾರ್ಯರು ಸಹ ಪ್ರಸಿದ್ಧರು. ದ್ವೈತ ಸಿದ್ಧಾಂತದ ಪ್ರತಿಪಾದಕರಾಗಿ ಇವರ ಪರಂಪರೆಯಲ್ಲಿ ಇಪ್ಪತ್ತನಾಲ್ಕು ವಿವಿಧ ದ್ವೈತ ಮಠಗಳ ಹಲವಾರು ಯತಿಗಳು ಆಸ್ತಿಕರಿಗೆ ಮಾರ್ಗದರ್ಶನ ಮಾಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ನೇರ ಪರಂಪರೆಯಲ್ಲಿ ಯತಿಗಳಾದ ಶ್ರೀ ಸುಧೀಂದ್ರ ತೀರ್ಥರ ನೇರ ಶಿಷ್ಯರಾಗಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರು ಹದಿನೇಳನೆ ಯತಿಗಳಾಗಿ ಧರ್ಮ ಪ್ರಸಾರ ಮಾಡಿ 351 ವರ್ಷಗಳಿಂದ ಮಂತ್ರಾಲಯ ಶ್ರೀ ಕ್ಷೇತ್ರದಲ್ಲಿ ಸಶರೀರ ವೃಂದಾವನಸ್ಥರಾಗಿ ವಿರಾಜಮಾನರಾಗಿ ಅನುಗ್ರಹಿಸುತ್ತಿದ್ದಾರೆ. ಇವರ ಪರಂಪರೆಯಲ್ಲಿ 39 ಯತಿಗಳು ಕಾಲಕಾಲಕ್ಕೆ ಧರ್ಮ ರಕ್ಷಣೆ ಮಾಡಿರುತ್ತಾರೆ. ಈ ಭವ್ಯ ಪರಂಪರೆಯಲ್ಲಿ ಶ್ರೇಷ್ಠ ಸಂತರಾದ 10ನೇ ಯತಿಗಳಾದ ಶ್ರೀ ಸುಬೋಧೇಂದ್ರ ತೀರ್ಥರು, 11ನೇಯವರಾದ ಶ್ರೀ ಸುಜನೇಂದ್ರ ತೀರ್ಥರು, 12ನೇ ಶ್ರೀ ಸುಜ್ಞಾನೇಂದ್ರ ತೀರ್ಥರು, 15ನೇ ಶ್ರೀ ಸುಪ್ರಜ್ಞೇಂದ್ರ ತೀರ್ಥರು ಹಾಗೂ 16ನೇ ಶ್ರೀ ಸುಕೃತೀಂದ್ರ ತೀರ್ಥರು ಶ್ರೀ ಗುರುರಾಯರ ಆಣತಿಯಂತೆ ಧರ್ಮ ಪ್ರಸಾರ ಮಾಡುತ್ತಾ ಅವರುಗಳು ತಮ್ಮ ಅಂತಿಮ ಕಾಲದಲ್ಲಿ ಶ್ರೀ ಕ್ಷೇತ್ರ ನಂಜನಗೂಡಿಗೆ ಆಗಮಿಸಿ, ಅಲ್ಲಿ ನೆಲೆಸಿ ವೃಂದಾವನಸ್ಥರಾಗಿರುವುದು ಆಸ್ತಿಕ ಭಕ್ತರಿಗೆ ಧರ್ಮ ರಕ್ಷಣೆ ನೀಡಿದಂತಾಗಿದೆ. ಅಲ್ಲದೇ ಶ್ರೀ ರಾಘವೇಂದ್ರಸ್ವಾಮಿಗಳವರ ಪೂರ್ವಾಶ್ರಮದ ವಂಶಿಕರು ಇಂದಿಗೂ ನಂಜನಗೂಡಿನಲ್ಲಿ ವಾಸವಾಗಿದ್ದು ದೊಡ್ಡಮನೆ ವಂಶಿಕರಾಗಿ ಇಂದಿನವರೆಗೆ ಸುಮಾರು 10 ವ್ಯಕ್ತಿಗಳು ಮಂತ್ರಾಲಯ ಶ್ರೀ ಮಠಕ್ಕೆ ಮಠಾಧಿಪತಿಗಳಾಗಿ ಅನುಗ್ರಹಿಸಿರುವುದು ಗಮನಾರ್ಹ ಹಾಗೂ ಹೆಮ್ಮೆಯ ವಿಷಯವಾಗಿದೆ.

ಶ್ರೀ ಸುಬೋಧೇಂದ್ರ ತೀರ್ಥರು, 10ನೇ ಯತಿಗಳು 1799–1835



ಶ್ರೀ ಕ್ಷೇತ್ರ ಮಂತ್ರಾಲಯದ ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಪರಂಪರೆಯ 9ನೇ ಪೀಠಾಧಿಪತಿಗಳಾದ ಶ್ರೀ ಭುವನೇಂದ್ರ ತೀರ್ಥರು ಶ್ರೀ ಮಠದ ಪ್ರಖ್ಯಾತ ಶಿಷ್ಯರಾದ ಮತ್ತು ಉದ್ದಾಮ ಪಂಡಿತರೂ ಆದ ಮುದ್ದುಕೃಷ್ಣಾಚಾರ್ಯರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ ಸನ್ಯಾಸಾಶ್ರಮ ನೀಡಿ 'ಸುಬೋಧೇಂದ್ರ'ರೆಂದು ನಾಮಕರಣ ಮಾಡಿ 10ನೇ ಪೀಠಾಧಿಪತಿಗಳನ್ನಾಗಿ ನಿಯೋಜಿಸಿದರು. ಶ್ರೀ ಸುಬೋಧೇಂದ್ರ ತೀರ್ಥರು ತಮ್ಮ ನೇರ ಶಿಷ್ಯರಾದ ಶ್ರೀ ಸುಜನೇಂದ್ರ ತೀರ್ಥರೊಡನೆ ಸುಮಾರು 28 ವರ್ಷಗಳ ಕಾಲ ನಂಜನಗೂಡಿನಲ್ಲಿ ನೆಲೆಸಿ ಪಾಠ ಪ್ರವಚನವನ್ನು ಮಾಡುತ್ತಾ ತಮ್ಮ ಕೊನೆಗಾಲವನ್ನು ಕಳೆದು ಮನ್ಮಥ ಸಂವತ್ಸರದ ಚೈತ್ರ ಬಹುಳ ತದಿಗೆ ದಿನ ಹರಿಧ್ಯಾನ ಪರರಾದರು. ಇವರ ಬೃಂದಾವನ ಪ್ರತಿಷ್ಠೆಯನ್ನು ಪರಂಪರೆಯ ಆನಂತರದ ಯತಿಗಳಾದ ಶ್ರೀ ಸುಜ್ಞಾನೇಂದ್ರಸ್ವಾಮಿಗಳವರು ನೆರವೇರಿಸಿದರು.

ಶ್ರೀ ಸುಜನೇಂದ್ರ ತೀರ್ಥರು, 11ನೇ ಯತಿಗಳು 1807–1836

ಶ್ರೀ ಗುರುರಾಯರ ಪರಂಪರೆಯ 10ನೇ ಯತಿಗಳಾದ ಶ್ರೀ ಸುಬೋಧೇಂದ್ರ ತೀರ್ಥರ ಹೆಚ್ಚಿನ ಪ್ರವಾಸದಿಂದಾಗಿ ದೇಹಾಲಸ್ಯ ಉಂಟಾಗಿ ಬೊಮ್ಮಾಗಟ್ಟಿ ಎಂಬ ಗ್ರಾಮದಲ್ಲಿ ಪ್ರಭವ ಸಂವತ್ಸರದ ಆಷಾಢ ಶುದ್ಧ ನವಮೀ ದಿನ ವಿದ್ವಾಂಸ ಜಯರಾಮಾಚಾರ್ಯರಿಗೆ ಆಶ್ರಮ ದೀಕ್ಷೆಯನ್ನು ನೀಡಿ ರಾಯರ ಪರಂಪರೆಯ 11ನೇ ಯತಿಗಳಾಗಿ ಶ್ರೀ 'ಸುಜನೇಂದ್ರ' ರೆಂದು ಹೆಸರಿಸಿ ನಿಯುಕ್ತಿಗೊಂಡರು.



ನಂಜನಗೂಡು ಶ್ರೀಗಳವರ ಮೆಚ್ಚುಗೆಯ ಸ್ಥಳವೂ ಆಗಿತ್ತು. ನಿತ್ಯ ಕಪಿಲೆಯಲ್ಲಿ ಮಿಂದು ಸಂಸ್ಥಾನ ಪೂಜೆಯ ನಂತರ ಶ್ರೀ ಪಾರ್ವತಿ ಸಮೇತ ಶ್ರೀ ಶ್ರೀಕಂಠೇಶ್ವರ ಸ್ವಾಮಿಗಳವರ ದರ್ಶನ ಪಡೆಯುವುದು ಶ್ರೀಗಳವರ ವಾಡಿಕೆಯಾಗಿತ್ತು. ಶ್ರೀಗಳವರ ಪಾಂಡಿತ್ಯಕ್ಕೆ ಮನಸೋತು ಸಂತಸಪಟ್ಟ ಮೈಸೂರು ಸಂಸ್ಥಾನದ ಅಭಿನವ ಭೋಜರೆಂದು ಪ್ರಖ್ಯಾತರಾದ ಸನಾತನ ಧರ್ಮಕ್ಕೆ, ವಿದ್ಯೆಗೆ, ಕಲೆಗೆ ಆಶ್ರಯದಾತರಾಗಿದ್ದ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರವರು ಇವರನ್ನು ನಂಜನಗೂಡಿನಲ್ಲಿಯೇ ನೆಲಸುವಂತೆ ವಿಜ್ಞಾಪಿಸಿಕೊಂಡರು. ಉಭಯಶ್ರೀಗಳವರ ಖಾಯಂ ವಾಸ್ತವ್ಯಕ್ಕಾಗಿ ದಿವಾನ್ ಪೂರ್ಣಯ್ಯನ ಛತ್ರವೆಂದು ಕರೆಯಲ್ಪಟ್ಟ ಈಗಿನ ಶ್ರೀ ಮಠವನ್ನು ದಾನವಾಗಿ ಕೊಟ್ಟರು. ಅಲ್ಲದೇ ಅಂಬಳೆ, ಕಗ್ಗಲೂರು, ಕೊಂಗಳ್ಳಿ ಗ್ರಾಮಗಳನ್ನು ಶ್ರೀಮಠಕ್ಕೆ ಉಂಬಳಿಯಾಗಿ ನೀಡಿದರು. ಅಂದಿನಿಂದ ನಿರಂತರವಾಗಿ ನಂಜನಗೂಡಿನ ಶ್ರೀಮಠದಲ್ಲಿ ತತ್ವಪ್ರಸಾರ, ಧರ್ಮ ಪ್ರಸಾರವು ನಡೆಯುತ್ತಿದ್ದು ಹಾಗಾಗಿ ಮಂತ್ರಾಲಯ ಶ್ರೀ ಕ್ಷೇತ್ರದಲ್ಲಿರುವ ಶ್ರೀ ಮಠಕ್ಕೆ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠವೆಂದೇ ಸಂಭೋದಿಸಲಾಗುತ್ತಿದ್ದು ವಿಶ್ವ ವಿಖ್ಯಾತವಾಗಿದೆ. ಅಪಾರ ಕೀರ್ತಿ ಸಂಪಾದಿಸಿತ ಶ್ರೀ ಸುಜನೇಂದ್ರ ತೀರ್ಥರು ಕಾರ್ತಿಕ ಬಹುಳ ಅಷ್ಟಮಿಯಂದು ನಂಜನಗೂಡಿನಲ್ಲಿಯೇ ವೃಂದಾವನಸ್ಥರಾದರು.

ಶ್ರೀ ಸುಜ್ಞಾನೇಂದ್ರ ತೀರ್ಥರು, 12ನೇ ಯತಿಗಳು, 1836–1861

ಮಂತ್ರಾಲಯದ ಶ್ರೀಗುರುರಾಯರ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಧೀರೇಂದ್ರಸ್ವಾಮಿಗಳವರ ಭಾವ ಮೈದುನರು ಆದ ಶ್ರೀ ರಾಘವೇಂದ್ರಾಚಾರ್ಯರೆಂಬುವವರು ದೊಡ್ಡ ಪಂಡಿತರು. ಅತ್ಯಂತ ಆಚಾರ ಶೀಲರು. ತಮ್ಮ ಮಾತೃಶ್ರೀಯವರ ಅಪ್ಪಣೆಯಂತೆ 11ನೇ ಯತಿಗಳಾದ ಶ್ರೀ ಸುಜನೇಂದ್ರಸ್ವಾಮಿ ಗಳವರಿಂದ ಸನ್ಯಾಸಾಶ್ರಮವನ್ನು ಪಡೆದು ಇವರು 'ಸುಜ್ಞಾನೇಂದ್ರ' ತೀರ್ಥರೆಂದು ನಾಮಕರಣಗೊಂಡರು. ಸುಮಾರು 25 ವರ್ಷಗಳ ಕಾಲ ಮಂತ್ರಾಲಯ ಶ್ರೀ ಕ್ಷೇತ್ರದ ವೇದಾಂತ ಸಾಮ್ರಾಜ್ಯಾಧಿಪತಿಗಳಾಗಿದ್ದು ಕೆಲಕಾಲ ಸಂಚಾರವನ್ನೂ ಮಾಡಿ ಧರ್ಮ ಬೋಧನೆಯನ್ನು ಎಲ್ಲೆಡೆ ಮಾಡುತ್ತಾ ನಂಜನಗೂಡಿನ ಮೂಲ ಮಠದಲ್ಲಿಯೇ ನೆಲೆಸಿದ್ದರು. ಶ್ರೀಗಳವರು ಮಹಾತಪಸ್ವಿಗಳು. ನಂತರ ಶ್ರೀಗುರುರಾಯರ ಸನ್ನಿಧಿಯಲ್ಲಿ ನೆಲೆಸಲು ಮಂತ್ರಾಲಯಕ್ಕೆ ತೆರಳಿದರು. ಅಲ್ಲಿ ಕೆಲಕಾಲ ಶ್ರೀ ಗುರುರಾಜರ ಸೇವೆಯನ್ನು ಮಾಡಿಕೊಂಡಿದ್ದರು. ಒಮ್ಮೆ ಇವರಿಗೆ ಶ್ರೀಗುರುರಾಯರು ಸ್ವಪ್ನದಲ್ಲಿ ಕಾಣಿಸಿಕೊಂಡು ನಂಜನಗೂಡಿಗೆ ಹೋಗಬೇಕೆಂದು, ತಮ್ಮ ಸನ್ನಿಧಾನದ ಬದಲು ತಮ್ಮ ದಿನ ಒಂದನ್ನು ಮೀಸಲಾಗಿ ಕೊಟ್ಟಿರುವೆನೆಂದೂ ಸೂಚನೆ ಕೊಟ್ಟರು. ಶ್ರೀ ಸುಜ್ಞಾನೇಂದ್ರ ತೀರ್ಥರು ಗುರುರಾಯರ ಅಪ್ಪಣೆಯಂತೆ ನಂಜನಗೂಡಿಗೆ ಬಂದು ನೆಲೆಸಿದರು. ಶ್ರೀ ರಾಯರ ಸ್ವಪ್ನ ಸೂಚನೆಯಂತೆ ಶ್ರೀ ಸುಜ್ಞಾನೇಂದ್ರ ತೀರ್ಥರು ಹಾಗೂ ಮಹಾರಾಜರು ನಂಜನಗೂಡಿನ ಶ್ರೀ ಮಠದಲ್ಲಿ ಶ್ರೀಗುರುರಾಯರ ಏಕೈಕ ಸ್ವಯಂ ವ್ಯಕ್ತ ಶಿಲಾ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದರು. ಶ್ರೀಗಳವರು ಕೆಲವು ದಿನಗಳ ನಂತರ ದುರ್ಮತಿ ಸಂವತ್ಸರದ ಶ್ರಾವಣ ಬಹುಳ ಚತುರ್ಥಿಯ ದಿನದಂದು ಶ್ರೀ ಕೃಷ್ಣ ಪಾದಾರವಿಂದವನ್ನು ಸೇರಿದರು. ಶ್ರೀ ರಾಘವೇಂದ್ರಸ್ವಾಮಿಗಳವರ ಉತ್ತರಾರಾಧನೆಯ ದಿನ ಶ್ರೀಗಳವರ ಪೂರ್ವಾರಾಧನೆಯನ್ನು ಇಂದಿಗೂ ಆಚರಿಸಲಾಗುತ್ತಿದೆ.



ಶ್ರೀ ಸುಪ್ರಜ್ಞೇಂದ್ರ ತೀರ್ಥರು, 15ನೇಯವರು, 1884–1903

ಮಂತ್ರಾಲಯದ ಪೀಠಾಧಿಪತಿಗಳಾದ ಶ್ರೀ ಸುಗುಣೇಂದ್ರಸ್ವಾಮಿಗಳವರು ಅತ್ಯಂತ ದೈವಭಕ್ತರು, ಪಂಡಿತರೂ ಆದ ಶ್ರೀ ಗುರುರಾಜಾಚಾರ್ಯರಿಗೆ ಸನ್ಯಾಸ ದೀಕ್ಷೆಯನ್ನು 1884ರಲ್ಲಿ ನೀಡಿ ಸುಪ್ರಜ್ಞೇಂದ್ರ ತೀರ್ಥರು ಎಂಬುದಾಗಿ ನಾಮಕರಣ ಮಾಡಿದರು. ಶ್ರೀಗಳವರು ತಮ್ಮ ಮಠದ ಮೂಲ ಗುರುಗಳಾದ ಶ್ರೀ ಮಧ್ವಾಚಾರ್ಯರಿಂದ ಹಿಡಿದು ತಮ್ಮ ಗುರುಗಳಾದ ಶ್ರೀ ಸುಗುಣೇಂದ್ರತೀರ್ಥರವರೆಗಿನ ಎಲ್ಲಾ ಪೂರ್ವಜ ಯತಿಗಳ ಬೃಂದಾವನಗಳಿಗೆ ನಿತ್ಯಾ ಪೂಜಾ–ಆರಾಧನಾ ವ್ಯವಸ್ಥೆಯು ಸಕ್ರಮವಾಗಿ ಆಚರಿಸುವಂತೆ ಮಾಡಿದರು. ಶ್ರೀಮನ್ನ್ಯಾಯಸುಧಾ ಸಹಿತ ಚಂದ್ರಿಕಾಮಂಗಳವನ್ನು ಮಂಚಾಲೆಯಲ್ಲಿ ವೈಭವವಾಗಿ ನಡೆಸಿದರು. ಶ್ರೀಗಳವರು ಎಲ್ಲೆಡೆ ಸಂಚಾರ ಮಾಡುತ್ತಾ ವಿಶೇಷವಾಗಿ ಧರ್ಮ ಪ್ರಸಾರ ಮಾಡಿದರು. ಅಂದಿನ ಮೈಸೂರು ಸಂಸ್ಥಾನದ ಅರಸರಾದ ಶ್ರೀ ಚಾಮರಾಜ ಒಡೆಯರ್‌ರವರು ಅರಮನೆಗೆ ಆಹ್ವಾನಿಸಿ ಸಂಸ್ಥಾನ ಪೂಜೆ ಮಾಡಿಸಿ ವಿಶೇಷವಾಗಿ ಗೌರವಿಸಿದರು. ಶ್ರೀಗಳವರು ಮಠದ ಆಡಳಿತವನ್ನು ಹೆಚ್ಚಿನ ಸುವ್ಯವಸ್ಥಿತಗೊಳಿಸಿದರು. ಶ್ರೀ ಕ್ಷೇತ್ರ ಮಂತ್ರಾಲಯದಲ್ಲಿ ಯಾತ್ರಿಕರಿಗಾಗಿ ಮೊಟ್ಟಮೊದಲ ವಿಶಾಲ ಛತ್ರವನ್ನು ಕಟ್ಟಿಸಿ ಅನುಕೂಲ ಕಲ್ಪಿಸಿದರು. ಶ್ರೀ ಸುಪ್ರಜ್ಞೇಂದ್ರ ತೀರ್ಥರು ಧರ್ಮ ಪ್ರಸಾರ ಮಾಡುತ್ತಾ ವಿಶೇಷವಾಗಿ ನಂಜನಗೂಡಿನಲ್ಲಿಯೇ ವಾಸ್ತವ್ಯ ಮಾಡಿದ್ದು ಶುಭಕೃತ್ ಸಂವತ್ಸರದ ಮಾಘಬಹುಳ ಷಷ್ಠಿಯ ದಿನ ನಂಜನಗೂಡಿನಲ್ಲಿ ಬೃಂದಾವನಸ್ಥರಾದರು. ಶ್ರೀ ಗುರುಜಗನ್ನಾಥ ದಾಸರು ಇವರ ಅಭಿಮಾನಿ ಶಿಷ್ಯರು. ಇವರ ಮೇಲೆ ಸಂಸ್ಕೃತದಲ್ಲಿ ಸ್ತೋತ್ರ ಕೂಡ ರಚಿಸಿದ್ದಾರೆ. ಶ್ರೀಗಳವರ ಆರಾಧನಾ ಶತಮಾನೋತ್ಸವವನ್ನು ಮಾಘಬಹುಳ ಷಷ್ಠಿಯಂದು ನಂಜನಗೂಡಿನಲ್ಲಿ ಅಂದಿನ ಪೀಠಾಧಿಪತಿಗಳಾಗಿದ್ದ ಶ್ರೀ ಸುಶಮೀಂದ್ರ ತೀರ್ಥರು ವೈಭವವಾಗಿ ಆಚರಿಸಿದರು. ಸುಮಾರು 100ಕ್ಕೂ ಹೆಚ್ಚು ಜನ ಶಿಕ್ಷಕರಿಗೆ ಶ್ರೀ ಸುಪ್ರಜ್ಞೇಂದ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೇ ನಂಜನಗೂಡಿನಲ್ಲಿರುವ ಪಂಚ ಬೃಂದಾವನಗಳಿಗೆ ಬೆಳ್ಳಿ ಕವಚವನ್ನು ವಿಶೇಷವಾಗಿ ಸಮರ್ಪಣೆ ಮಾಡಲಾಯಿತು.



ಶ್ರೀ ಸುಕೃತೇಂದ್ರ ತೀರ್ಥರು, 16ನೇ ಯತಿಗಳು, 1903–1912

ಶ್ರೀ ಕ್ಷೇತ್ರ ಮಂತ್ರಾಲಯದ 15ನೇ ಪೀಠಾಧಿಪತಿಗಳಾಗಿದ್ದ ಶ್ರೀ ಸುಪ್ರಜ್ಞೇಂದ್ರ ತೀರ್ಥರವರ ಪೂರ್ವಾಶ್ರಮದ ಅಣ್ಣಂದಿರಾದ ಪಂಡಿತ ವೆಂಕಟ ರಾಘವೇಂದ್ರಾಚಾರ್ಯರವರ ಪ್ರಥಮ ಪುತ್ರರಾದ ಚತುರ್ಶಾಸ್ತ್ರ ಪಂಡಿತರು, ಸದಾಚಾರ ಸಂಪನ್ನರೂ ಆದ ಶ್ರೀ ವೇಣುಗೋಪಾಲಾಚಾರ್ಯರಿಗೆ ಸನ್ಯಾಸಾಶ್ರಮವನ್ನು ನೀಡಿ ಶ್ರೀ 'ಸುಕೃತೇಂದ್ರ ತೀರ್ಥ'ರೆಂದು ನಾಮಕರಣ ಮಾಡಿದರು. ಶ್ರೀಗಳವರ ಜೀವಿತ ಕಾಲ ಬಹಳ ಸ್ವಲ್ಪವಾದರೂ ಅವರ ಪಾಂಡಿತ್ಯದ ಕೀರ್ತಿ ಎಲ್ಲೆಡೆಯಲ್ಲೂ ಹರಡಿತು. ಶ್ರೀಗಳವರು ನಂಜನಗೂಡಿನಲ್ಲೆ ನೆಲೆಸಿ ಧರ್ಮಕಾರ್ಯಗಳನ್ನು ಅನೂಚನವಾಗಿ ನಡೆಸಿದರು. ಶ್ರೀಗಳವರ ಅವಸಾನ ಸಮಯ ವಿಚಿತ್ರವಾಗಿತ್ತು. ಸ್ವಲ್ಪ ದೇಹಾಲಸ್ಯವಾದ ಕೂಡಲೇ ಶ್ರೀಗಳವರು ಸ್ಥಳೀಯ ಅಧಿಕಾರಿಗಳನ್ನು ಕರೆಸಿ ನೀವು ರಾಜಪ್ರತಿನಿಧಿಗಳು, ನಮ್ಮ ಅಂತ್ಯವಿನ್ನು ಸಮೀಪಿಸಿತು. ನಮ್ಮ ತರುವಾಯ ನಾವು ನಮ್ಮ ಪೂರ್ವಾಶ್ರಮದ ತಮ್ಮಂದಿರಾದ ಕೃಷ್ಣಾಚಾರ್ಯರಿಗೆ ಸಂಸ್ಥಾನವನ್ನು ಒಪ್ಪಿಸಿದ್ದೇವೆ. ಈ ವಿಷಯವನ್ನು ಮಹಾರಾಜರಿಗೆ ತಿಳಿಸಿ ಅವರ ಅಮೂಲ್ಯ ಸಮ್ಮತಿ ಪಡೆಯುವ ಹೊಣೆಗಾರಿಕೆ ನಿಮಗೆ ಸೇರಿದ್ದು. ಸಂಸ್ಥಾನದ ಹೊರೆಯನ್ನು ಹೊತ್ತು ನಡೆಸಿಕೊಂಡು ಹೋಗಲು ಕೃಷ್ಣಾಚಾರ್ಯರು ಅತ್ಯಂತ ಸಮರ್ಥರಿದ್ದಾರೆ. ಇನ್ನು ನಮಗೆ ಲೌಕಿಕ ಸಂಪರ್ಕ ಸಾಕು ಎಂದು ಹೇಳುತ್ತಾ ಭಗವಧ್ಯಾನ ನಿರತರಾಗಿ ಹತ್ತಿರವಿದ್ದ ಭಕ್ತರಿಗೆ ಇಗೋ ನೋಡಿ ಪ್ರಾಣದೇವರು ನಾಭಿಯನ್ನು ಬಿಟ್ಟು ಊರ್ಧ್ವ ಭಾಗಕ್ಕೆ ಬಂದರು ಎಂದು ಶ್ವಾಸಗತಿಯನ್ನು ಕ್ರಮವಾಗಿ ಹೇಳಿ ನಾರಾಯಣ ನಾಮ ಸಂಕೀರ್ತನ ಮಾಡಲಾರಂಭಿಸಿದರು. ಇದರಿಂದ ಶ್ರೀಗಳವರ ಅಗಾಧ ಜ್ಞಾನ, ತಪಶ್ಶಕ್ತಿ ತಿಳಿಯುತ್ತದೆ. ಧ್ಯಾನಾಸಕ್ತರಾದ ಶ್ರೀಗಳವರು ಅಂದೇ ಪರಿಧಾವಿ ಸಂವತ್ಸರದ ಆಶ್ವಯುಜ ಶುದ್ಧ ದಶಮಿಯ ದಿನ ನಂಜನಗೂಡಿನ ಶ್ರೀಮಠದಲ್ಲೇ ಶ್ರೀ ಕೃಷ್ಣಪಾದಾರವಿಂದವನ್ನು ಸೇರಿ ಬೃಂದಾವನಸ್ಥರಾದರು.



ಪ್ರಸ್ತುತ ನಲವತ್ತನೇ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಶ್ರೀ ಕ್ಷೇತ್ರದ ಸರ್ವತೋಭಿವೃದ್ಧಿಗೆ ಕಾರಣರಾಗಿದ್ದು ಹೆಚ್ಚಿನ ಭಕ್ತರು ಮಂತ್ರಾಲಯಕ್ಕೆ ಭೇಟಿ ನೀಡಿ ಶ್ರೀ ರಾಘವೇಂದ್ರ ಸ್ವಾಮಿಗಳವರ ದರ್ಶನ ಪಡೆಯಲು ಅಗತ್ಯ ವಸತಿ ವ್ಯವಸ್ಥೆ, ತೀರ್ಥ ಪ್ರಸಾದ, ಶ್ರೀ ಮೂಲರಾಮದೇವರ ಹಾಗೂ ಶ್ರೀ ಗುರುರಾಯರ ಬೃಂದಾವನದ ನಿತ್ಯ ವಿಶೇಷ ಪೂಜೆ ಅಲ್ಲದೇ ಪೂರ್ವ ಯತಿಗಳ ಆರಾಧನಾ ಮಹೋತ್ಸವಗಳನ್ನು ಆಚರಿಸುತ್ತಾ ಆಸ್ತಿಕರನ್ನು ಆಶೀರ್ವದಿಸುತ್ತಿರುವುದು ಸಂತೋಷದ ವಿಷಯ.



ನಂ. ಶ್ರೀಕಂಠ ಕುಮಾರ್
ಮೊ: 9481067333

ಮೈಸೂರಲ್ಲಿ 'ಮಹಾರಾಜ ಟ್ರೋಫಿ' ಪಂದ್ಯಾವಳಿ

ಬೆಂಗಳೂರು ಬ್ಲಾಸ್ಟರ್ಸ್, ಗುಲ್ಬರ್ಗಾ ಮೈಸ್ಟಿಕ್ಸ್‌ಗೆ ಜಯ



ಸಂಕ್ಷಿಪ್ತ ಸ್ಕೋರ್ ವಿವರ...

ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 186(ಮಯಾಂಕ್ ಅಗರ್ವಾಲ್ 44, ಚೇತನ್ 66, ಅಮಿತ್ ವರ್ಮಾ 27ಕ್ಕೆ 2, ಅನೀಶ್ವರ್ ಗೌತಮ್ 18ಕ್ಕೆ 2, ವೆಂಕಟೇಶ್ 41ಕ್ಕೆ 2) **ಮಂಗಳೂರು ಯುನೈಟೆಡ್:** 17.4 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 129 (ಮ್ಯಾಕ್ನೀಲ್ ನೊರೊನ್ಹಾ 50, ನಿಕಿನ್ ಜೋಶ್ 35, ರಿಶಿ ಬೊಪಣ್ಣ 19ಕ್ಕೆ 4)

ಮೈಸೂರು ವಾರಿಯರ್ಸ್: 19 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 160(ಪವನ್ ದೇಶ್‌ಪಾಂಡೆ 41, ನಾಗಾ ಭರತ್ 35, ನಿಹಾಲ್ ಉಳ್ಳಾಲ್ 28, ಮನೋಜ್ ಭಾಂಡಗೆ 18ಕ್ಕೆ 1) **ಗುಲ್ಬರ್ಗಾ ಮೈಸ್ಟಿಕ್ಸ್:** 14.1 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 162 (ರೋಹನ್ ಪಾಟೀಲ್ 112, ಜೆಶ್ವತ್ ಆಚಾರ್ಯ 46, ಶುಭಾಂಗ್ ಹೆಗ್ಡೆ 22ಕ್ಕೆ 1)

ಇಂದಿನ ಪಂದ್ಯಗಳು

ಸಮಯ ಮಧ್ಯಾಹ್ನ 3ಕ್ಕೆ
ಹುಬ್ಬಳ್ಳಿ ಟೈಗರ್ಸ್/ಗುಲ್ಬರ್ಗಾ ಮೈಸ್ಟಿಕ್ಸ್

ಸಂಜೆ 7ಕ್ಕೆ
ಬೆಂಗಳೂರು ಬ್ಲಾಸ್ಟರ್ಸ್/ಶಿವಮೊಗ್ಗ ಸ್ಟ್ರೈಕರ್ಸ್

ಮೈಸೂರು, ಆ.11(ಎಂಕೆ)– ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯ 5ನೇ ದಿನ ಮಂಗಳೂರು ಯುನೈಟೆಡ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಮೈಸೂರು ವಾರಿಯರ್ಸ್ ವಿರುದ್ಧ ಗುಲ್ಬರ್ಗಾ ಮೈಸ್ಟಿಕ್ಸ್ ವಿಜಯ ಸಾಧಿಸಿತು.

ಬೆಂಗಳೂರು ಬ್ಲಾಸ್ಟರ್ಸ್ ಗೆಲುವು: ಎಲ್.ಆರ್. ಚೇತನ್ ಸ್ಫೋಟಕ ಬ್ಯಾಟಿಂಗ್ ಹಾಗೂ ರಿಶಿ ಬೋಪಣ್ಣ ಸ್ಪಿನ್ ಮೋಡಿಯಿಂದಾಗಿ ಬೆಂಗಳೂರು ಬ್ಲಾಸ್ಟರ್ಸ್ ತಂಡ ಮಂಗಳೂರು ಯುನೈಟೆಡ್ ವಿರುದ್ಧ 35 ರನ್‌ಗಳ ಜಯ ಗಳಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ನಾಯಕ ಮಯಾಂಕ್ ಅಗರ್ವಾಲ್ ಮತ್ತು ಎಲ್.ಆರ್. ಚೇತನ್ ಉತ್ತಮ ಆರಂಭ ನೀಡಿದರು. ಕೇವಲ 20 ಎಸೆತಗಳನ್ನು ಎದುರಿಸಿದ ಮಯಾಂಕ್ 7 ಬೌಂಡರಿ, 1 ಸಿಕ್ಸರ್ ಸಹಿತ ಬಿರುಸಿನ 44 ರನ್ ಬಾರಿಸಿ ರೋಹಿತ್‌ಗೆ ವಿಕೆಟ್ ಒಪ್ಪಿಸಿದರೆ, ಎಲ್.ಆರ್.ಚೇತನ್ 39 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್ ಸಹಿತ 66 ರನ್‌ಗಳ ಕೊಡುಗೆ ನೀಡಿದರು. ಅಂತಿಮವಾಗಿ ಬೆಂಗಳೂರು ತಂಡ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 186 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿತು. ಮಂಗಳೂರು ಯುನೈಟೆಡ್ ಪರ ಅನೀಶ್ವರ್ ಗೌತಮ್, ವೆಂಕಟೇಶ್ ಹಾಗೂ ಅಮಿತ್ ವರ್ಮಾ ತಲಾ 2 ವಿಕೆಟ್ ಪಡೆದರು.

ಕಠಿಣ ಸವಾಲು ಬೆನ್ನತ್ತಿದ ಮಂಗಳೂರು ಯುನೈಟೆಡ್ 17.4 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 129 ರನ್ ಗಳಿಸಿದ್ದ ವೇಳೆ ಮಳೆ ಬಂದ ಕಾರಣ ವಿಜೆಡಿ ನಿಯಮದನ್ವಯ ಬೆಂಗಳೂರು ಬ್ಲಾಸ್ಟರ್ಸ್ ತಂಡ 35 ರನ್‌ಗಳಿಂದ ಜಯ ಗಳಿಸಿದೆ ಎಂದು ಘೋಷಣೆ ಮಾಡಲಾಯಿತು. ಯುವ ಆಟಗಾರ ನಿಕಿನ್ ಜೋಶ್ (35) ಹಾಗೂ ಮ್ಯಾಕ್ನೀಲ್ ನೊರೊನ್ಹಾ(50) 70 ರನ್‌ಗಳ ಜೊತೆಯಾಟ ಆಡುವ ಮೂಲಕ ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ ನಂತರ ಬಂದ ಆಟಗಾರರು ಪೆವಿಲಿಯನ್ ಪರೇಡ್ ನಡೆಸಿ ಅಭಿಮಾನಿಗಳಿಗೆ ನಿರಾಶೆ ಉಂಟು ಮಾಡಿದರು. ಬೆಂಗಳೂರು ಬ್ಲಾಸ್ಟರ್ಸ್ ಪರ ಸ್ಪಿನ್ ಮೋಡಿ ಮಾಡಿದ ರಿಶಿ ಬೊಪಣ್ಣ 4 ಓವರ್‌ಗಳಲ್ಲಿ 19 ರನ್ ನೀಡಿ ಪ್ರಮುಖ 4 ವಿಕೆಟ್ ಪಡೆದು ಗಮನ ಸೆಳೆದರು. ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಎಲ್.ಆರ್.ಚೇತನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಗುಲ್ಬರ್ಗಾ ಮೈಸ್ಟಿಕ್ಸ್‌ಗೆ ಭರ್ಜರಿ ಗೆಲುವು: ರೋಹನ್ ಪಾಟೀಲ್ ಅವರ ಅಬ್ಬರದ ಶತಕದ ನೆರವಿನಿಂದ ಮೈಸೂರು ವಾರಿಯರ್ಸ್ ವಿರುದ್ಧ ಗುಲ್ಬರ್ಗಾ ಮೈಸ್ಟಿಕ್ಸ್ 9 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

ಮಳೆಯಿಂದಾಗಿ 19 ಓವರ್‌ಗಳಿಗೆ ಸೀಮಿತವಾಗಿದ್ದ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ನೀಡಿದ 161ರನ್‌ಗಳ ಗುರಿ ಬೆನ್ನತ್ತಿದ ಗುಲ್ಬರ್ಗಾ ಮೈಸ್ಟಿಕ್ಸ್ ಇನ್ನೂ 29 ಎಸೆತಗಳು ಬಾಕಿ ಇರುವಂತೆಯೇ ಜಯ ಸಾಧಿಸಿದೆ. ಆರಂಭಿಕ ಆಟಗಾರ ಜೆಶ್ವತ್ ಆಚಾರ್ಯ ಕೇವಲ 3 ರನ್ ಗಳಿಸಿ ಔಟಾದ ಬಳಿಕ ಕೃಷ್ಣನ್ ಶ್ರೀಜಿತ್ ಜೊತೆಯಾದ ರೋಹನ್ ಪಾಟೀಲ್ ಅಬ್ಬರದ ಬ್ಯಾಟಿಂಗ್ ನಡೆಸಿದರು. ಕೇವಲ 47 ಎಸೆತಗಳಲ್ಲಿ 11 ಬೌಂಡರಿ, 7 ಸಿಕ್ಸರ್ ಸಹಿತ 112 ರನ್ ಬಾರಿಸುವ ಮೂಲಕ ಟೂರ್ನಿಯಲ್ಲಿ ಮೊಟ್ಟ ಮೊದಲ ಶತಕದ ಸಾಧನೆ ಮಾಡಿದರು. ಉತ್ತಮ ಸಾಥ್ ನೀಡಿದ ಕೃಷ್ಣನ್ ಶ್ರೀಜಿತ್ 29 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಸಹಿತ 46 ರನ್‌ಗಳ ಕೊಡುಗೆ ನೀಡಿದರು. ಮೈಸೂರು ವಾರಿಯರ್ಸ್ ಪರ ಶುಭಾಂಗ್ ಹೆಗ್ಡೆ 1 ವಿಕೆಟ್ ಪಡೆದರೆ, ಮತ್ಯಾವ ಬೌಲರ್‌ಗಳಿಂದಲೂ ವಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ತಂಡ ನಾಯಕ ಕರುಣ್ ನಾಯರ್(18), ನಿಹಾಲ್ ಉಳ್ಳಾಲ್(28) ಮೊದಲ ವಿಕೆಟ್‌ಗೆ 45 ರನ್‌ಗಳ ಜೊತೆಯಾಟದ ಮೂಲಕ ಉತ್ತಮ ಆರಂಭ ನೀಡಿದರು. ಬಳಿಕ ನಾಗಾಭರತ್ 35 ರನ್, ಪವನ್ ದೇಶ್‌ಪಾಂಡೆ 41 ರನ್ ಕಲೆಹಾಕಿದರು. ಅಂತಿಮವಾಗಿ ನಿಗದಿತ 19 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 160 ರನ್‌ಗಳ ಪೈಪೋಟಿ ಮೊತ್ತವನ್ನು ಗಳಿಸಲು ಸಾಧ್ಯವಾಯಿತು. ಗುಲ್ಬರ್ಗಾ ಮೈಸ್ಟಿಕ್ಸ್ ಪರ ಅಭಿಲಾಷ್ ಶೆಟ್ಟಿ, ಸಿಎ ಕಾರ್ತಿಕ್, ಮನೋಜ್ ಭಾಂಡಗೆ ತಲಾ ಒಂದೊಂದು ವಿಕೆಟ್ ಪಡೆದರು. ಶತಕ ಸಿಡಿಸಿದ ರೋಹನ್ ಪಾಟೀಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
12-8-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

ದೇಶಾದ್ಯಂತ 400 ಚಿತ್ರಮಂದಿರಗಳಲ್ಲಿ ಗಾಳಿಪಟ 2



ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ಗಾಳಿಪಟ-2 ಇಂದು ದೇಶಾದ್ಯಂತ 400 ಥೇಟರ್‌ಗಳಲ್ಲಿ ಬಿಡುಗಡೆಯಾಗುತ್ತಿದೆ. ಕರ್ನಾಟಕವಲ್ಲದೆ ಚೆನ್ನೈ, ಹೈದರಾಬಾದ್, ಡೆಲ್ಲಿ ಸೇರಿದಂತೆ ದೇಶದ ಪ್ರಮುಖ ನಗರಗಳು ಹಾಗೂ ವಿದೇಶಗಳಲ್ಲೂ ಸಹ ರಿಲೀಸಾಗುತ್ತಿದೆ. ಗಾಳಿಪಟ ಚಿತ್ರದ ಇಂದು ಸ್ಣ್ಣ ಲಿಂಕ್ ತೆಗೆದುಕೊಂಡು ನಿರ್ದೇಶಕ ಯೋಗರಾಜ ಭಟ್ಟರು ಈಗಿನ ಕಾಲದ ಯುವಜನರಿಗೆ ಇಷ್ಟವಾಗುವಂಥ ಕಥೆ ಬರೆದು ಸಿನಿಮಾ ನಿರ್ದೇಶಿಸಿದ್ದಾರೆ. ಈ ಹಿಂದೆ 'ಪಡ್ಡೆಹುಲಿ' ಚಿತ್ರ ನಿರ್ಮಿಸಿದ್ದ ರಮೇಶ್‌ರೆಡ್ಡಿ ಅವರು ಸೂರಜ್ ಪ್ರೊಡಕ್ಷನ್ ಅಡಿಯಲ್ಲಿ ಬಹುಕೋಟಿ ವೆಚ್ಚದಲ್ಲಿ ಗಾಳಿಪಟ-2 ಚಿತ್ರವನ್ನು ತೆರೆಗೆ ತಂದಿದ್ದಾರೆ.

ಚಿತ್ರ ಕುರಿತಂತೆ ಮಾತನಾಡಿದ ಅವರು ನನ್ನ ಚಿತ್ರಗಳನ್ನು ಒಬ್ಬ ಪ್ರೇಕ್ಷಕನಾಗಿ ನೋಡಿ ಚೆನ್ನಾಗಿದೆ, ಇಲ್ಲ ಅಂತ ನಿರ್ಧರಿಸುತ್ತೇನೆ. ಹಾಗೇ ನಾನೂ ಗಾಳಿಪಟ ಗುಂಗಲ್ಲೇ ಈ ಚಿತ್ರವನ್ನು ನೋಡಿದಾಗ ತುಂಬಾ ಫ್ರೆಷ್‌ಕಥೆ ಕಾಣಿಸಿತು. ಈಗಿನ ಕಾಲಕ್ಕೆ ತಕ್ಕಂತೆ ಭಟ್ಟರು ಚಿತ್ರವನ್ನು ತೆಗೆದುಕೊಂಡು ಹೋಗಿದ್ದಾರೆ. ಗಣೇಶ್, ದಿಗಂತ್, ಪವನ್ ಮೂವರೂ ಅದ್ಭುತವಾಗಿ ಅಭಿನಯಿಸಿದ್ದಾರೆ. ಕಾಮಿಡಿ, ಲವ್, ಎಮೋಷನ್ ಎಲ್ಲಾ ಚಿತ್ರದಲ್ಲಿದ್ದು, ಈಗಿನ ಯೂಥ್ ಇಷ್ಟಪಡುವ ಅದ್ದೂರಿ ಮೇಕಿಂಗ್ ಕಾಣುತ್ತದೆ, ಬಹಳ ದಿನಗಳ ನಂತರ ಒಂದೊಳ್ಳೇ ಸಿನಿಮಾ ನೋಡಿದ ಖುಷಿಯಲ್ಲಿ ಪ್ರೇಕ್ಷಕರು ಥೇಟರಿನಿಂದ ಹೊರಬರುತ್ತಾರೆ ಎಂದರು.

ಕಲಾಕಾರ್ ಸಿನಿಪಯಣಕ್ಕೆ ಬೆಳ್ಳಿಹಬ್ಬದ ಸಂಭ್ರಮ !



ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಪಾತ್ರಗಳ ಮೂಲಕ ಗುರುತಿಸಿಕೊಂಡಿರುವ ನಟ ಹರೀಶ್‌ರಾಜ್ ಬಣ್ಣಹಚ್ಚಿ 25 ವರ್ಷಗಳು ಕಳೆದಿವೆ ತನ್ನ ಪಯಣದ ಹಾದಿಯಲ್ಲಿ ಹೆಗಲಾಗಿ ನಿಂತ ಗಣ್ಯರನ್ನು ಕರೆದು ಗೌರವಿಸುವ ಚಿಕ್ಕ ಸಮಾರಂಭವೊಂದನ್ನು ಈ ಸಂದರ್ಭದಲ್ಲಿ ಹರೀಶ್‌ರಾಜ್ ಆಯೋಜಿಸಿದ್ದರು. ನಿರ್ದೇಶಕ ಗಿರೀಶ್ ಕಾಸರವಳ್ಳಿ, ಸುನೀಲ್‌ಪುರಾಣಿಕ್, ಫಿಲಂಚೇಂಬರ್ ಅಧ್ಯಕ್ಷ ಭಾ.ಮಾ.ಹರೀಶ್, ಮಧುಸೂದನ್‌ಗೌಡ ಮುಂತಾದವರು ಇಲ್ಲಿ ಮುಖ್ಯ ಅತಿಥಿಗಳಾಗಿದ್ದರು.

ಈ ಸಂದರ್ಭದಲ್ಲಿ ತನ್ನ ಮನದ ಮಾತುಗಳನ್ನು ಹಂಚಿಕೊಂಡ ಹರೀಶ್‌ರಾಜ್, ನಾನು 1997ರಲ್ಲಿ ಸಿಂಗ್‌ಬಾಬು ನಿರ್ದೇಶನದ "ದೋಣಿಸಾಗಲಿ" ಚಿತ್ರದ ಮೂಲಕ ನನ್ನ ಸಿನಿಪಯಣ ಆರಂಭಿಸಿದೆ. ಅದೇ ವರ್ಷ ಕಾಸರವಳ್ಳಿ ಅವರ 'ತಾಯಿಸಾಹೇಬ' ಚಿತ್ರದಲ್ಲಿ ಜಂಯಮಾಲಾರ ಮಗನ ಪಾತ್ರ ಮಾಡಿದೆ. ಫಣಿ ರಾಮಚಂದ್ರ ಅವರ 'ದಂಡಪಿಂಡಗಳು' ಧಾರಾವಾಹಿಯಲ್ಲಿ ಮಾಡಿದ ಕಾಮಿಡಿ ಪಾತ್ರ ಬಹು ಜನಪ್ರಿಯತೆ ತಂದುಕೊಟ್ಟಿತು, ಇದನ್ನೆಲ್ಲಾ ನೆನಪಿಸಿಕೊಂಡರೆ ಇಷ್ಟುಬೇಗ 25 ವರ್ಷ ಕಳೆದು ಹೋಯಿತಾ ಅನ್ನಿಸುತ್ತದೆ. ಇಷ್ಟು ವರ್ಷಗಳಲ್ಲಿ 60ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಕಾಸರವಳ್ಳಿ, ಗಿರೀಶ್ ಕಾರ್ನಾಡ್, ರಾಜೇಂದ್ರಸಿಂಗ್ ಬಾಬು ಅವರಂತಹ ಶ್ರೇಷ್ಠ ನಿರ್ದೇಶಕರ ಚಿತ್ರಗಳಲ್ಲಿ ನಟಿಸಿದ್ದೇನೆ. ಬಿಗ್‌ಬಾಸ್ ನನಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿತು. ಈ ರಂಗದಲ್ಲಿ ನಾನೇನಾದರೂ ಮಾಡಿದ್ದೇನೆ ಅಂದರೆ ಅದಕ್ಕೆ ನನ್ನನ್ನು ಬೆಳೆಸಿದ ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು, ಕಲಾವಿದರು ಹಾಗೂ ಮಾಧ್ಯಮದವರು ಕಾರಣ. ಇಡೀ ಚಿತ್ರರಂಗಕ್ಕೆ ನಾನು ಸದಾ ಚಿರಋಣಿಯಾಗಿದ್ದೇನೆ ಎಂದು ಭಾವುಕರಾದರು.

ಆ್ಯಕ್ಷನ್-ಥ್ರಿಲ್ಲರ್ ಧಮ್ ಟ್ರೈಲರ್ ಬಿಡುಗಡೆ



ಕಮರ್ಷಿಯಲ್ ಆಕ್ಷನ್, ಥ್ರಿಲ್ಲರ್‌ನಂಥ ಪಕ್ಕಾ ಮಾಸ್ ಕಥಾಹಂದರ ಹೊಂದಿರುವ 'ಧಮ್' ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ರಂಗ್‌ಬಿರಂಗಿ ಖ್ಯಾತಿಯ ಶ್ರೀಜಿತ್ ಈ ಚಿತ್ರದ ನಾಯಕನಾಗಿದ್ದು, ಉತ್ತರಭಾರತ ಮೂಲದ ಎರಿನ್ ಅಧಿಕಾರಿ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ವಿ.ಆರ್.ಆರ್. ಅವರ ನಿರ್ದೇಶನವಿರುವ ಈ ಚಿತ್ರವನ್ನು ರಿಹಾನ್ ಅಹಮದ್ ಬಹುಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದಾರೆ. ಫಿಲಂ ಚೇಂಬರ್ ಅಧ್ಯಕ್ಷ ಭಾ.ಮಾ.ಹರೀಶ್, ರವಿಕಿರಣ್ ಕಾರ್ಯಕ್ರಮದಲ್ಲಿ ಅತಿಥಿಗಳಾಗಿದ್ದರು.

ನಿರ್ದೇಶಕ ವಿ.ಆರ್.ಆರ್. ಮಾತನಾಡುತ್ತ ಬಾಲನಟನಾಗಿ ಹಾಥಿ ಮೇರೆ ಸಾಥಿ ಸೇರಿದಂತೆ 150ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಲ್ಲದೆ, ಬೇರೆಬೇರೆ ಭಾಷೆಯಲ್ಲಿ 15 ಚಿತ್ರಗಳನ್ನು ನಿರ್ದೇಶಿಸಿದ್ದೇನೆ. ನನ್ನ ತಾಯಿ ಮೈಸೂರಿನವರಾಗಿದ್ದು, ಅವರಾಸೆಯಂತೆ ಮೊದಲ ಬಾರಿಗೆ ಕನ್ನಡ ಚಿತ್ರವನ್ನು ನಿರ್ದೇಶಿಸಿದ್ದೇನೆ. ಕನ್ನಡ ಹಾಗೂ ತಮಿಳು ಸೇರಿ 2 ಭಾಷೆಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಸಂಚಾರಿ ವಿಜಯ್ ಅವರು ನಾಯಕನಾಗಿ ಅಭಿನಯಿಸಬೇಕಿತ್ತು. ಈಗ ಆ ಪಾತ್ರವನ್ನು ಶ್ರೀಜಿತ್ ಮಾಡಿದ್ದಾರೆ. ಬೆಂಗಾಳಿ, ಗುಜರಾತಿ ಚಿತ್ರಗಳಲ್ಲಿ ನಟಿಸಿರುವ ಎರಿನ್ ಅಧಿಕಾರಿ ಚಿತ್ರದ ನಾಯಕಿಯಾಗಿದ್ದು, ಪಕ್ಕಾ ಮಾಸ್ ಕಂಟೆಂಟ್ ಚಿತ್ರದಲ್ಲಿದೆ. ಶಯ್ಯಾಜಿಶಿಂಧೆ, ರವಿಕಾಳೆ ಪ್ರಮುಖ ತಾರಾಬಳಗದಲ್ಲಿದ್ದಾರೆ. ಇಳಯರಾಜ ಅವರ ಜೊತೆ ಕೆಲಸ ಮಾಡಿರುವ ಜೀವವರ್ಷಿಣಿ ಅವರು ಚಿತ್ರಕ್ಕೆ ಸಂಗೀತ ನೀಡಿದ್ದಾರೆ ಎಂದರು.

ನಾಯಕ ಶ್ರೀಜಿತ್ ಮಾತನಾಡಿ, ಕನ್ನಡ ಭಾಷೆಯ ಮೇಲಿನ ಪ್ರೀತಿಯಿಂದ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಮೊನ್ನೆ ಚೆನ್ನೈನಲ್ಲಿ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭ ಅದ್ದೂರಿಯಾಗಿ ನಡೆಯಿತು. ಇದು ನನ್ನ ಎರಡನೇ ಚಿತ್ರವಾಗಿದ್ದು, ಜಾನ್ಸಿ ನಿರ್ದೇಶಕ ಗುರುಪ್ರಸಾದ್ ಅವರ ಮೂಲಕ ಈ ಚಿತ್ರದಲ್ಲಿ ನನಗೆ ಅವಕಾಶ ದೊರೆಯಿತು. ಆಕ್ಷನ್, ಸಸ್ಪೆನ್ಸ್, ಥ್ರಿಲ್ಲರ್‌ನಂಥ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ ಎಂದರು. ನಾಯಕಿ ಎರಿನ್ ಅಧಿಕಾರಿ ಮಾತನಾಡಿ, ನಾನು ಮೂಲತಃ ಬಂಗಾಳದವಳು. ಬಂಗಾಳಿ, ತೆಲುಗು, ಹಿಂದಿ ಸೇರಿದಂತೆ ಹಲವಾರು ಚಿತ್ರಗಳಲ್ಲಿ ನಟಿಸಿದ್ದೇನೆ. ಕನ್ನಡದಲ್ಲಿದು ಮೊದಲಚಿತ್ರ ಎಂದರು. ಸಂಗೀತ ನಿರ್ದೇಶಕಿ ಜೀವವರ್ಷಿಣಿ ಮಾತನಾಡಿ ಚಿತ್ರದಲ್ಲಿ 4 ವಿಭಿನ್ನ ಹಾಡುಗಳಿವೆ, ನಾನೂ ಸಹ ಹಾಡೊಂದನ್ನು ಹಾಡಿದ್ದೇನೆ ಎಂದರು.

ಎಲ್ರ ಕಾಲೆಳಿಯತ್ತೆ ಕಾಲ ರೆಟ್ರೋ ಹಾಡು !




ಎಂಭತ್ತರ ದಶಕದಲ್ಲಿ ನಡೆಯುವ ಘಟನೆಗಳನ್ನಿಟ್ಟುಕೊಂಡು ಕಾಮಿಡಿ ಹಿನ್ನೆಲೆಯ ಕಥೆಯನ್ನು ಹೆಣೆದಿರುವ ಸುಜಯ್ ಶಾಸ್ತ್ರಿ ಅವರು ಎಲ್ರ ಕಾಲೆಳಿಯತ್ತೆ ಕಾಲ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ಆಗಿನ ಕಾಲದ ಆರತಕ್ಷತೆ ಸಮಾರಂಭವನ್ನು ನೆನಪಿಸುವ "ಹುಡುಗರಂಗಂತ ಕೇಳಬ್ಯಾಡಿರಿ" ಎನ್ನುವ ಹಾಡಿದ್ದು, ಅದರ ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿ ಕಲ್ಯಾಣ ಮಂಟಪವೊಂದರಲ್ಲಿ ನಡೆಯಿತು. ನಿರ್ದೇಶನದ ಜೊತೆ ಚಿಕ್ಕ ಪಾತ್ರವೊಂದರಲ್ಲಿ ನಟಿಸಿರುವ ಸುಜಯ್‌ಶಾಸ್ತ್ರಿ, ನಾಯಕ ಚಂದನ್‌ಶೆಟ್ಟಿ, ನಾಯಕಿ ಅರ್ಚನಾ ಕೊಟ್ಟಿಗೆ, ರಾಜ್‌ಗುರು ಹೊಸಕೋಟೆ, ಬಿಗ್‌ಬಾಸ್ ವಿಜೇತ ಮಂಜು ಪಾವಗಡ, ನಿರ್ಮಾಪಕ ಗೋವಿಂದರಾಜು ಮುಂತಾದವರು ಹಾಜರಿದ್ದು ಚಿತ್ರದ ಕುರಿತಂತೆ ಮಾತನಾಡಿದರು.

ಮೊದಲು ನಿರ್ದೇಶಕ ಸುಜಯಶಾಸ್ತ್ರಿ ಮಾತನಾಡಿ ಒಂದು ಘಟನೆ ವ್ಯಕ್ತಿಯೊಬ್ಬನ ಜೀವನದಲ್ಲಿ ಯಾವ ರೀತಿ ಪ್ರಮುಖ ಪಾತ್ರ ವಹಿಸುತ್ತದೆ, ಅದು ಆತನನ್ನು ಯಾವ ಹಂತಕ್ಕೆ ಕರೆದುಕೊಂಡು ಹೋಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ಕುತೂಹಲಕರವಾಗಿ ಹೇಳಲು ಪ್ರಯತ್ನಿಸಿದ್ದೇವೆ. ಕಾಲ ಯಾರನ್ನೂ ಬಿಡುವುದಿಲ್ಲ, ಎಲ್ಲರ ಕಾಲನ್ನೂ ಎಳೆಯುತ್ತದೆ ಎಂಬ ಸಂದೇಶವನ್ನು ಈ ಕಥೆಯ ಮೂಲಕ ತೋರಿಸುತ್ತಿದ್ದೇವೆ. ಆಗಿನ ಕಾಲದಲ್ಲಿ ನಡೆಯುತ್ತಿದ್ದ ಸಾಕಷ್ಟು ವಿಚಾರಗಳನ್ನು ಚಿತ್ರದಲ್ಲಿ ತೋರಿಸಿದ್ದೇವೆ. ರಾಜಗುರು ಹೊಸಕೋಟೆ ಅವರು ಈ ಹಾಡನ್ನು ರಚಿಸಿ ಅವರೇ ಹಾಡಿದ್ದಾರೆ, ನಿರ್ಮಾಪಕರು ಮತ್ತು ಚಿತ್ರತಂಡದವರ ಸಹಕಾರವಿಲ್ಲದಿದ್ದರೆ, ಚಿತ್ರವನ್ನು ಇಷ್ಟುಬೇಗ ಮುಗಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು.

ಸಿನಿಪದಬಂಧ-020

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಅಂಬರೀಶ್-ವಿಷ್ಣುವರ್ಧನ್-ಲಕ್ಷ್ಮಿ ಅಭಿನಯದ 1981ರ ಚಿತ್ರ (5)
3. ವಿಷ್ಣುವರ್ಧನ್-ಆರತಿ-ಲೀಲಾವತಿ ಅಭಿನಯದ 1983ರ ಚಿತ್ರ (5)
6. ನಟಿ "ನಂದಿನಿ ರಾಮಣ್ಣ" ಈ ಹೆಸರಿನಿಂದಲೇ ಪ್ರಸಿದ್ಧರು (3)
7. "ಹೀರೋ ಹೀರೋ ಹೀರೋ ಹೀರೋ" ಹಾಡಿನ ಈ ಚಿತ್ರ ಹಿಂತಿರುಗಿದೆ. (3)
9. ದೇವದಾಸಿ ಪದ್ಧತಿಯ ವಿರುದ್ಧ ಪ್ರಮೀಳಾ ಜೋಷಾಯ್ ಚಿತ್ರ (3)
13. ದ್ವಿಪಾತ್ರದಲ್ಲಿ ಕಿಚ್ಚ ಸುದೀಪ್ ಅಭಿನಯಿಸಿದ 2001ರ ಚಿತ್ರ (2)
14. ಡಾ॥ ರಾಜ್-ಜಯಂತಿ ಪಂಡರಿಬಾಯಿ ಅಭಿನಯದ 1970ರ ಚಿತ್ರ (5)
15. ಬಾಕ್ಸಿಂಗ್ ಚಾಂಪಿಯನ್ ಶಿವರಾಜಕುಮಾರ್ 1999ರ ಚಿತ್ರ (2)
16. ಕಲ್ಪನಾ-ಶ್ರೀನಾಥ್-ಮಂಜುಳಾ ಅಭಿನಯದ 1975ರ ಚಿತ್ರ (3)
17. ತಾಯಿ ಇಲ್ಲದ --- ಶ್ರುತಿ-ರಾಮಕುಮಾರ್ ಜೋಡಿಯ 1995 ರ ಚಿತ್ರ (3)
19. ಇತ್ತೀಚೆಗೆ ನಮ್ಮಿಂದ ದೂರವಾದ ಅಪ್ಪು (3)
21. ನಟಿ ರಾಧಿಕಾ ನಾರಾಯಣ್ ಕಥಾನಾಯಕಿಯಾದ ಚೊಚ್ಚಲ ಚಿತ್ರ (5)
22. ವಿಷ್ಣುವರ್ಧನ್-ಶ್ರೀನಾಥ್-ಆರತಿ ಅಭಿನಯದ 1978ರ ಚಿತ್ರ (5)

ಮೇಲಿನಿಂದ ಕೆಳಕ್ಕೆ


2. ಶಿವರಾಜಕುಮಾರ್ ಅಭಿನಯದ 2015ರ ಚಿತ್ರ (4)
4. ಅಂಬರೀಶ್-ಗೀತಾ-ಶೋಭನಾ ಅಭಿನಯದ 1985ರ ಚಿತ್ರ (4)
5. ಈ ಕನ್ನಡ ನಟನ ಹೆಸರು, ಒಂದು ನಕ್ಷತ್ರ (2)
8. ಶಂಕರನಾಗ್-ಟೈಗರ್ ಪ್ರಭಾಕರ್ ಜೋಡಿಯ 1983ರ ಚಿತ್ರ (5)
9. ಕಾಶೀನಾಥ್ ನಿರ್ದೇಶನದಲ್ಲಿ ಸುರೇಶ್ ಹೆಬ್ಳೀಕರ್ ನಾಯಕ (5)
10. "ಕನ್ನಡ ನಾಡಿನ ಹೆಮ್ಮೆಯ ಹೆಣ್ಣಿನ..." ಡಾ.ರಾಜ್ ಹಾಡಿದ ಚಿತ್ರ (3)
11. --- ಚೆನ್ನಿಗರಾಯ, ಕಾಶೀನಾಥ್ ಚಿತ್ರ (3)
12. ದೀಪಿಕಾ ಪಡುಕೋಣೆಯ ಚೊಚ್ಚಲ ಚಿತ್ರ (3)
16. ವಿಜಯ ರಾಘವೇಂದ್ರ-ರಾಧಿಕಾ ಕುಮಾರಸ್ವಾಮಿ ನಟಿಸಿದ 2002ರ ಚಿತ್ರ (4)
18. ರಾಧಿಕಾ ಪಂಡಿತ್-ತರುಣಚಂದ್ರ ನಟಿಸಿದ ಚಿತ್ರ ಮೇಲೇರಿದೆ (4)
20. ರವಿಚಂದ್ರನ್-ಸಂಗೀತಾ ನಡುವಿನ ಚಿತ್ರ, ಯಾರೇ -- ಚೆಲುವೆ (2)

ಸಿನಿ ಪದಬಂಧ 019ರ ಸರಿ ಉತ್ತರ

ಅ	ಣ್ಣ	ಅ	ತ್ತಿ	ಗೆ		ಭ	ಲೇ	ಹು	ಡು	ಗಂ
ರು		ನಾ			ಬ್ರ			ಡು		ಗಾ
ಣ		ಮಿ			ಹ್ಮ			ಗಾ		ಯ
ರಾ		ಕ	ದ	ನ		ಆ	ಸ್ಫೋ	ಟ		ಮು
ಗ				ಮ್ಮ		ಪ್ತ				ನಾ
	ರ್‍ಯಾಂ	ಬೋ		ಮ	ಯೂ	ರ		ದಿ	ಯಾ	
ಚು				ಕ್ಕ		ಕ್ಷ				ಪ್ರೇ
ಕ್ಕಿ		ಮು	ಗು	ಳು		ಕ	ದಂ	ಬ		ಮ
ಚಂ		ದ್ದಾ			ಗೀ			ಹ		ತ
ದ್ರ		ಡು			ತಾ			ದ್ದೂ		ರಂ
ಮ	ದು	ವೆ	ಮ	ನೆ		ಸೂ	ಪ	ರ್	ರಂ	ಗ

ವಿಜೇತರು: ಬಿ.ನಿಶ್ಮಿತ,
65, ಐ ಬ್ಲಾಕ್, ರಾಮಕೃಷ್ಣನಗರ
ಮೈಸೂರು ಜಿಲ್ಲೆ-570022

ಗುಬ್ಬಿಮರಿ ಹೆಣ್ಣು ಭ್ರೂಣಹತ್ಯೆಯ ಸುತ್ತ



ಹೆಣ್ಣುಮಗು ಎಂದು ತಿರಸ್ಕರಿಸಬೇಡಿ, ಹೆಣ್ಣು ಭ್ರೂಣ ಹತ್ಯೆ ಮಾಡಬೇಡಿ, ಅದನ್ನು ಪ್ರೋತ್ಸಾಹಿಸಬೇಡಿ, ಹಾಗೆ ಮಾಡೋದು ತಪ್ಪೆಂದು ಸಮಾಜಕ್ಕೆ ಸಂದೇಶ ಹೇಳುವ ಚಿತ್ರ 'ಗುಬ್ಬಿಮರಿ'. ಮಧು ಡಕಣಾಚಾರ್ ಅವರ ನಿರ್ದೇಶನದಲ್ಲಿ ಮೂಡಿ ಬಂದಿರುವ ಈ ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದ್ದು, ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನೆರವೇರಿತು. ಗುಬ್ಬಿ ಟೆಂಟ್ ಬ್ಯಾನರ್‌ನಡಿ ಆನಂದಬಾಬು ಹಾಗೂ ಡಾ॥ನಿಶ್ಚಿತ ಅವರ ನಿರ್ಮಾಣದ ಈ ಚಿತ್ರಕ್ಕೆ ಮಧು ಡಕಣಾಚಾರ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್‌ಕಟ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕರು ಮಾತನಾಡುತ್ತ ಕೆಲವರಿಗೆ ಹೆಣ್ಣು ತಾಯಿಯಾಗಿ ಬೇಕು, ಕೆಲವರಿಗೆ ಹೆಂಡತಿಯಾಗಿ ಬೇಕು, ಆದರೆ ಮಗಳಾಗಿ ಮಾತ್ರ ಯಾರಿಗೂ ಬೇಡ. ಕಾಲ ಎಷ್ಟೇ ಮುಂದುವರೆದಿದ್ದರೂ, ಇನ್ನೂ ಒಂದಷ್ಟು ವಿಕೃತ ಮನಸ್ಸಿನವರು ಹೆಣ್ಣು ಭ್ರೂಣಹತ್ಯೆಯನ್ನು ಮಾಡುತ್ತಲೇ ಇದ್ದಾರೆ. ಅಂಥವರಿಗೆ ನಮ್ಮ ಚಿತ್ರದ ಮೂಲಕ ಜಾಗೃತಿ ಮೂಡಿಸುವ ಸಣ್ಣ ಪ್ರಯತ್ನ ಮಾಡಿದ್ದೇವೆ. ಆನಂದಬಾಬು ಅವರಿಗೆ ಈ ಕಥೆಯನ್ನು ಹೇಳಿದ ಕೂಡಲೇ ತುಂಬಾ ಇಷ್ಟಪಟ್ಟು ಚಿತ್ರನಿರ್ಮಾಣಕ್ಕೆ ಮುಂದಾದರು. ಅವರ ಮೂಲಕ ಮತ್ತೊಬ್ಬ ನಿರ್ಮಾಪಕರಾಗಿ ಡಾ॥ನಿಶ್ಚಿತ ಅವರು ಜೊತೆಯಾದರು. ಇಬ್ಬರೂ ಸೇರಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸುಂದರ್ ಅವರು ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಬರೆದಿದ್ದಾರೆ. ದೀಪು-ಸಿದ್ದು ಅವರ ಛಾಯಾಗ್ರಹಣ, ಎ.ಟಿ. ರವೀಶ್ ಅವರ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕುಣಿಗಲ್ ಅವರ ಸಂಕಲನ ಗುಬ್ಬಿಮರಿ ಚಿತ್ರಕ್ಕಿದೆ ಎಂದು ಚಿತ್ರದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.

ನಂತರ ನಿರ್ಮಾಪಕರಾದ ಆನಂದಬಾಬು ಹಾಗೂ ಡಾ॥ನಿಶ್ಚಿತ ಅವರುಗಳು ತಮ್ಮ ಪ್ರಥಮ ನಿರ್ಮಾಣದ ಚಿತ್ರದ ವಿಶೇಷತೆ, ಕಂಟೆಂಟ್ ಕುರಿತಂತೆ ಮಾತನಾಡಿದರು. ಇದು ಕೇವಲ ಮಕ್ಕಳ ಚಿತ್ರವಲ್ಲ. ಮಕ್ಕಳ ಜೊತೆಗೆ ಹಿರಿಯರೂ ಸಹ ನೋಡಬೇಕಾದಂಥ ಚಿತ್ರ. ನಿರ್ದೇಶಕರು ಒಳ್ಳೆಯ ಚಿತ್ರವನ್ನು ಮಾಡಿಕೊಟ್ಟಿದ್ದಾರೆ ಎಂದು ಸಂಭಾಷಣೆ ಬರೆದಿರುವ ಸುಂದರ್ ಹೇಳಿದರು. ಚಿತ್ರದಲ್ಲಿ ಅಭಿನಯಿಸಿರುವ ಮಾಸ್ಟರ್ ಚಿನ್ಮಯ್, ಮಾಸ್ಟರ್ ಸಂಜಯ್, ಸಿಂಧು, ಕಾಮಿಡಿ ಕಿಲಾಡಿಗಳು ಖ್ಯಾತಿಯ ಸಂತು, ಚಂದ್ರು ಆಶಾ, ಪ್ರಿಯಾಂಕ (ಮಂಗಳಮುಖಿ) ಇವರೆಲ್ಲರೂ ತಮ್ಮ ಪಾತ್ರಗಳ ಕುರಿತಂತೆ ಚಿಕ್ಕದಾಗಿ ವಿವರಿಸಿದರು.

ಫ್ಯಾಂಟಸಿ ಕೂರ್ಗಿ ಫ್ಯಾಮಿಲಿಯ ಥ್ರಿಲ್ಲರ್ ಕಥೆ..



ಕೂರ್ಗಿ ಕುಟುಂಬದಲ್ಲಿ ನಡೆಯುವ ಸೈಕಲಾಜಿಕಲ್, ಥ್ರಿಲ್ಲರ್ ಕಥಾಹಂದರ ಇಟ್ಟುಕೊಂಡು ಪವನ್‌ಕುಮಾರ್ ನಿರ್ದೇಶನ ಹಾಗೂ ನಿರ್ಮಾಣ ಮಾಡಿರುವ ಚಿತ್ರ ಫ್ಯಾಂಟಸಿ. ಇತ್ತೀಚೆಗೆ ಈ ಚಿತ್ರದ ಟ್ರೈಲರ್‌ನ್ನು ನಿರ್ದೇಶಕ ಗುರು ದೇಶಪಾಂಡೆ ಅವರು ಕ್ಲಾಪ್‌ಬೋರ್ಡ್ ಮೂಲಕ ಅನಾವರಣಗೊಳಿಸಿದರು. ನಿರ್ದೇಶಕ ಪವನ್, ನಾಯಕಿ ಪ್ರಿಯಾಂಕ, ನಾಯಕ ಹೇಮಂತ್, ಮಾಸ್ಟರ್ ಅನುರಾಗ್, ಸಂಗೀತ ನಿರ್ದೇಶಕ ಗಣೇಶ್ ನಾರಾಯಣ್ ಉಪಸ್ಥಿತರಿದ್ದರು.

ಅನಂತರ ಮಾತನಾಡಿದ ಪವನ್, ಚಿಕ್ಕ ಹುಡುಗನೊಬ್ಬನ ದೃಷ್ಟಿಕೋನದಲ್ಲಿ ಈ ಚಿತ್ರವನ್ನು ಹೇಳಲು ಪ್ರಯತ್ನಿಸಿದ್ದೇನೆ. ನಾನು ಕಥೆ ರೆಡಿಮಾಡಿಕೊಂಡು ನಿರ್ಮಾಪಕರು ಸಿಗದೆ ಹತಾಶನಾದಾಗ, ನಾವಿದ್ದೇವೆ ಸಿನಿಮಾ ಆರಂಭಿಸು ಎಂದು ನನ್ನ ತಂದೆ ನನಗೆ ಧೈರ್ಯ ತುಂಬಿದ್ದರಿಂದಲೇ ಈ ಸಿನಿಮಾ ಆಯಿತು. ಭ್ರಮೆ ಮತ್ತು ವಾಸ್ತವದ ನಡುವೆ ತೆರೆದುಕೊಳ್ಳಲಿರುವ ಈ ಚಿತ್ರದಲ್ಲಿ ರೋಚಕ ಟ್ವಿಸ್ಟ್‌ಗಳು ಕುತೂಹಲ ಮೂಡಿಸುತ್ತ ಸಾಗುತ್ತವೆ. ಚಿತ್ರವನ್ನು ನಾನಂದುಕೊಂಡ ರೀತಿಯಲ್ಲೇ ಪಿಕೆಎಚ್ ದಾಸ್ ಅವರು ತೆರೆಮೇಲೆ ತಂದಿದ್ದಾರೆ. ಇಂಥ ಚಿತ್ರಕ್ಕೆ ಮುಖ್ಯವಾಗಿ ಬೇಕಾಗಿರುವುದು ಹಿನ್ನೆಲೆ ಸಂಗೀತ. ಅದನ್ನು ಗಣೇಶ್ ನಾರಾಯಣ್ ಅದ್ಭುತವಾಗಿ ನಿಭಾಯಿಸಿದ್ದಾರೆ ಎಂದರು.

ನಾಯಕಿ ಪ್ರಿಯಾಂಕ ಮಾತನಾಡುತ್ತ ಸೀರಿಯಲ್‌ನಲ್ಲಿ ಮಾಡಿದ್ದ ಚಂದ್ರಿಕಾ ಪಾತ್ರದ ಇನ್ನೊಂದು ವರ್ಷನ್ ಈ ಚಿತ್ರದಲ್ಲಿದೆ. ಒಂಥರಾ ಸೈಕಿಕ್ ಕ್ಯಾರೆಕ್ಟರ್, ಮನೆಯಲ್ಲಿ ನಾವು ಮಕ್ಕಳ ಮುಂದೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ ಎಂದರು. ಹಿರಿಯನಟ ಬಲ ರಾಜವಾಡಿ ಕುಟುಂಬದ ಯಜಮಾನ ಭಾಸ್ಕರ ಪೊನ್ನಪ್ಪನಾಗಿ ಕಾಣಿಸಿಕೊಂಡಿದ್ದಾರೆ. ಒಂದು ಮರ್ಡರ್ ಮಿಸ್ಟ್ರಿ ಮೂಲಕ ಆರಂಭವಾಗುವ ಕಥೆ ನಂತರ ಹಾರರ್ ರೂಪ ಪಡೆಯುತ್ತದೆ. ಕೊನೆಗೆ ಸೈಕಲಾಜಿಕಲ್ ಥ್ರಿಲ್ಲರ್ ಜಾನರ್‌ಗೆ ಟರ್ನ್ ಆಗುತ್ತದೆ. ನಿರ್ದೇಶಕ ಪವನ್‌ಕುಮಾರ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ನಿರ್ದೇಶಕರ, ತಂದೆ ಟಿ.ರಂಗಸ್ವಾಮಿ ಅವರು ಮಗನ ಚಿತ್ರಕ್ಕೆ ಬಂಡವಾಳ ಹಾಕುವ ಮೂಲಕ ಹೆಗಲಾಗಿ ನಿಂತಿದ್ದಾರೆ.

ಮಂಡ್ಯ ವಿವಿಗೆ ವಿದ್ಯುಕ್ತ ಉದ್ಘಾಟನೆ, ವಿವಿಧ ಅಭಿವೃದ್ಧಿ ಕಾಮಗಾರಿ ಚಾಲನೆ, ಭಾರತೀ ವಿದ್ಯಾಸಂಸ್ಥೆ ವಜ್ರಮಹೋತ್ಸವ ಕಾರ್ಯಕ್ರಮ

500 ಕೋಟಿ ವೆಚ್ಚದಲ್ಲಿ ಶಾಖಾ ನಾಲೆಗಳ ಅಭಿವೃದ್ಧಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ



ಮಂಡ್ಯ, ಆ.11– ಜಿಲ್ಲೆಯಲ್ಲಿರುವ ವಿ.ಸಿ. ನಾಲೆಯ ಶಾಖಾ ನಾಲೆಗಳನ್ನು ಸುಮಾರು 500 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ನಗರದ ಮಂಡ್ಯ ವಿವಿಯ ಆವರಣದಲ್ಲಿ ಜಿಲ್ಲಾಡಳಿತ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಜೀವನೋಪಾಯ ವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಜಲಸಂಪನ್ಮೂಲ ಸಚಿವನಾಗಿದ್ದ ಸಂದರ್ಭದಲ್ಲಿ ಕೆಆರ್‌ಎಸ್‌ನ ಎಲ್ಲಾ ಗೇಟ್‌ಗಳನ್ನು ಬದಲಾವಣೆ ಮಾಡಲು ಮುಂದಾಗಿದ್ದು, ಈಗಲೂ ಕಾಮಗಾರಿ ನಡೆಯುತ್ತಿದೆ. ಶಾಖಾ ನಾಲೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಪ್ರತಿಯೊಬ್ಬ ರೈತರ ಜಮೀನುಗಳಿಗೆ ನೀರು ತಲುಪುವಂತೆ ಮಾಡುತ್ತೇನೆ ಎಂದು ಹೇಳಿದರು. ಎಷ್ಟೋ ನಾಯಕರು ಬಂದು ಹೋದರು. ಆದರೆ ಜಿಲ್ಲೆಯ ಸಮಸ್ಯೆ, ಕಾರ್ಖಾನೆ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಅವರೆಲ್ಲಾ ಕೇವಲ ರಾಜಕೀಯ ಭಾಷಣಗಳಿಗೆ ಸೀಮಿತರಾದರು. ಸಾಮಾಜಿಕ ನ್ಯಾಯ ಎಂಬುದು ಮಾತಿನಲ್ಲಿರಬಾರದು. ಮಾತಿನಿಂದ ಜನರನ್ನು ಮರಳು ಮಾಡಲು ಸಾಧ್ಯವಿಲ್ಲ. ಕೆಲಸ ಮಾಡಿ ತೋರಿಸಬೇಕು. ನುಡಿದಂತೆ ನಡೆದವರಿಗೆ ಮಾತ್ರ ಕಾಲವಾಗಿದೆ. ಅದನ್ನು ರೈತರು, ಜನರು ಅರ್ಥ ಮಾಡಿಕೊಂಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕರಿಗೆ ತಿರುಗೇಟು ನೀಡಿದರು.

ಸ್ವಸಹಾಯ ಸಂಘಗಳ ಉತ್ಪನ್ನಗಳ ಆನ್‌ಲೈನ್ ಮಾರಾಟಕ್ಕೆ ಒಡಂಬಡಿಕೆ: ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್‌ನಾರಾಯಣ ಮಾತನಾಡಿ, ರಾಜ್ಯದ ಸ್ವಸಹಾಯ ಸಂಘಗಳ ಉತ್ಪನ್ನಗಳಿಗೆ ಅಮೆಜಾನ್, ಫ್ಲಿಪ್‌ಕಾರ್ಟ್, ಮಿಶೋ ಕಂಪನಿಗಳು ಮಾರುಕಟ್ಟೆ ಒದಗಿಸಲು ಮುಂದಾಗಿದ್ದು, ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದರು. ಜೀವನೋಪಾಯ, ಉದ್ಯಮಶೀಲ ಇಲಾಖೆಯಿಂದ ಪ್ರೋತ್ಸಾಹ ನೀಡಲು 1,200 ಕೋಟಿ ರೂ. ಬಜೆಟ್‌ನಲ್ಲಿ ಸಿಎಂ ಕೊಟ್ಟಿದ್ದಾರೆ. 460 ಕೋಟಿ ರೂ. ಗ್ರಾಮ ಒಕ್ಕೂಟಗಳಿಗೆ ಬಿಡುಗಡೆ ಮಾಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಜೀವನ ನಡೆಸಲು ಮಹಿಳೆಯರ ಪರಿಶ್ರಮಕ್ಕೆ ಶಕ್ತಿ ತುಂಬಲು ಮುಖ್ಯಮಂತ್ರಿಗಳು ಬದ್ಧರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಚಿವರಾದ ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ, ಶಾಸಕರಾದ ಎಂ.ಶ್ರೀನಿವಾಸ್, ಕೆ.ಸುರೇಶ್‌ಗೌಡ, ಸಂಸದೆ ಸುಮಲತಾ ಅಂಬರೀಷ್, ಜೀವನೋಪಾಯ ಇಲಾಖೆಯ ನಿರ್ದೇಶಕಿ ಮಂಜುಶ್ರೀ, ಡಿಸಿ ಎಸ್.ಅಶ್ವತಿ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಎಡಿಸಿ ಡಾ.ಹೆಚ್.ಎಲ್.ನಾಗರಾಜು, ಜಿಪಂ ಸಿಇಓ ಶಾಂತಾಹುಲ್ಮನಿ ಮತ್ತಿತರರಿದ್ದರು.

ಸ್ತ್ರೀ ಸ್ವಸಹಾಯ ಸಂಘಗಳಿಗೆ ತಲಾ 1.50 ಲಕ್ಷ ರೂ. ಸಾಲ ಸೌಲಭ್ಯ

ಮಂಡ್ಯ: ಸ್ತ್ರೀ ಸಾಮರ್ಥ್ಯ ಯೋಜನೆಯಡಿ ರಾಜ್ಯದ ಎಲ್ಲಾ ಗ್ರಾಮದ ಸ್ತ್ರೀ ಸ್ವಸಹಾಯ ಸಂಘಗಳಿಗೆ 1.50 ಲಕ್ಷ ರೂ. ಸಾಲ ಸೌಲಭ್ಯ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರತಿ ಗ್ರಾಮದ ಸ್ವಸಹಾಯ ಸಂಘಗಳಿಗೆ ಸಾಲ ನೀಡಲಾಗುತ್ತಿದೆ ಇದಕ್ಕಾಗಿ ಸುಮಾರು 500 ಕೋಟಿ ರೂ. ಮೀಸಲಿರಿಸಲಾಗಿದ್ದು, ರಾಜ್ಯದ 36 ಸಾವಿರ ಗ್ರಾಮಗಳಿಗೂ ಇದರ ಪ್ರಯೋಜನ ದೊರೆಯಲಿದೆ. ಅಲ್ಲದೆ, ಉದ್ಯೋಗ ಸಾಮರ್ಥ್ಯ ಯೋಜನೆಯಡಿ 5 ಲಕ್ಷ ಗ್ರಾಮೀಣ ಯುವಕರಿಗೆ ಉದ್ಯೋಗ ನೀಡುವ ಯೋಜನೆಯೂ ಇದಾಗಿದೆ ಎಂದು ತಿಳಿಸಿದರು.

ಮಹಿಳೆಯರು ಮನೆಗೆ ಸೀಮಿತವಾಗದೆ ಆರ್ಥಿಕ, ರಾಜಕೀಯ, ಸ್ವಾವಲಂಬನೆಯತ್ತ ಹೆಜ್ಜೆ ಹಾಕಲು ಪ್ರೋತ್ಸಾಹ ನೀಡಿದರೆ ದೇಶದ ಶಕ್ತಿಯು ಮತ್ತಷ್ಟು ಹೆಚ್ಚಲಿದೆ.ಮಹಿಳೆಯರ ಸಬಲೀಕರಣದಿಂದ ಇದು ಸಾಧ್ಯವಾಗಲಿದೆ. ಅದಕ್ಕಾಗಿಯೇ ಸಂಜೀವಿನಿ, ಸ್ತ್ರೀ ಸ್ವಸಹಾಯ ಸಾಮರ್ಥ್ಯ ಯೋಜನೆಯಡಿ ಜೀವನೋಪಾಯ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದರು.

ಡಿಸೆಂಬರ್‌ನಲ್ಲಿ ಕೆಆರ್‌ಎಸ್ ಮಹೋತ್ಸವ: ಡಿಸೆಂಬರ್‌ನಲ್ಲಿ ಕೆಆರ್‌ಎಸ್ ಮಹೋತ್ಸವವನ್ನು ಅಂತಾರಾಷ್ಟ್ರೀಯ ಮಟ್ಟದ ರೀತಿಯಲ್ಲಿ ಆಚರಿಸಲಾಗುವುದು. ಈಗಾಗಲೇ ಕೆಆರ್‌ಎಸ್‌ನ ಎಲ್ಲಾ ಗೇಟ್‌ಗಳ ಬದಲಾವಣೆ ಕಾಮಗಾರಿ ನಡೆಯುತ್ತಿದ್ದು, ಶೀಘ್ರದಲ್ಲಿಯೇ ಮುಗಿಯಲಿದೆ. ನಂತರ ಡಿಸೆಂಬರ್‌ನಲ್ಲಿ 75ನೇ ಕೆಆರ್‌ಎಸ್ ಸಂಭ್ರಮ ಮಹೋತ್ಸವ ನಡೆಯಲಿದೆ ಎಂದು ತಿಳಿಸಿದರು.

ನೇರ, ದಿಟ್ಟ ರಾಜಕಾರಣಿ ಜಿ.ಮಾದೇಗೌಡರು: ಸಿಎಂ



ಭಾರತೀನಗರ,ಆ.11– ದಿ.ಜಿ.ಮಾದೇಗೌಡರು ಅಧಿಕಾರಕ್ಕೆ ಎಂದೂ ಅಂಟಿಕೊಂಡು ಕೂತವರಲ್ಲ, ಅವರು ನೇರ, ದಿಟ್ಟ ರಾಜಕಾರಣಿಯಾಗಿದ್ದರು ಎಂದು ಮುಖ್ಯಮಂತ್ರಿ ಬಸವರಾಜ ಎಸ್.ಬೊಮ್ಮಾಯಿ ಹೇಳಿದರು.

ಇಲ್ಲಿನ ಭಾರತೀ ವಿದ್ಯಾಸಂಸ್ಥೆಯಲ್ಲಿ 4 ದಿನಗಳ ಕಾಲ ಆಯೋಜಿಸಿರುವ ವಜ್ರಮಹೋತ್ಸವ ಕಾರ್ಯಕ್ರಮವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, ದಿ.ಜಿ.ಮಾದೇಗೌಡರಿಗೆ ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಕಾಳಜಿ ಹೊಂದಿದ್ದರು. ಅವರು ಅಧಿಕಾರಕ್ಕೆ ಎಂದೂ ಅಂಟಿಕೊಂಡು ಕೂತವರಲ್ಲ ಎಂದ ಅವರು, ನಾನು ಮುಖ್ಯಮಂತ್ರಿಯಾಗಿ ಇಲ್ಲಿಗೆ ಬಂದಿಲ್ಲ ಬದಲಿಗೆ ಜಿ.ಮಾದೇಗೌಡರ ದೊಡ್ಡ ಅಭಿಮಾನಿಯಾಗಿ ಹಾಗೂ ಅವರ ಕುಟುಂಬದ ಸದಸ್ಯನಾಗಿ ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ ಎಂದರು.

ಮೂರು ಬೇಡಿಕೆಗಳಿಗೆ ಅಸ್ತು: ಜಿಲ್ಲೆಯ ಹೆಚ್.ಮಲ್ಲಿಗೆರೆಯಲ್ಲಿ ಜಿ.ಮಾದೇಗೌಡರ ಗಾಂಧಿ ಗ್ರಾಮವನ್ನು ಅಭಿವೃದ್ಧಿಪಡಿಸಬೇಕೆಂದು ಕನಸು ಕಟ್ಟಿದ್ದರು. ಹಾಗಾಗಿ ಗಾಂಧಿ ಗ್ರಾಮದ ಅಭಿವೃದ್ಧಿಗೆ 2 ಕೋಟಿ ರೂ. ಹಣ ಬಿಡುಗಡೆಗೊಳಿಸುತ್ತಿದ್ದೇನೆ. ವಿದ್ಯಾಸಂಸ್ಥೆಯ ಮಕ್ಕಳಿಗಾಗಿ ಕ್ರೀಡಾಂಗಣ ನಿರ್ಮಾಣಕ್ಕೆ ಅನುದಾನ ನೀಡುವ ಜೊತೆಗೆ ಮಧು ಜಿ.ಮಾದೇಗೌಡ ಅವರ ಬೇಡಿಕೆಯಂತೆ ಮೆಡಿಕಲ್ ಕಾಲೇಜಿಗೆ ಮಂಜೂರು ಮಾಡುತ್ತೇನೆ ಇದಕ್ಕಾಗಿ 17 ಎಕರೆ ಸ್ಥಳ ಗುರುತಿಸಿಕೊಡಿ ಎಂದು ತಿಳಿಸಿದರು.

ಭಾರತೀ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಮತ್ತಷ್ಟು ಮಹತ್ವ ನೀಡಲು ಸರ್ಕಾರ ಈ ವಿದ್ಯಾಸಂಸ್ಥೆಗೆ ನೆರವಾಗಬೇಕು ಎಂದು ಮನವಿ ಮಾಡಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮೊದಲು ದಿ.ಜಿ.ಮಾದೇಗೌಡರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುಷ್ಪ ನಮನ ಸಲ್ಲಿಸಿದರು. ನಂತರ ಭಾರತೀ ವಿದ್ಯಾಸಂಸ್ಥೆಯಲ್ಲಿ ನೂತನವಾಗಿ ನಿರ್ಮಿಸಿರುವ ವಜ್ರಮಹೋತ್ಸವ ಕಟ್ಟಡವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಭಾರತೀನಗರ ಗ್ರಾಮ ವತಿಯಿಂದ ಮುಖ್ಯಮಂತ್ರಿಗಳಿಗೆ ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಬಿ.ಬಸವರಾಜು, ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಟ್ರಸ್ಟಿ ಆಶಯ್ ಮಧು ಮಾದೇಗೌಡ, ಚುಂಚನಪಾಷ್ಣ ಎಸ್.ಬಸವೇಗೌಡ, ಎಸ್.ಜಯರಾಮು, ಮುದ್ದಯ್ಯ, ಮಾ.ರಾಮಕೃಷ್ಣ ಸೇರಿದಂತೆ ಇತರರಿದ್ದರು.

ಪಾಲಹಳ್ಳಿಯಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ

ಶ್ರೀರಂಗಪಟ್ಟಣ, ಆ.11– ತಾಲೂಕಿನ ಪಾಲಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯಿಂದ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ನಡೆಯಿತು.

ವೈದ್ಯಾಧಿಕಾರಿ ಡಾ.ಎಸ್.ಸುರೇಶ್ ಮಾತನಾಡಿ, ಮಗು ಜನಿಸಿದ ಅರ್ಧ ಗಂಟೆಯೊಳಗೆ ಮಗುವಿಗೆ ಎದೆಹಾಲು ನೀಡಬೇಕು. ಇದರಿಂದ ತಾಯಿಯ ಎದೆಯಲ್ಲಿ ಹಾಲು ವೃದ್ಧಿಯಾಗಲು ಸಹಕಾರಿಯಾಗುತ್ತದೆ. ತಾಯಿಯ ಮೊದಲ ಹಾಲಿನಲ್ಲಿ(ಗಿಣ್ಣಾಲು)ಕೊಲೆಸ್ಟ್ರಾಲ್ ಎಂಬ ಅಂಶ ಹೆಚ್ಚು ಇದ್ದು 10 ಮಾರಕ ರೋಗಗಳಿಗೆ ರಾಮಬಾಣವಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ಬಿ.ಹೇಮಣ್ಣ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಪುಣ್ಯವತಿ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಲೀಲಾವತಿ, ಗ್ರಾಮದ ಮುಖಂಡರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಮರ ಬಿದ್ದು ರೈತ ಸಾವು



ಗೋಣಿಕೊಪ್ಪ ಆ.11–ಅಮ್ಮತ್ತಿ– ಹೊಸಕೋಟೆ ಗ್ರಾಮದ ಹಿಲ್‌ಸೈಡ್ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಮರ ಬಿದ್ದು ಕೃಷಿಕ ಸಾವಿಗೀಡಾಗಿದ್ದಾರೆ. ಗುಹ್ಯ ಕಕ್ಕಟ್‌ಕಾಡ್ ನಿವಾಸಿ ಪ್ರಕಾಶ್ (52) ಮೃತ ದುರ್ದೈವಿ. ಮೃತರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

ಗುರುವಾರ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಗಾಳಿ, ಮಳೆಗೆ ಒಣಗಿದ್ದ ದೊಡ್ಡ ಗಾತ್ರದ ಮರ ಪ್ರಕಾಶ್ ಅವರ ಮೇಲೆ ಬಿದ್ದಿದ್ದು, ಸ್ಥಳದಲ್ಲಿಯೇ ಮೃತಪಟ್ಟರು. ಜತೆಯಲ್ಲಿ ಕೆಲಸ ಮಾಡುತ್ತಿದ್ದ ರಘು ಎಂಬುವವರು ಅಪಾಯದಿಂದ ಪಾರಾದರು. ವಿರಾಜಪೇಟೆ ತಹಸೀಲ್ದಾರ್ ಅರ್ಚನಾ ಭಟ್, ಅಮ್ಮತ್ತಿ ಕಂದಾಯ ಪರಿವೀಕ್ಷಕ ಅನಿಲ್ ಪರಿಶೀಲನೆ ನಡೆಸಿದರು.

ಎಂ.ಕೆ. ಮಾದಪ್ಪ ನಿಧನ



ಶ್ರೀಮಂಗಲ, ಆ.11– ಇಲ್ಲಿನ ಪತ್ರಿಕಾ ವಿತರಕರಾದ ಎಂ.ಕೆ. ಮಾದಪ್ಪ(67) ಗುರುವಾರ ಸಂಜೆ ನಿಧನರಾದರು. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಇವರು ಶ್ರೀಮಂಗಲ ಎಪಿಸಿಎಂಎಸ್ ಹಾಲಿ ನಿರ್ದೇಶಕರಾಗಿದ್ದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಶ್ರೀಮಂಗಲದಲ್ಲಿರುವ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಡಗಲ್ಲಿ ಮಳೆ ಕಡಿಮೆಯಾದರೂ ತಪ್ಪದ ಭೂ ಕುಸಿತ

ಮಡಿಕೇರಿ,ಆ.11– ಕೊಡಗು ಜಿಲ್ಲೆಯಲ್ಲಿ ಮಳೆಯ ತೀವ್ರತೆ ಕಳೆದ 2 ದಿನಗಳಿಂದ ಇಳಿಕೆ ಕಂಡಿದೆ. ಆದರೆ ಮತ್ತೆ ಮಳೆ ಬಿರುಸು ಪಡೆಯುವ ಎಲ್ಲಾ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಶುಕ್ರವಾರ ಬೆಳಗಿನ 8.30ರವರೆಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ 115.6 ಮಿ.ಮೀ.ನಿಂದ 204.4 ಮಿ.ಮೀ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಇದೀಗ ಮಳೆ ಕಡಿಮೆಯಾದ ಕಾರಣ ನದಿಗಳಲ್ಲಿ ಕೂಡ ನೀರಿನ ಮಟ್ಟ ಪ್ರವಾಹ ಸ್ಥಿತಿಯಿಂದ ಇಳಿಕೆ ಕಂಡಿದೆ. ಆದರೆ ತಗ್ಗು ಪ್ರದೇಶಗಳಲ್ಲಿ ಪ್ರವಾಹ ನೀರು ನಿಂತಿದ್ದು, ಬೆಳೆಗಳಿಗೆ ಹಾನಿಯಾಗುವ ಲಕ್ಷಣಗಳು ಕಂಡು ಬರುತ್ತಿದೆ. ಮಳೆ ಇಳಿಕೆ ಕಂಡಿದ್ದರೂ ಶೀತ ಹವಾಮಾನ ಮತ್ತು ಭಾರೀ ಗಾಳಿಗೆ ಹಾನಿಗಳಾದ ಬಗ್ಗೆ ವರದಿಯಾಗಿದೆ.





ಭೂ ಕುಸಿತ: ಮಳೆ ಇಳಿಕೆಯಾದರೂ ಕೂಡ ಅಲ್ಲಲ್ಲಿ ಭೂ ಕುಸಿತ ಘಟಿಸಿದ ಬಗ್ಗೆ ವರದಿಯಾಗಿದೆ. ನೆನ್ನೆ ದಿನ ಸೋಮವಾರಪೇಟೆ ತಾಲೂಕಿನ ಹರಪಳ್ಳಿ ಗ್ರಾಮದಲ್ಲಿ ಭಾರೀ ಭೂಕುಸಿತ ಸಂಭವಿಸಿತ್ತು. ಈ ಘಟನೆಯ ನಡುವೆಯೇ ಗುರುವಾರ ಬೆಳಗಿನ ಜಾವ ಅತಿಯಾದ ಮಳೆಗೆ ಕೊಡ್ಲಿಪೇಟೆ ವ್ಯಾಪ್ತಿಯ ಊರುಗುತ್ತಿ ಗ್ರಾಮದಲ್ಲಿ ಕಾಫಿ ತೋಟದ ಒಳಗೆ ಭೂ ಕುಸಿತ ಸಂಭವಿಸಿದೆ. ಅಲ್ಲಿನ ನಿವಾಸಿ ಸುಮಿತ್ರ ವೆಂಕಟೇಶ್ ಎಂಬವರಿಗೆ ಸೇರಿದ ಕಾಫಿ ತೋಟದಲ್ಲಿ ಭೂ ಕುಸಿತ ಸಂಭವಿಸಿ ಅಂದಾಜು ಅರ್ಧ ಎಕರೆ ಕಾಫಿ ತೋಟ ಕೊಚ್ಚಿ ಹೋಗಿದೆ. ಕಾಫಿ, ಕರಿಮೆಣಸು ಸೇರಿದಂತೆ ಕೃಷಿ ಫಸಲಿಗೆ ಹಾನಿಯಾಗಿದೆ.

ರಸ್ತೆಗೆ ಹಾನಿ: ಮಂಚಳ್ಳಿ–ಕುಟ್ಟ ಸಂಪರ್ಕ ರಸ್ತೆಯ ಪೂಜೆಕಲ್ಲು ಎಂಬಲ್ಲಿ ಭೂ ಕುಸಿಯುವ ಹಂತಕ್ಕೆ ತಲುಪಿದ್ದು, ರಸ್ತೆಗೆ ಹಾನಿಯಾಗುವ ಸಾಧ್ಯತೆ ಕಂಡು ಬಂದಿದೆ. ರಸ್ತೆ ಬದಿಯ ಮಣ್ಣು ಗುಡ್ಡೆಯಲ್ಲಿ ಭಾರೀ ಬಿರುಕು ಮೂಡಿದ್ದು ಕುಸಿಯುವ ಸಾಧ್ಯತೆಗಳಿದೆ. ರಸ್ತೆಯ ಕೆಳ ಭಾಗದಲ್ಲಿ ಕಾಫಿ ತೋಟವಿದ್ದು, ಭೂ ಕುಸಿತದಿಂದ ತೋಟಕ್ಕೂ ಹಾನಿಯಾಗಲಿದೆ. ಸ್ಥಳದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನ ಸವಾರರಿಗೆ ಅಪಾಯದ ಮುನ್ಸೂಚನೆ ನೀಡಲಾಗಿದೆ. ಬಿರುನಾಣಿ–ಹುದಿಕೇರಿ ಸಂಪರ್ಕ ರಸ್ತೆಗೆ ಭೂ ಕುಸಿತದಿಂದ ಹಾನಿಯಾಗಿದೆ. ಪೊನ್ನಂಪೇಟೆ ತಹಸೀಲ್ದಾರ್ ಪ್ರಶಾಂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಳೆ ಮುಂದುವರೆದಲ್ಲಿ 20 ಅಡಿ ದೂರದಲ್ಲಿರುವ ಮನೆ ಹಾಗೂ ಸಮೀಪದಲ್ಲಿರುವ ರಸ್ತೆಗೆ ಹಾನಿಯಾಗುವ ಅಪಾಯ ಇದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದರು. ಮಾತ್ರವಲ್ಲದೇ ಪೊರಾಡು ಗ್ರಾಮದ ಮಲಕೆ–ಎತ್ತುಕಡವು ಸಂಪರ್ಕ ರಸ್ತೆಗೆ ಕೂಡ ಭೂ ಕುಸಿತದಿಂದ ಹಾನಿಯಾಗಿದೆ. ರಸ್ತೆಯ ದುರಸ್ತಿಗೆ ಜಿಲ್ಲಾಡಳಿತಕ್ಕೆ ವರದಿ ನೀಡುವುದಾಗಿ ಈ ತಹಸೀಲ್ದಾರ್ ಪ್ರಶಾಂತ್ ತಿಳಿಸಿದ್ದಾರೆ.

ಕುಶಾಲನಗರ ಪಪಂ ಕಚೇರಿಗೆ ಜಿಲ್ಲಾಧಿಕಾರಿ ಭೇಟಿ: ವಿವಿಧ ಯೋಜನೆಗಳ ಬಗ್ಗೆ ಚರ್ಚೆ



ಕುಶಾಲನಗರ, ಆ.11– ಇಲ್ಲಿನ ಪಟ್ಟಣ ಪಂಚಾಯಿತಿ ಕಚೇರಿಗೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಟ್ಟಣ ಪಂಚಾಯಿತಿಯ ಗುಂಡುರಾವ್ ಬಡಾವಣೆಯಲ್ಲಿ ರಚಿಸಲಾಗಿರುವ ಐಡಿಎಸ್‌ಎಂಟಿ ಯೋಜನೆಯಡಿ ವಿವಿಧ ಕಾರ್ಯಸೂಚಿಗಳ ಬಗ್ಗೆ ಚರ್ಚೆ ನಡೆಸಿದರು.

ಸಭೆಯಲ್ಲಿ ಐಡಿಎಸ್‌ಎಂಟಿ ಗೆ ಸೇರಿದ ಜಾಗದಲ್ಲಿ ತಾಲೂಕು ಆಡಳಿತ ಭವನ, ಅಂಬೇಡ್ಕರ್ ಭವನ ನಿರ್ಮಾಣ, ವಸತಿರಹಿತರಿಗೆ ಗುಂಪು ಮನೆ ನಿರ್ಮಾಣ ಸಂಬಂಧ, ಒಳಚರಂಡಿ ಕಾಮಗಾರಿ, ಕುಡಿವ ನೀರಿನ ಸರಬರಾಜು ಯೋಜನೆ ಆರ್ಥಿಕ ಬಿಡ್ ಘಟನೋತ್ತರ ಮಂಜೂರಾತಿ ಸೇರಿದಂತೆ ಗುಂಡುರಾವ್ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಸರ್ವೆ ನಂ.28ರ ಜಾಗದ ದಾವೆ ಮತ್ತಿತರ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು.

ಅಭಿವೃದ್ಧಿ ಕಾಮಗಾರಿಗಳನ್ನು ಅತ್ಯಂತ ಯೋಜನಾಬದ್ಧವಾಗಿ ನಿರ್ಮಾಣ ಮಾಡಬೇಕಿದೆ. ದೂರದೃಷ್ಟಿಯ ಯೋಜನೆಗಳನ್ನು ಕೈಗೊಳ್ಳಿ. ಭವಿಷ್ಯದಲ್ಲಿ ಸಮಸ್ಯೆ ಉಂಟಾಗದ ರೀತಿಯಲ್ಲಿ ರಸ್ತೆ ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕಿದೆ. ಆಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಂಡು ಕಾಮಗಾರಿ ಕೈಗೊಳ್ಳಲು ಜಿಲ್ಲಾಧಿಕಾರಿ ಸಲಹೆ ನೀಡಿದರು. ಸಭೆಯಲ್ಲಿ ತಹಸೀಲ್ದಾರ್ ಟಿ.ಎಂ.ಪ್ರಕಾಶ್, ಕುಶಾಲನಗರ ಪ.ಪಂ ಅಧ್ಯಕ್ಷ ಜೈವರ್ಧನ್, ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಸೇರಿದಂತೆ ನಗರಾಭಿವೃದ್ಧಿ, ಯೋಜನಾ ಪ್ರಾಧಿಕಾರದ ಅಧಿಕಾರಿಗಳು ಹಾಜರಿದ್ದರು.

ಕೊಡಗಲ್ಲಿ ಗೊಬ್ಬರ ಪರೀಕ್ಷಾ ಕೇಂದ್ರ ಸ್ಥಾಪನೆಗೆ ಒತ್ತಾಯ



ಪೊನ್ನಂಪೇಟೆ, ಆ.11– ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವಂತೆ ಕೊಡಗಿನಲ್ಲಿಯೂ ಗೊಬ್ಬರ ಪರೀಕ್ಷಾ ಕೇಂದ್ರವನ್ನು ಸರಕಾರ ಕೂಡಲೇ ಸ್ಥಾಪಿಸಬೇಕೆಂದು ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ, ಜಿಪಂ ಮಾಜಿ ಸದಸ್ಯ ಬಿ.ಎನ್ ಪ್ರಥ್ಯು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಳೆದ 2 ವರ್ಷಗಳಿಂದ ಜಿಲ್ಲೆಗೆ ಕಳಪೆ ಮಟ್ಟದ ರಸಗೊಬ್ಬರ ಸರಬರಾಜಾಗುತ್ತಿದ್ದು, ಇದರಿಂದ ರೈತರು ಕಂಗಾಲಾಗಿದ್ದಾರೆ. ಕಳಪೆ ಗೊಬ್ಬರ ಸರಬರಾಜು ವಿರುದ್ಧ ಜಿಲ್ಲೆಯಲ್ಲಿ ಸಾಕಷ್ಟು ದೂರುಗಳು ಕೇಳಿ ಬಂದಿದ್ದರೂ ರೈತರಿಗೆ ಸೂಕ್ತ ಸ್ಪಂದನೆ ಇದುವರೆಗೂ ದೊರೆತಿಲ್ಲ. ಕೆಲವು ಗೊಬ್ಬರ ಕಂಪನಿಗಳ ಮೇಲೆ ಜಿಲ್ಲೆಯ ಜನಪ್ರತಿನಿಧಿಗಳೇ ಸಂಶಯ ವ್ಯಕ್ತಪಡಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಮಿಷನ್ ಹಣದಾಸೆಗೆ ಕೆಲ ಕಂಪನಿಗಳೊಂದಿಗೆ ಶಾಮಿಲಾಗಿರುವ ಇಲಾಖೆಯೇ ಕಳಪೆ ಗೊಬ್ಬರವನ್ನು ಸರಬರಾಜು ಮಾಡಲು ಪ್ರೋತ್ಸಾಹ ನೀಡುತ್ತಿದೆ. ಇದೊಂದು ದೊಡ್ಡ ಜಾಲವಾಗಿದ್ದು, ಇದರಿಂದ ಕೊಡಗಿನ ಕೃಷಿಕರು ಕಂಟಕ ಎದುರಿಸುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ವರ್ಷವಿಡೀ ಕೃಷಿ ಚಟುವಟಿಕೆಗಳನ್ನು ಹೊಂದಿರುವ ಕೊಡಗಿನಲ್ಲಿ ಗೊಬ್ಬರ ಪರೀಕ್ಷೆ ಕೇಂದ್ರ ಇಲ್ಲದಿರುವುದು ಕೃಷಿಕರಿಗೆ ದೊಡ್ಡ ಹಿನ್ನಡೆಯಾಗಿದೆ. ಹಿಂದೆ ತಾನು ಜಿಪಂ ಸದಸ್ಯರಾಗಿದ್ದ ಸಂದರ್ಭದಲ್ಲಿ ಹಲವು ಸಾಮಾನ್ಯ ಸಭೆಗಳಲ್ಲಿ ಈ ಕುರಿತು ಪ್ರಸ್ತಾಪಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಇನ್ನಾದರೂ ಜಿಲ್ಲೆಯ ಕೃಷಿಕರ ಹಿತ ದೃಷ್ಟಿಯಿಂದ ಸರ್ಕಾರ ಕೂಡಲೇ ಜಿಲ್ಲೆಯ ಎಲ್ಲಾ ರೈತರಿಗೆ ಅನುಕೂಲವಾಗುವ ಸ್ಥಳದಲ್ಲಿ ಗೊಬ್ಬರ ಪರೀಕ್ಷಾ ಕೇಂದ್ರವನ್ನು ಮಂಜೂರು ಮಾಡಬೇಕು. ಈ ಕುರಿತು ಜನಪ್ರತಿನಿಧಿಗಳು ಒತ್ತಡ ಹೇರಬೇಕು ಎಂದು ಬಿ.ಎನ್.ಪ್ರಥ್ಯು ಒತ್ತಾಯಿಸಿದ್ದಾರೆ.

ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು



ವಿರಾಜಪೇಟೆ,ಆ.11– ವಿರಾಜಪೇಟೆ ನಗರದ ತೆಲುಗರ ಬೀದಿ ನಿವಾಸಿ ಟಿ.ಕೆ.ಶ್ರೀನಿವಾಸ್ ಶೆಟ್ಟಿ(65) ಕೆಲವೇ ದಿನಗಳ ಹಿಂದೆ ಅಪಘಾತಗೊಂಡು ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ಮೃತಪಟ್ಟಿದ್ದಾರೆ. ಕಳೆದ ಕೆಲವು ದಿನಗಳ ಹಿಂದೆ ವಿರಾಜಪೇಟೆ ಹೊರವಲಯದಲ್ಲಿ ಅಪಘಾತವಾಗಿ ಗಂಭೀರವಾಗಿ ಗಾಯಗೊಂಡ ಹಿನ್ನೆಲೆ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿರುವುದಾಗಿ ಕುಟುಂಬಸ್ಥರು ತಿಳಿಸಿದ್ದಾರೆ.

ಶ್ರೀನಿವಾಸ್ ಅವರು ವ್ಯಾಪಾರಸ್ಥರಾಗಿದ್ದು ಅನೇಕ ವರ್ಷಗಳಿಂದ ವಿರಾಜಪೇಟೆ ತಾಲೂಕು ಸೇರಿದಂತೆ ಇತರೆಡೆಗಳಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಸಗಟು ವ್ಯಾಪಾರ ಮಾಡುತ್ತಿದ್ದರು. ತೆಲುಗರ ಬೀದಿಯಲ್ಲಿರುವ ಶ್ರೀ ಮಾರಿಯಮ್ಮ ಮತ್ತು ಅಂಗಾಳ ಪರಮೇಶ್ವರಿ ದೇವಾಲಯದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ತೆಲುಗರ ಬೀದಿಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು. ಇವರು ಪತ್ನಿ ಸೇರಿದಂತೆ ಮಕ್ಕಳು, ಮೊಮ್ಮಕ್ಕಳು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಖಾದಿ ಧ್ವಜ ಬಳಕೆಗೆ ಆಗ್ರಹಿಸಿ ಧ್ವಜ ಸತ್ಯಾಗ್ರಹ



ಚಾಮರಾಜನಗರ, ಆ.11– ಸ್ವಾತಂತ್ರ್ಯ ಸ್ವಾಭಿಮಾನದ ಸಂಕೇತವಾಗಿರುವ ಖಾದಿ ಧ್ವಜಗಳನ್ನೇ ಹಾರಿಸಬೇಕು, ಪಾಲಿಸ್ಟರ್ ಧ್ವಜಗಳನ್ನು ಬಳಸಬಾರದು ಎಂದು ಆಗ್ರಹಿಸಿ ನಗರದಲ್ಲಿ ಧ್ವಜ ಸತ್ಯಾಗ್ರಹ ನಡೆಸಲಾಯಿತು.

ನಗರದ ಧ್ವಜ ಸತ್ಯಾಗ್ರಹ ಸಮಿತಿ ವತಿಯಿಂದ ನಗರದ ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟು, ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೆಮರಹಳ್ಳಿ ವೃತ್ತ ಡೀವಿಯೇಷನ್ ರಸ್ತೆ ಮೂಲಕ ಭುವನೇಶ್ವರಿ ವೃತ್ತ ತಲುಪಿದರು. ಅಲ್ಲಿ ಕೆಲ ನಿಮಿಷಗಳ ಕಾಲ ಘೋಷಣೆಗಳನ್ನು ಕೂಗಿ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ, ಜಿಲ್ಲಾಡಳಿತ ಭವನದ ಮಹಾದ್ವಾರದ ಮುಂದೆ ಸತ್ಯಾಗ್ರಹ ನಡೆಸಿದರು. ನಮ್ಮ ಬಾವುಟ, ಖಾದಿ ಬಾವುಟ, ಬೇಡ ಬೇಡ ಪಾಲಿಸ್ಟರ್ ಬಾವುಟ ಬೇಡ ಎಂಬ ಘೋಷಣೆಗಳನ್ನು ಕೂಗಿದರು.

ಸ್ವಾತಂತ್ರ್ಯ ಅಮೃತೋತ್ಸವದ ಅಂಗವಾಗಿ ಪ್ರತಿ ಮನೆಗಳ ಮೇಲೆ ತ್ರಿವರ್ಣ ಧ್ವಜ ಹಾರಾಟಕ್ಕೆ ಕೇಂದ್ರ ಸರ್ಕಾರ ಕರೆ ಕೊಟ್ಟಿದೆ. ಆದರೆ ಸ್ವದೇಶಿ ಉತ್ಪನ್ನವಾದ ಖಾದಿಯಿಂದ ತಯಾರಿಸಿದ ಬಾವುಟದ ಬದಲಿಗೆ ವಿದೇಶಿ ಕಾರ್ಖಾನೆಗಳಲ್ಲಿ ತಯಾರಾಗಿರುವ ಪಾಲಿಸ್ಟರ್ ಧ್ವಜಗಳನ್ನು 25 ರೂ.ಗಳಿಗೆ ಮಾರಾಟ ಮಾಡಲಾಗುತ್ತಿದೆ. ಧ್ವಜ ಸಂಹಿತೆ ಪ್ರಕಾರ ತಯಾರಾದ ರಾಷ್ಟ್ರಧ್ವಜದ ಎರಡೂ ಭಾಗದಲ್ಲಿ ಅಶೋಕ ಚಕ್ರ ಕಾಣಿಸುತ್ತದೆ. ಆದರೆ ಪಾಲಿಸ್ಟರ್‌ನಲ್ಲಿ ತಯಾರಾಗಿರುವ ಧ್ವಜದಲ್ಲಿ ಒಂದು ಕಡೆ ಮಾತ್ರ ಅಶೋಕ ಚಕ್ರ ಕಾಣಿಸುತ್ತದೆ. ಅಲ್ಲದೇ ಬೇಕಾಬಿಟ್ಟಿಯಾಗಿ ಧ್ವಜ ತಯಾರಿಸಲಾಗಿದೆ. ಚಕ್ರ ನಿಗದಿತ ಜಾಗದಲ್ಲಿಲ್ಲ ಇದು ಸರಿಯಾದ ಕ್ರಮವಲ್ಲ ಆದ್ದರಿಂದ ಪಾಲಿಸ್ಟರ್ ಬದಲಿಗೆ ಹಿಂದಿನಿಂದ ಬಳಸುತ್ತಿರುವ ಖಾದಿಯನ್ನೇ ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಅಂತಾರಾಷ್ಟ್ರೀಯ ಗಾಂಧಿವಾದಿ ರಾಜಗೋಪಾಲ್ ಮಾತನಾಡಿ, ಪಾಲಿಸ್ಟರ್ ಬದಲಿಗೆ ಖಾದಿಯದ್ದೇ ರಾಷ್ಟ್ರಧ್ವಜ ಹಾರಾಡಬೇಕೆಂಬ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದರು. ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ.ಜಿ.ಎಸ್. ಜಯದೇವ್ ಮಾತನಾಡಿ, ಖಾದಿ ಬಟ್ಟೆಯು ಅಹಿಂಸೆ, ಸಂಯಮ, ಸರಳತೆಯ ಸಂಕೇತವಾಗಿದೆ. ಇದರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದವರ ತ್ಯಾಗ ಇದೆ. ಇದು ಅನೇಕ ಮೌಲ್ಯಗಳ ಸಂಕೇತ. ಇಂದು ಗಾಂಧಿ ಬೇಡ, ಖಾದಿ ಧ್ವಜ ಬೇಡ ಎಂಬಂತಹ ಧೋರಣೆ ಬೆಳೆಯುತ್ತಿದೆ. ಕಾರ್ಪೊರೇಟ್ ಜಗತ್ತಿಗೆ ಮನ್ನಣೆ ನೀಡಲಾಗುತ್ತಿದ್ದು, ಮೌಲ್ಯಗಳನ್ನು ಕಳೆದುಕೊಂಡಿದ್ದೇವೆ. ಸುಖದ ಬಿಸಿಲು ಗುದುರೆ ಹಿಂದೆ ಓಡುತ್ತಿದ್ದೇವೆ. ಇದು ಮನುಷ್ಯ ಕುಲಕ್ಕೆ ಅಪಾಯಕಾರಿ ಬೆಳವಣಿಗೆ ಎಂದು ಆತಂಕ ವ್ಯಕ್ತಪಡಿಸಿದರು.

ಸತ್ಯಾಗ್ರಹದಲ್ಲಿ ಪ್ರೊ.ಕಾಳಚನ್ನೇಗೌಡ, ಕೆ.ವೆಂಕಟರಾಜು, ಪುಣಜನೂರು ದೊರೆಸ್ವಾಮಿ, ಎ ಡಿಸಿಲ್ವ, ಜಿ.ಪಿ.ಬಸವರಾಜು, ಸರಸ್ವತಿ, ಸಿಬಿನಾಗರಾಜು, ಸಿಪಿಹುಚ್ಚೇಗೌಡ, ಸುರೇಶ್ ಕುಮಾರ್, ಶಿವಸ್ವಾಮಿ, ಲೀನಾ ಕುಮಾರಿ, ಸೈಯದ್ ಆರಿಫ್, ಅಬ್ರಾರ್ ಅಹ್ಮದ್, ದೀನಬಂಧು ಸಂಸ್ಥೆ ಪ್ರಜ್ಞಾ, ಪ್ರಭುಸ್ವಾಮಿ, ಪ್ರಕಾಶ್, ಗುರುಸಿದ್ದಯ್ಯ, ಹಾಗೂ ನೂರಾರು ಮಂದಿ ಭಾಗವಹಿಸಿದ್ದರು.

ಸ್ವಾತಂತ್ರ್ಯ ಅಮೃತ ಮಹೋತ್ಸವ: ಆಶ್ರಮ ಶಾಲೆ, ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಂದ ಪೂರ್ವಭಾವಿ ಕಾರ್ಯಕ್ರಮ





ಚಾಮರಾಜನಗರ, ಆ.11– ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಹರ್ ಘರ್ ತಿರಂಗ ಅಭಿಯಾನದ ಅಂಗವಾಗಿ ಆಗಸ್ಟ್ 13 ರಿಂದ 15ರವರೆಗೆ ಮನೆ–ಮನೆಗಳಲ್ಲಿ ತ್ರಿವರ್ಣ ರಾಷ್ಟ್ರಧ್ವಜ ಹಾರಿಸುವ ಕುರಿತ ಪೂರ್ವಭಾವಿ ಕಾರ್ಯಕ್ರಮಗಳು ಪರಿಶಿಷ್ಟ ವರ್ಗಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಆಶ್ರಮ ಶಾಲೆಗಳಲ್ಲಿ ನಡೆಯಿತು.

ಆಶ್ರಮ ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು, ನಿಲಯ ಪಾಲಕರೊಂದಿಗೆ ವಿವಿಧ ಬುಡಕಟ್ಟು ಹಾಡಿ ಪೋಡುಗಳಿಗೆ ತೆರಳಿ ಧ್ವಜ ವಿತರಿಸಿ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಯ ಸಂಭ್ರಮವನ್ನು ಹೆಚ್ಚಿಸುವಲ್ಲಿ ಉತ್ಸಾಹ ತೋರಿದರು. ಸ್ವಾತಂತ್ರ್ಯದ ಹೋರಾಟ, ತ್ಯಾಗದ ಮಹತ್ವ ಸಾರುವ ಹಿನ್ನೆಲೆಯಲ್ಲಿ ಚಿಣ್ಣರು ಜಾಥಾ ನಡೆಸಿದರು. ರಾಷ್ಟ್ರಧ್ವಜ ಪ್ರದರ್ಶಿಸಿ ದೇಶಾಭಿಮಾನ ವ್ಯಕ್ತಪಡಿಸಿದರು.

ಕೊಳ್ಳೇಗಾಲ ತಾಲೂಕು ವ್ಯಾಪ್ತಿ ಮಹದೇಶ್ವರಬೆಟ್ಟ, ಜೀರಿಗೆ ಗದ್ದೆ, ನಕ್ಕುಂದಿ, ಕೋಣನಕೆರೆ, ಹಿರಿಯಂಬಲ, ಪೊನ್ನಾಚಿ, ಬೈಲೂರು, ಕಂಚಗಳ್ಳಿ, ರಾಚಪ್ಪಾಜಿ ನಗರ, ಗಾಣಿಗ ಮಂಗಲ, ಯಳಂದೂರು ತಾಲೂಕಿನ ಪುರಾಣಿಪೋಡು, ಗುಂಡ್ಲುಪೇಟೆ ತಾಲೂಕಿನ ಬಂಡೀಪುರ, ಮದ್ದೂರು, ಬರಗಿ ಆಶ್ರಮ ಶಾಲೆಗಳ ಮಕ್ಕಳು ಭಾಗವಹಿಸಿದ್ದರು.

ಒಡೆಯರಪಾಳ್ಯ, ಬಂಡಳ್ಳಿ, ಕೊಳ್ಳೇಗಾಲ ಪಟ್ಟಣ, ಮಹದೇಶ್ವರಬೆಟ್ಟ ವಿವಿಧೆಡೆ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ವಿದ್ಯಾರ್ಥಿಗಳಿಗೆ ಭಾಷಣ, ನೃತ್ಯ, ಪ್ರಬಂಧ ಸ್ಪರ್ಧೆಗಳು ಏರ್ಪಡಿಸಲಾಗಿದೆ.

ಸಂಘಟಿತರಾಗದಿದ್ದರೆ ರೈತರನ್ನು ಸರ್ಕಾರ ಒಕ್ಕಲೆಬ್ಬಿಸುತ್ತವೆ



ಕುರುಬೂರು ಶಾಂತಕುಮಾರ್ ಎಚ್ಚರಿಕೆ

ಚಾಮರಾಜನಗರ, ಆ.11– ರೈತರು ಸಂಘಟಿತರಾಗದಿದ್ದರೆ ಇಂದಿನ ಸರ್ಕಾರಗಳು ಅನ್ನದಾತರನ್ನು ಕೃಷಿಯಿಂದ ಒಕ್ಕಲೆಬ್ಬಿಸುತ್ತವೆ ಎಂದು ಕಬ್ಬುಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಕೆ ನೀಡಿದರು

ತಾಲೂಕಿನ ಮಲೆಯೂರು ಗ್ರಾಮದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದ್ದು ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದೆ ಆದರೆ ಕೇಂದ್ರ ಸರ್ಕಾರ ವಿದ್ಯುತ್ ಇಲಾಖೆ ಖಾಸಗೀಕರಣ ಮಾಡಲು ಹೊರಟಿರುವುದು ರೈತರ ಮರಣಶಾಸನ ಬರೆದಂತಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಎಲ್ಲ ಕ್ಷೇತ್ರಗಳು ಮುನ್ನಡೆ ಸಾಧಿಸುತ್ತಿದೆ. ಆದರೆ ಕೃಷಿ ಕ್ಷೇತ್ರದಲ್ಲಿ ರೈತರ ಬದುಕು ಸರ್ಕಾರದ ದ್ವಂದ್ವ ನೀತಿಗಳಿಂದ ಹೀನಾಯವಾಗಿದೆ. ಬಂಡವಾಳಶಾಹಿಗಳಿಗೆ ನೀಡುವ ಪ್ರಾಮುಖ್ಯತೆ ರೈತನಿಗೆ ಕೊಡುತ್ತಿಲ್ಲ. ರೈತರ ಮುಗ್ಧತೆಯನ್ನು ಜನಪ್ರತಿನಿಧಿಗಳು, ಸರ್ಕಾರ, ಕೆಲವು ರೈತ ಸಂಘಟನೆಗಳು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾಡಿದರು. ಇನ್ನಾದರೂ ರೈತರು ಎಚ್ಚೆತ್ತುಕೊಂಡು ಸಂಘಟಿತರಾಗಿ ಹೋರಾಟಕ್ಕೆ ಇಳಿಯಲು ಮುಂದಾಗಬೇಕು ಸಲಹೆ ನೀಡಿದರು.

ಜಿಲ್ಲಾ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಹಸಿರು ಶಾಲಿನ ಮಹತ್ವ, ಸಂಘಟನೆಯಿಂದ ಆಗುವ ಲಾಭ ಪ್ರತಿಯೊಬ್ಬರೂ ಅರಿಯಬೇಕು. ವಿಚಾರವಂತರಾದಾಗ ಮಾತ್ರ ಸಮಸ್ಯೆಗಳಿಗೆ ಕಡಿವಾಣ ಹಾಕಬಹುದು ಎಂದರು.

ನೂತನ ಪದಾಧಿಕಾರಿಗಳು: ಮಲೆಯೂರು ಗ್ರಾಮ ಘಟಕದ ಅಧ್ಯಕ್ಷರಾಗಿ ಬಸವರಾಜಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಪ್ರವೀಣ್‌ಕುಮಾರ್, ಉಪಾಧ್ಯಕ್ಷರಾಗಿ ನಂಜುಂಡನಾಯಕ, ಖಜಾಂಚಿಯಾಗಿ ಹರ್ಷಕುಮಾರ್ ಸಂಘಟನಾ ಕಾರ್ಯದರ್ಶಿಯಾಗಿ ಮಂಜು ಅವರನ್ನು ಆಯ್ಕೆ ಮಾಡಲಾಯಿತು

ಸೇರ್ಪಡೆ: ಸಂಘಟನೆಯ ಮುಖಂಡರುಗಳಾದ, ಹಾಲಿನ ನಾಗರಾಜು, ಶಿವಮೂರ್ತಿ, ಕೆರೆಹುಂಡಿ ರಾಜಣ್ಣ, ಹಾಡ್ಯರವಿ, ಉಡಿಗಾಲ ಮಂಜು, ರೇವಣ್ಣ ಮಹದೇವಸ್ವಾಮಿ, ರಕ್ಷಿತ ಶಿವಸ್ವಾಮಿ, ಸೇರಿದಂತೆ ನೂರಾರು ರೈತರು ಸಂಘಟನೆಗೆ ಸೇರ್ಪಡೆಯಾದರು, ಅವರಿಗೆ ಹಸಿರು ಶಾಲು ಹಾಕಿ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.

ದೀಪಾ ಜೆ. ಕಾಂಟ್ರಾಕ್ಟರ್ ಅಧಿಕಾರ ಸ್ವೀಕಾರ



ಚಾಮರಾಜನಗರ, ಆ.11– ಬಿಳಿಗಿರಿರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ನೂತನ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ದೀಪಾ ಜೆ.ಕಾಂಟ್ರಾಕ್ಟರ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು. ಇದುವರೆಗೆ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಡಾ.ಜಿ. ಸಂತೋಷ್‌ಕುಮಾರ್ ಅವರು ದೀಪಾ ಅವರಿಗೆ ಅಧಿಕಾರ ವಹಿಸಿಕೊಟ್ಟರು. ಸಂತೋಷ್‌ಕುಮಾರ್ ಅವರನ್ನು ಮಲೆ ಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವರ್ಗಾಹಿಸಿ ಸರ್ಕಾರ ಬುಧವಾರ ಆದೇಶ ಹೊರಡಿಸಿತ್ತು.

ಮಲ್ಲಣ್ಣ ನಿಧನ



ಚಾಮರಾಜನಗರ, ಆ.11– ತಾಲೂಕಿನ ಮಂಗಲ ಗ್ರಾಮದ ಹಿರಿಯ ಮುಖಂಡ ಮಲ್ಲಣ್ಣ (85) ಅವರು ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಸಂಜೆ ಮಂಗಲ ಗ್ರಾಮದ ಅವರ ತೋಟದಲ್ಲಿ ನೆರವೇರಿತು.

ಸಾಧಿಸುವ ಛಲವಿದ್ದರೆ ಯಶಸ್ಸು ನಿಮ್ಮ ಮನೆ ಬಾಗಿಲಿಗೇ ಬರಲಿದೆ

ವಿದ್ಯಾರ್ಥಿಗಳಿಗೆ ಸಿಎಂ ಬಸವರಾಜ ಬೊಮ್ಮಾಯಿ ಕಿವಿಮಾತು



ಮೈಸೂರು, ಆ.11(ಆರ್‌ಕೆ)–ಸಾಧಿಸುವ ಛಲವೊಂದಿದ್ದರೆ ಖಂಡಿತ ಯಶಸ್ಸು ನಿಮ್ಮ ಮನೆ ಬಾಗಿಲಿಗೇ ಬರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದಿಲ್ಲಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಯುವಜನ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ನೆರೆದಿದ್ದ ಸಾವಿರಾರು ಮಂದಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ವಿದ್ಯಾರ್ಥಿಗಳಲ್ಲಿ ಸಾಧಿಸುವ ಛಲವಿರಬೇಕು. ಪ್ರಾಮಾಣಿಕವಾಗಿ ಶ್ರಮಿಸಿದರೆ ಗುರಿ ಮುಟ್ಟಬಹುದು ಎಂದರು. ಮಾನಸ ಗಂಗೋತ್ರಿಯಲ್ಲಿರುವ ಈ ಯುವ ಶಕ್ತಿ ಇಂದು ಇಡೀ ಭಾರತ ದೇಶಕ್ಕೇ ತಿಳಿದಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ನಿಮ್ಮೆಲ್ಲರನ್ನು ನೋಡಿ ಸಂತೋಷ ಇಮ್ಮಡಿಯಾಗಿದೆ. ನಿಮ್ಮ ಜೊತೆಗೆ ನನ್ನ ಶಕ್ತಿಯೂ ಇಮ್ಮಡಿಯಾಗಿದೆ. ಈ ಯುವ ಶಕ್ತಿಯನ್ನು ಸದುಪಯೋಗಪಡಿಸಿಕೊಂಡರೆ ಮುಂದಿನ 25 ವರ್ಷದಲ್ಲಿ ಸುವರ್ಣ ಸ್ವಾತಂತ್ರ್ಯೋತ್ಸವಕ್ಕೆ ಭಾರತವನ್ನು ಸಂಪದ್ಭರಿತ ಶ್ರೇಷ್ಠ ರಾಷ್ಟ್ರವನ್ನಾಗಿ ಮಾಡಿ ವಿಶ್ವದಲ್ಲಿಯೇ ನಂಬರ್ ಒನ್ ಆಗಿ ಮಾಡಬಹುದು ಎಂದು ವಿದ್ಯಾರ್ಥಿ ಸಮೂಹವನ್ನು ಕಂಡು ಮುಖ್ಯಮಂತ್ರಿಗಳು ಹುಮ್ಮಸ್ಸಿನಿಂದ ನುಡಿದರು. ನಾವೆಲ್ಲರೂ ಸ್ವಾತಂತ್ರ್ಯಾನಂತರದ ಪೀಳಿಗೆಯವರು. ದೇಶಕ್ಕೆ ಸ್ವಾತಂತ್ರ್ಯ ಬರಲು ಹಲವಾರು ಹೋರಾಟ, ತ್ಯಾಗ, ಬಲಿದಾನ ಕಾರಣವಾಗಿದೆ. ಅದೆಷ್ಟೋ ಸಾವಿರಾರು ಮಂದಿ ಅನಾಮಧೇಯ ಹೋರಾಟಗಾರರು ಬಲಿದಾನ ಮಾಡಿದ್ದಾರೆ. ಮೈಸೂರು ಮಹಾರಾಜರ ಕಾಲದಲ್ಲಿ ಅಭಿವೃದ್ಧಿಯ ಪರ್ವವನ್ನು ನೋಡಿದ್ದೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಇನ್ನೂ ಅಭಿವೃದ್ಧಿಯಾಗಬೇಕಿದೆ. ಅದಕ್ಕೆ ನಾವು ಬದ್ಧರಾಗಿದ್ದೇವೆ. ನಾವೆಲ್ಲ ಒಗ್ಗಟ್ಟಿನಿಂದ ಶ್ರಮಿಸಬೇಕಿದೆ ಎಂದರು.

ಆಹಾರದಲ್ಲಿ ಸ್ವಾವಲಂಬನೆ ಮಾಡುವ ರೈತರಿಗೆ, ದೇಶ ಕಾಯುವ ಯೋಧರು, ದುಡಿಯುವ ವರ್ಗಕ್ಕೆ ನಮ್ಮ ನಮಸ್ಕಾರ. ನವಕರ್ನಾಟಕದಿಂದ ಸಮೃದ್ಧ ನವಭಾರತ ವಾಗಬೇಕು. ಯುವ ಸಮೂಹವು ದೇಶದ ಭವ್ಯ ಭವಿಷ್ಯ ನಿರ್ಮಾಣ ಮಾಡಬೇಕಾಗಿದೆ ಎಂದ ಬಸವರಾಜ ಬೊಮ್ಮಾಯಿ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ರಾಷ್ಟ್ರ ಧ್ವಜವನ್ನು ನಮ್ಮ ಮನೆ, ಕಚೇರಿ, ಹಾಸ್ಟೆಲ್‌ಗಳ ಮೇಲೆ ಹಾರಿಸುವ ಮೂಲಕ ದೇಶ ಪ್ರೇಮ ಪ್ರದರ್ಶಿಸಿ ಭವಿಷ್ಯದ ಭಾರತ ನಿರ್ಮಿಸುವಂತೆ ಸಲಹೆ ನೀಡಿದರು.

ಮೌಂಟ್ ಎವರೆಸ್ಟ್ ಶಿಖರವೇರಬೇಕೆಂಬ ಛಲವಿದ್ದದ್ದರಿಂದ ತೇನ್‌ಸಿಂಗ್ ಗುರಿ ಮುಟ್ಟಿ, ಇಡೀ ಯುವ ಸಮುದಾಯಕ್ಕೆ ಸಾಮರ್ಥ್ಯದ ಸಂದೇಶ ಸಾರಿದರು. ಆತ್ಮವಿಶ್ವಾಸವಿದ್ದರೆ ಜಗತ್ತನ್ನೇ ಗೆಲ್ಲಬಹುದು. ಆಕಾಶದೆತ್ತರಕ್ಕೆ ಹಾರಿ ಭಾರತ ಧ್ವಜವನ್ನು ಆಕಾಶದೆತ್ತರಕ್ಕೆ ಹಿಡಿಯಿರಿ ಎಂದು ಅವರು ಇದೇ ವೇಳೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮಹಾರಾಜ, ಮಹಾರಾಣಿ ಕಾಲೇಜು ಜೀರ್ಣೋದ್ಧಾರಕ್ಕೆ ಅನುದಾನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಮೈಸೂರು, ಆ.11(ಆರ್‌ಕೆ)–ಮೈಸೂರಿನ ಮಹಾರಾಜ ಮತ್ತು ಮಹಾರಾಣಿ ಕಾಲೇಜು ಕಟ್ಟಡಗಳ ಜೀರ್ಣೋದ್ಧಾರಕ್ಕೆ ಅಗತ್ಯವಿರುವ ಅನುದಾನವನ್ನು ಮಂಜೂರು ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದಿಲ್ಲಿ ಭರವಸೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಯುವ ಜನೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಮೈಸೂರು ಅರಸರು ನಿರ್ಮಿಸಿರುವ ಮಹಾರಾಜ ಮತ್ತು ಮಹಾರಾಣಿ ಕಾಲೇಜು ಕಟ್ಟಡಗಳ ನವೀಕರಣ ಮತ್ತು ಉನ್ನತೀಕರಣಕ್ಕೆ ಬೇಕಾದ ಅನುದಾನ ನೀಡುವುದಾಗಿ ತಿಳಿಸಿದರಲ್ಲದೆ, ಮೈಸೂರು ವಿಶ್ವವಿದ್ಯಾನಿಲಯದ 1,000 ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೂ ಹಣ ಬಿಡುಗಡೆ ಮಾಡುತ್ತೇನೆಂದು ಹೇಳಿದಾಗ ನೆರೆದಿದ್ದ ವಿದ್ಯಾರ್ಥಿಗಳು ಕರತಾಡನದ ಮೂಲಕ ತಮ್ಮ ಸಂತಸ ಹಂಚಿಕೊಂಡರು. ಪ್ರವಾಸೋದ್ಯಮ, ಯೋಗ ನ್ಯಾಚುರೋಪತಿಯು ಬೆಳೆಯುತ್ತಿರುವ ಮೈಸೂರಲ್ಲಿ ಸರ್ಕ್ಯೂಟ್ ಟೂರ್ ಯೋಜನೆಗೆ ಹಣ ನೀಡುತ್ತಿದ್ದೇವೆ. ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ, ಕೆ.ಆರ್.ಆಸ್ಪತ್ರೆ ಅಭಿವೃದ್ಧಿ, ಟೆಕ್ಸ್‌ಟೈಲ್ಸ್ ಪಾರ್ಕ್, ಐಟಿ–ಬಿಟಿ ಅಭಿವೃದ್ಧಿ ಸೇರಿದಂತೆ ಮೈಸೂರಿನ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಅವರು ನುಡಿದರು. ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿಗಳು ಭಾಗವಹಿಸಿದ ಹಿನ್ನೆಲೆಯಲ್ಲಿ ಇಡೀ ವಿಶ್ವವೇ ಮೈಸೂರಿನತ್ತ ನೋಡುತ್ತಿದೆ. ಎಲ್ಲಾ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಯೋಜನೆ ರೂಪಿಸುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಮೈಸೂರಿನ ಹುಡುಗ ರಾಕಿಂಗ್ ಸ್ಟಾರ್ ಯಶ್ ಯುವಕರ ಐಕಾನ್, ಯುವಕ–ಯುವತಿಯರ ಪ್ರತಿನಿಧಿ, ಸಣ್ಣ ವಯಸ್ಸಲ್ಲೇ ದೊಡ್ಡ ಸಾಧನೆ ಮಾಡಿರುವ ಅವರು, ಸಿನೆಮಾಗಷ್ಟೇ ಅಲ್ಲದೇ ಸ್ಟಾರ್ಟ್‌ಅಪ್ ಮೂಲಕ ಕೈಗಾರಿಕೋದ್ಯಮದಲ್ಲೂ ಯಶಸ್ಸು ಕಂಡಿದ್ದಾರೆ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದ ಮುಖ್ಯಮಂತ್ರಿಗಳು, ಯಶ್ ಹೆಸರಲ್ಲೇ ಯಶಸ್ಸು ಇದೆ. ಹೆಸರಿಗೆ ತಕ್ಕ ಹಾಗೆ ಯಶಸ್ವಿಯಾಗಿದ್ದಾರೆ. ನೀವೂ ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

ಸ್ವಾತಂತ್ರ್ಯ ಯೋಧರ ಬಗ್ಗೆ ಗೌರವವಿರಲಿ: ಶಾಸಕ ಜಿಟಿಡಿ ಮನವಿ

ಮೈಸೂರು,ಆ.11(ಆರ್‌ಕೆ)–ಕಾಂಗ್ರೆಸ್ ಸ್ಥಾಪನೆಗೂ ಹಿಂದಿ ನಿಂದಲೇ ಸ್ವಾತಂತ್ರ್ಯ ಹೋರಾಟ ನಡೆದಿದೆ. ಹೋರಾಟಗಾರರ ಬಗ್ಗೆ ಯಾರೂ ಅಗೌರವದಿಂದ ಮಾತನಾಡಬಾರದು ಎಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಯುವ ಜನೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹೀಗೆ ಹೇಳುವ ಮೂಲಕ ಕಾಂಗ್ರೆಸ್ ನಾಯಕರು ಸ್ವಾತಂತ್ರ್ಯ ಹೋರಾಟವನ್ನು ಪ್ರಸ್ತಾಪಿಸಿ ಇತರೆ ಪಕ್ಷಗಳನ್ನು ಟೀಕಿಸುವುದು ಹಾಗೂ ವೀರ ಸಾವರ್ಕರ್ ಅವರ ಹೋರಾಟದ ಬಗ್ಗೆ ವ್ಯಂಗ್ಯವಾಡುವುದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು.



ಸಿಎಂ ಕಾರ್ಯ ವೈಖರಿ ಬಣ್ಣನೆ

ಕಾಂಗ್ರೆಸ್ ಸ್ಥಾಪನೆಗೂ ಹಿಂದಿನಿಂದಲೇ ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ಆರಂಭವಾಗಿತ್ತು. ಆದರೆ ನಮ್ಮಿಂದಲೇ ಹೋರಾಟ ನಡೆದಿದ್ದು ಎಂದು ಕೆಲವರು ಹೇಳಿಕೊಳ್ಳುತ್ತಿರುವುದು ಸರಿಯಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರೂ ಹೀಗೆ ಹೇಳಿಕೊಳ್ಳುವುದಿಲ್ಲ. ನಾವೆಲ್ಲರೂ ಸ್ವಾತಂತ್ರ್ಯದ ಫಲವನ್ನು ಅನುಭವಿಸುತ್ತಿ ದ್ದೇವೆಯೇ ಹೊರತು ಅದಕ್ಕಾಗಿ ಜೈಲಿಗೆ ಹೋಗಿ ಬಂದಿಲ್ಲ ಎಂದರು. ವೀರ ಸಾವರ್ಕರ್ ಅವರು ಸ್ವಾತಂತ್ರ್ಯ ಚಳ ವಳಿಯಲ್ಲಿ ಭಾಗಿಯಾಗಿ ಸುಮಾರು 22 ವರ್ಷ ಜೈಲು ವಾಸ ಅನುಭವಿಸಿದರು. ಮಹಾತ್ಮ ಗಾಂಧೀಜಿ, ಚಂದ್ರಶೇಖರ್ ಆಜಾದ್, ಲಾಲ್ ಬಹದ್ದೂರ್ ಶಾಸ್ತ್ರಿ, ಜವಾಹರಲಾಲ್ ನೆಹರೂ ಸೇರಿದಂತೆ ಅನೇಕ ಮಹ ನೀಯರ ಹೋರಾಟದ ಪ್ರತಿಫಲವಾಗಿ ಸ್ವಾತಂತ್ರ್ಯ ಸಿಕ್ಕಿದೆ. ಮೈಸೂರಿನವರೂ ಸಾಕಷ್ಟು ಮಂದಿ ಹೋರಾಟದಲ್ಲಿ ಭಾಗಿಯಾಗಿದ್ದರು. ಬ್ರಿಟಿಷರ ವಿರುದ್ಧ ಹೋರಾಡಿದ ಸಂತಾಲ ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಮಾಡುವ ಮೂಲಕ ಗೌರವಿಸಲಾಗಿದೆ. ಹೀಗಿರುವಾಗ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಯಾರ ಬಗ್ಗೆಯೂ ಹಗುರ ವಾಗಿ ಮಾತನಾಡಬಾರದು. ಇತಿಹಾಸವನ್ನು ಸರಿಯಾಗಿ ಅರ್ಥೈಸಿಕೊಂಡು ಪ್ರತಿಕ್ರಿಯಿಸಬೇಕು ಎಂದು ಹೇಳಿದರು.

ಮುಖ್ಯಮಂತ್ರಿಗಳ ಕೊಂಡಾಡಿದ ಜಿಟಿಡಿ: ತಂದೆಯವ ರಂತೆ ಸ್ವಂತ ವರ್ಚಸ್ಸಿನ ಮೇಲೆ ದುಡಿದು, ಉತ್ತುಂಗ ಮಟ್ಟಕ್ಕೇರಿದ ಸಿಎಂ ಬಸವರಾಜ ಬೊಮ್ಮಾಯಿ ಅವರು ಈಗ ಸೇವಕರಾಗಿ ಕೆಲಸ ಮಾಡುತ್ತಿದ್ದಾರೆ. ಮಳೆ ಬಂದು ಹಾನಿಗೊಳಗಾದ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ, ಹಲವಾರು ಬಾರಿ ಜನಪ್ರತಿನಿಧಿಗಳು, ಅಧಿಕಾರಿಗಳೊಂ ದಿಗೆ ಸಭೆಗಳನ್ನು ನಡೆಸಿ ಪರಿಹಾರೋಪಾಯಕ್ಕೆ ಶ್ರಮಿ ಸುತ್ತಿದ್ದಾರೆ. ಯಾವುದೇ ಟೀಕೆ, ಟಿಪ್ಪಣಿಗಳಿಗೆ ಕಿವಿಗೊಡದೇ ರಾಜ್ಯದ ಜನರ ಸೇವಕರಂತೆ ಕೆಲಸ ಮಾಡುತ್ತಿದ್ದಾರೆ ಎಂದರು.

ಕುಟುಂಬ ರಾಜಕಾರಣ ಮಾಡಲಿಲ್ಲ. ತಂದೆಯವರಂತೆ ಸರಳ ಸಜ್ಜನಿಕೆಯಿಂದ ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಿರುವ ಬೊಮ್ಮಾಯಿ ಅವರು, ಆರೋಗ್ಯ, ಶಿಕ್ಷಣ, ಕ್ರೀಡೆ ಹೀಗೆ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಪ್ರತೀ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸಬೇಕೆಂಬ ಪ್ರಧಾನಿಗಳ ಆಶಯವನ್ನು ಸಾಕಾರ ಗೊಳಿಸಲು ಸರ್ಕಾರ ರಾಷ್ಟ್ರಧ್ವಜಗಳನ್ನು ಸಾರ್ವಜನಿಕರಿಗೆ ನೀಡುತ್ತಿದೆ. ಮೈಸೂರಲ್ಲೂ ಜಿಲ್ಲಾ ಪಂಚಾಯ್ತಿ ಮತ್ತು ಮೈಸೂರು ವಿವಿಯಿಂದ 5 ಲಕ್ಷ ಬಾವುಟಗಳನ್ನು ವಿತರಿಸಲಾಗಿದೆ ಎಂದ ಜಿ.ಟಿ.ದೇವೇಗೌಡರು, ಸ್ವಾತಂತ್ರ್ಯಕ್ಕಾಗಿ ಹೋರಾ ಡಿದ ಮಹಾನ್ ನಾಯಕರಿಗೆ ನಾವು ಆ ಮೂಲಕ ಕೃತಜ್ಞತೆ ಸಲ್ಲಿಸಬೇಕೆಂದು ಕರೆ ನೀಡಿದರು. ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವಥನಾರಾಯಣ ಅವರು ಮಾತನಾಡಿ, ಮನೆ ಮನೆಗಳಲ್ಲಿ ರಾಷ್ಟ್ರ ಧ್ವಜ ಹಾರಿಸುವ ಮೂಲಕ ದೇಶ ಭಕ್ತಿ ಮೆರೆಯಬೇಕಿದೆ. ಯುವ ಜನರಿಗೆ ಉದ್ಯೋಗ ಕಲ್ಪಿಸುವ ಸಲುವಾಗಿ ಸರ್ಕಾರ ಹಲವು ಯೋಜನೆ ರೂಪಿಸಿದೆ. ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ, ಸೆಮಿ ಕಂಡಕ್ಟರ್, ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಉದ್ಯಮಗಳ ಅಭಿವೃದ್ಧಿಗೂ ಒತ್ತು ನೀಡಲಾಗುತ್ತಿದೆ ಎಂದರು.

ಮೈಷುಗರ್ ಮತ್ತೆ ಆರಂಭ

● ಹೋಮ ಹವನದೊಂದಿಗೆ ಬಾಯ್ಲರ್‌ಗೆ ಅಗ್ನಿಸ್ಪರ್ಶ ● ಹತ್ತನ್ನೆರಡು ದಿನದಲ್ಲಿ ಕಬ್ಬು ಅರೆಯುವ ಕಾರ್ಯ ಆರಂಭ ● ಜನಪ್ರತಿನಿಧಿಗಳು, ಅಧಿಕಾರಿಗಳ ಉಪಸ್ಥಿತಿ



ಮಂಡ್ಯ, ಆ.11– ಕಳೆದ ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿದ್ದ ದೇಶದ ಮೊದಲ ಸರ್ಕಾರಿ ಕಾರ್ಖಾನೆ ಎಂಬ ಹೆಗ್ಗಳಿಕೆ ಪಡೆದಿರುವ ಮೈಷುಗರ್ ಸಕ್ಕರೆ ಕಾರ್ಖಾನೆ ಗುರುವಾರದಿಂದ ಪುನರಾರಂಭಗೊಂಡಿದೆ.

ಬೆಳಗ್ಗೆಯಿಂದಲೇ ಕಾರ್ಖಾನೆಯ ಆವರಣದಲ್ಲಿ ಹೋಮ–ಹವನ, ಸತ್ಯನಾರಾಯಣ ಪೂಜೆ ಸೇರಿದಂತೆ ವಿಶೇಷ ಪೂಜೆಗಳು ಜರುಗಿದವು. 11.35ರಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ರೇಷ್ಮೆ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಹಾಗೂ ಶಾಸಕ ಎಂ.ಶ್ರೀನಿವಾಸ್ ಅವರು ಬಾಯ್ಲರ್‌ಗೆ ಅಗ್ನಿಸ್ಪರ್ಶ ಮಾಡುವ ಮೂಲಕ ಚಾಲನೆ ನೀಡಿದರು.

ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಜಿಲ್ಲೆಯ ಎಲ್ಲ ರೈತಮುಖಂಡರು, ಜನಪ್ರತಿನಿಧಿಗಳು ಮೈಷುಗರ್ ಕಾರ್ಖಾನೆಯನ್ನು ಉಳಿಸಬೇಕು ಎಂಬ ಕೂಗು ಇತ್ತು. ಅದರಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿಯೇ ಆರಂಭಿಸಿದ್ದಾರೆ ಎಂದರು.

ಇಂದು ಸಾಂಕೇತಿಕವಾಗಿ ಪೂಜೆ ಮಾಡಿ ಬಾಯ್ಲರ್‌ಗೆ ಅಗ್ನಿಸ್ಪರ್ಶ ಮಾಡಲಾಗಿದೆ ಇನ್ನು 10–12 ದಿನಗಳಲ್ಲಿ ಮುಖ್ಯಮಂತ್ರಿಗಳೇ ಕಬ್ಬು ಅರೆಯುವಿಕೆಗೆ ವಿಧ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಇದರಿಂದ ಜಿಲ್ಲೆಯ ರೈತರ ಪರವಾಗಿ ಕಾರ್ಖಾನೆ ಉಳಿಸಿಕೊಳ್ಳುವ ಕೆಲಸ ಮಾಡಿದ್ದಾರೆ ಎಂದರು.

> ಜಿಲ್ಲೆಯ ಜೀವನಾಡಿಯಾಗಿರುವ ಮೈಷುಗರ್ ಕಾರ್ಖಾನೆಯನ್ನು ಕೊನೆವರೆಗೂ ಉಳಿಸಿ–ಬೆಳೆಸುವ ಕೆಲಸ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹಣ ನೀಡಿ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಲಾಗುವುದು. ಮೈಷುಗರ್ ಕಾರ್ಖಾನೆ ವಿಚಾರದಲ್ಲಿ ಕೆಲವೊಂದು ಜಿಜ್ಞಾಸೆ, ಗೊಂದಲಗಳಿದ್ದವು. ಈ ಭಾಗದ ಜನಪ್ರತಿನಿಧಿಗಳು, ರೈತ ಮುಖಂಡರ ಸಭೆ ನಡೆಸಿದಾಗಲೂ ಯಾರಿಗೂ ನಂಬಿಕೆ ಇರಲಿಲ್ಲ. ಆದರೆ ನಾನು ಸಂಕಲ್ಪ ಮಾಡಿ ರೈತರಿಗೆ ಅನ್ನ ಕೊಡುವ ಕಾರ್ಖಾನೆಯನ್ನು ಉಳಿಸಲೇಬೇಕೆಂದು ದೃಢ ನಿರ್ಧಾರ ಮಾಡಿ ಕಾರ್ಖಾನೆಯನ್ನು ಆರಂಭಿಸಿದ್ದೇನೆ. ಇನ್ನು ಕೆಲವೇ ದಿನಗಳಲ್ಲಿ ನಾನೇ ಖುದ್ದಾಗಿ ಆಗಮಿಸಿ ಕಬ್ಬು ಅರೆಯುವಿಕೆಗೆ ಚಾಲನೆ ನೀಡಲಿದ್ದೇನೆ.
>
> - ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಹಿಂದಿನ ಎರಡು ಸರ್ಕಾರಗಳು ಕಾರ್ಖಾನೆಯನ್ನು ಆರಂಭಿಸಿರಲಿಲ್ಲ. ನಂತರ ಬಿ.ಎಸ್.ಯಡಿಯೂರಪ್ಪ ಅವರು ಕಾರ್ಖಾನೆಯನ್ನು ಆರಂಭಿಸಲು ಮುನ್ನುಡಿ ಬರೆದಿದ್ದರು. ನಂತರ ಒ ಅಂಡ್ ಎಂಗೆ ವಹಿಸಲು ಕ್ರಮ ವಹಿಸಲಾಗಿತ್ತು. ಆದರೆ ಇದಕ್ಕೆ ರೈತ ಮುಖಂಡರ ಒತ್ತಾಯದ ಮೇರೆಗೆ ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಯಲಿದೆ. ರೈತರು, ಕಾರ್ಮಿಕರು ಕಾರ್ಖಾನೆ ಉತ್ತಮವಾಗಿ ನಡೆಯಬೇಕಾದರೆ ಸಂಪೂರ್ಣ ಸಹಕಾರ ನೀಡಬೇಕು ಎಂದರು.

ಈ ವೇಳೆ ಸಂಸದೆ ಸುಮಲತಾ ಅಂಬರೀಷ್, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಎಸ್.ಅಶ್ವತಿ, ಮೈಷುಗರ್ ಮಾಜಿ ಅಧ್ಯಕ್ಷ ಶಿವಲಿಂಗೇಗೌಡ, ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಅಪ್ಪಾ ಸಾಹೇಬ್ ಪಾಟೀಲ್, ಪ್ರಧಾನ ವ್ಯವಸ್ಥಾಪಕ ಬಿ.ಸಿ.ಶಿವಾನಂದಮೂರ್ತಿ, ರೈತ ನಾಯಕಿ ಸುನಂದಾ ಜಯರಾಂ, ಸಾತನೂರು ವೇಣುಗೋಪಾಲ್, ಕೃಷ್ಣ ಶಂಭೂನಹಳ್ಳಿ ಸೇರಿದಂತೆ ವಿವಿಧ ಸಂಘಟನೆಗಳ ನೂರಾರು ಮುಖಂಡರು ಹಾಜರಿದ್ದರು.




2019ರಿಂದ ಸ್ಥಗಿತಗೊಂಡಿದ್ದ ಕಾರ್ಖಾನೆ

ಕೋಲ್ಮನ್ ಅವರ ಸಲಹೆ ಮೇರೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದ ಮೈಷುಗರ್ ಸಕ್ಕರೆ ಕಾರ್ಖಾನೆ ಕಳೆದ 2019ರಿಂದ ತಾಂತ್ರಿಕ ಕಾರಣ, ಬಂಡವಾಳ ಕೊರತೆ, ಸಾಲ ಸೇರಿದಂತೆ ವಿವಿಧಕಾರಣಗಳಿಂದ ಸ್ಥಗಿತಗೊಂಡಿತ್ತು ಈ ಹಿನ್ನೆಲೆಯಲ್ಲಿ ಸರ್ಕಾರ ಕಾರ್ಖಾನೆಯನ್ನು ಖಾಸಗಿಯವರಿಗೆ 40 ವರ್ಷಗಳ ಕಾಲ ಗುತ್ತಿಗೆ ನೀಡಲು ಮುಂದಾಗಿತ್ತು. ಇದರ ವಿರುದ್ಧ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ವಿವಿಧ 50ಕ್ಕೂ ಹೆಚ್ಚು ಸಂಘಟನೆಗಳು ಪಕ್ಷೇತರವಾಗಿ ಹೋರಾಟ ನಡೆಸಿದ್ದವು. ಇದರ ಪರಿಣಾಮ ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಸುವ ಬಗ್ಗೆ ರಾಜ್ಯ ಸರ್ಕಾರ ಘೋಷಿಸಿತು.

ಜೆಡಿಎಸ್ ಶಾಸಕರು ಗೈರು

ಮೈಷುಗರ್ ಕಾರ್ಖಾನೆಗೆ ಅಗ್ನಿಸ್ಪರ್ಶ ಮಾಡುವ ಕಾರ್ಯಕ್ರಮಕ್ಕೆ ಜಿಲ್ಲೆಯ 5 ಮಂದಿ ಜೆಡಿಎಸ್ ಶಾಸಕರು ಗೈರಾಗಿದ್ದು ಕಂಡು ಬಂದಿತು. ಶಾಸಕ ಎಂ.ಶ್ರೀನಿವಾಸ್ ಹೊರತುಪಡಿಸಿ ಉಳಿದಂತೆ ಶಾಸಕರಾದ ಸಿ.ಎಸ್.ಪುಟ್ಟರಾಜು, ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಡಿ.ಸಿ.ತಮ್ಮಣ್ಣ ಗೈರು ಹಾಜರಾಗಿದ್ದರು. ಇವರು ಮೈಷುಗರ್ ಹೋರಾಟಕ್ಕೆ ಬೆಂಬಲ, ಸದನದಲ್ಲಿ ಧ್ವನಿ ಎತ್ತುವ, ಪಾದಯಾತ್ರೆ ಮಾಡುವ ಮೂಲಕ ಸರ್ಕಾರದ ಮೇಲೆ ಒತ್ತಡ ತಂದಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಹೆಸರಲ್ಲಿ ಮೈಸೂರು ವಿವಿಗೆ ದತ್ತಿ ನಿಧಿ ಹಸ್ತಾಂತರ



ಮೈಸೂರು, ಆ.11(ಎಂಕೆ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರು ವಿವಿಗೆ 'ದತ್ತಿ ನಿಧಿ ಹಸ್ತಾಂತರ' ಮಾಡಲಾಯಿತು.

ಕಾನೂನು ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಯೊಬ್ಬರಿಗೆ 'ಶ್ರೀ ಸಿದ್ದರಾಮಯ್ಯ 75 ಅಮೃತ ಮಹೋತ್ಸ ಚಿನ್ನದ ಪದಕ' ನೀಡುವ ಸಲುವಾಗಿ 1,05,000 ರೂ. ಮೊತ್ತದ ಚೆಕ್‌ನ್ನು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಅವರಿಗೆ ಶಾಸಕ ಯತೀಂದ್ರ ಸಿದ್ದರಾಮಯ್ಯ ಹಸ್ತಾಂತರಿಸಿದರು.

ಬಳಿಕ 75 ಮಂದಿ ರೈತರಿಗೆ ತೆಂಗಿನ ಸಸಿ ವಿತರಿಸಿ, ಮೈಸೂರು ವಿವಿಯ ಕ್ರಾಫರ್ಡ್ ಭವನದ ಬಳಿ ಗಿಡ ನೆಟ್ಟು ನೀರು ಹಾಕಲಾಯಿತು. ನಂತರ ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಮೈಸೂರು ವಿವಿಯ ಕಾನೂನು ಅಧ್ಯಯನ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಯೊಬ್ಬರಿಗೆ ಪ್ರತಿವರ್ಷ ಚಿನ್ನದ ಪದಕ ನೀಡುವ ಸಲುವಾಗಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ದತ್ತಿ ನಿಧಿ ಸ್ಥಾಪನೆ ಮಾಡಲಾಗಿದ್ದು, ಅದರ ಅಂಗವಾಗಿ ದತ್ತಿ ಹಣದ ಚೆಕ್‌ನ್ನು ಹಸ್ತಾಂತರಿಸಲಾಗಿದೆ ಎಂದರು.

ಮಾಜಿ ಸಿಎಂ ಸಿದ್ದರಾಮಯ್ಯ ಅವರು, ಓದಿದ್ದು, ರಾಜಕೀಯ ನೆಲೆ ಕಂಡು ಕೊಂಡಿದ್ದು ಮೈಸೂರಿನಲ್ಲಿಯೇ. ಮೈಸೂರು ಅವರ ಕರ್ಮ ಭೂಮಿಯಾಗಿದೆ. ಸಿದ್ದರಾಮಯ್ಯ ಅವರ ಸಾಧನೆ, ಕೊಡುಗೆಯನ್ನು ಸದಾ ಸ್ಮರಿಸುವುದಕ್ಕಾಗಿ ಅವರ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ ಕುಮಾರ್ ಮಾತನಾಡಿ, ಸಿದ್ದರಾಮಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರ ಹೆಸರಿನಲ್ಲಿ ದತ್ತಿ ಸ್ಥಾಪಿಸಲಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ವಿವಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಮೈಸೂರು ವಿವಿಯ ಮೇಲೆ ವಿಶೇಷ ಪ್ರೀತಿ–ಕಾಳಜಿ ಹೊಂದಿರುವ ಅವರಿಗೆ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ ಸದ್ಯದಲ್ಲಿಯೇ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.


ಮೈಸೂರು ವಿವಿ ಕುಲಸಚಿವ ಪ್ರೊಆರ್. ಶಿವಪ್ಪ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಮಂಜು ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಶಶಿತರೂರ್‌ಗೆ ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ



ಪ್ಯಾರಿಸ್, ಆ.11– ಹಿರಿಯ ಕಾಂಗ್ರೆಸ್ ಮುಖಂಡ ಶಶಿತರೂರ್ ಫ್ರಾನ್ಸ್ ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಡಿ ಹಾನರ್‌ಗೆ ಭಾಜನರಾಗಿದ್ದು, ಪ್ರತಿಷ್ಠಿತ ಪ್ರಶಸ್ತಿ ಪಡೆಯುತ್ತಿರುವುದಕ್ಕೆ ಪಕ್ಷದ ಮುಖಂಡರು ಅವರನ್ನು ಅಭಿನಂದಿಸಿದ್ದಾರೆ. ಶಶಿ ತರೂರ್ ಅವರ ಲೇಖನಗಳು ಮತ್ತು ಭಾಷಣಗಳಿಗಾಗಿ ಫ್ರಾನ್ಸ್ ಸರ್ಕಾರ ಅವರನ್ನು ಪುರಸ್ಕರಿಸುತ್ತಿದೆ. ನವದೆಹಲಿಯಲ್ಲಿನ ಫ್ರೆಂಚ್ ರಾಯಭಾರಿ ಇಮ್ಯಾನುಯೆಲ್ ಲೆನೈನ್ ಪ್ರಶಸ್ತಿ ವಿಷಯವನ್ನು ಶಶಿತರೂರ್ ಅವರಿಗೆ ಪತ್ರದ ಮೂಲಕ ತಿಳಿಸಿದ್ದಾರೆ. ಈ ಪ್ರಶಸ್ತಿಗೆ ಆಯ್ಕೆ ಮಾಡಿರುವುದಕ್ಕೆ ಟ್ವೀಟರ್ ಮೂಲಕ ಶಶಿ ತರೂರು ಅಭಿನಂದನೆ ಸಲ್ಲಿಸಿದ್ದಾರೆ. ಕೇರಳದ ಕಾಂಗ್ರೆಸ್ ಘಟಕ, ಯುವ ಕಾಂಗ್ರೆಸ್ ಘಟಕ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಶಶಿ ತರೂರ್ ಅವರನ್ನು ಅಭಿನಂದಿಸಿದ್ದಾರೆ. ಅತ್ಯದ್ಭುತ ಶಿಕ್ಷಣ ಮತ್ತು ಅತ್ಯುತ್ತಮ ಜ್ಞಾನಕ್ಕಾಗಿ ಶಶಿ ತರೂರ್ ಪ್ರತಿಷ್ಠಿತ ಫ್ರಾನ್ಸ್ ಸರ್ಕಾರದ ಅತ್ಯುನ್ನತ ನಾಗರಿಕ ಪ್ರಶಸ್ತಿಗೆ ಭಾಜನರಾಗಿರುವುದಾಗಿ ಲೋಕಸಭೆಯಲ್ಲಿನ ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧರಿ ಹೇಳಿದ್ದಾರೆ.

ಭಾರತದ 14ನೇ ಉಪ ರಾಷ್ಟ್ರಪತಿಯಾಗಿ ಜಗದೀಪ್ ಧನ್ಕರ್ ಪ್ರಮಾಣ ವಚನ ಸ್ವೀಕಾರ



ನವದೆಹಲಿ, ಆ.11– ಭಾರತ ದೇಶದ 14ನೇ ಉಪ ರಾಷ್ಟ್ರಪತಿಯಾಗಿ ಜಗದೀಪ್ ಧನ್ಕರ್ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಜಗದೀಪ್ ಧನ್ಕರ್ ಅವರು ದೇಶದ 14ನೇ ಉಪ ರಾಷ್ಟ್ರಪತಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಧನ್ಕರ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ನಿರ್ಗಮಿತ ಉಪ ರಾಷ್ಟ್ರಪತಿ ಎಂ ವೆಂಕಯ್ಯ ನಾಯ್ಡು, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಾರಿಗೆ ಸಚಿವ ನಿತಿನ್ ಗಡ್ಕರಿ ಸೇರಿದಂತೆ ಕೇಂದ್ರದ ಹಲವು ಸಚಿವರು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದಿನಿಂದ ಆ.25ರವರೆಗೆ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ

ಕೆಎಸ್‌ಆರ್‌ಟಿಸಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ

ಬೆಂಗಳೂರು, ಆ.11– ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ನಾಳೆಯಿಂದ ಆಗಸ್ಟ್ 25ರವರೆಗೆ ನಡೆಸಲಿದೆ. ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ನಡೆಯುವ ದಿನಾಂಕಗಳಲ್ಲಿ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ಉಚಿತವಾಗಿ ಬಸ್ ಸೌಲಭ್ಯವನ್ನು ಕೆಎಸ್ ಆರ್‌ಟಿಸಿ ಕಲ್ಪಿಸಲಿದೆ. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ತೆರಳುವಾಗ ಮತ್ತು ಹಿಂದಿರುವಾಗ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಪ್ರವೇಶ ಪತ್ರವನ್ನು ತೋರಿಸಿ, ಸಂಸ್ಥೆಯ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶವನ್ನು ಕಲ್ಪಿಸಲಾಗಿದೆ. 2021–22ನೇ ಸಾಲಿನ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಸಕಲ ಸಿದ್ಧತೆಯನ್ನು ಸಹ ಮಾಡಿಕೊಳ್ಳುತ್ತಿದೆ. ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು, ತಾವು ಅಧ್ಯಯನ ಮಾಡಿದ ಶಾಲೆಗಳಿಗೆ ತೆರಳಿ ಪ್ರವೇಶ ಪತ್ರವನ್ನು ಪಡೆಯಬಹುದಾಗಿದೆ.

ಆದಿವಾಸಿಗಳ ನೃತ್ಯ ಮಹೋತ್ಸವಕ್ಕೆ ಅದ್ಧೂರಿ ತೆರೆ

ಮೂರು ದಿನಗಳ ಕಲಾಸಿರಿ ಪ್ರದರ್ಶಿಸಿದ ಆದಿವಾಸಿ ಕಲಾವಿದರು



ಮೈಸೂರು, ಆ.11(ಜಿಎ)– ಮೈಸೂರಿನಲ್ಲಿ ಮೂರು ದಿನಗಳ ಕಾಲ ನಡೆದ 'ಆದಿವಾಸಿ ನೃತ್ಯ ಮಹೋತ್ಸವ'ಕ್ಕೆ ಗುರುವಾರ ಸಂಜೆ ಅದ್ಧೂರಿ ತೆರೆ ಬಿದ್ದಿದೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಹಾಗೂ ವಿಶ್ವ ಆದಿವಾಸಿ ದಿನದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ನಾಗ್ಪುರದ ದಕ್ಷಿಣ ಕೇಂದ್ರ ವಲಯ ಸಾಂಸ್ಕೃತಿಕ ಕೇಂದ್ರ ಮತ್ತು ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು ಮೈಸೂರು ಘಟಕ, ಕರ್ನಾಟಕ ರಾಜ್ಯ ಮುಕ್ತ ವಿವಿ, ಮೈಸೂರು ರಂಗಾಯಣ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಸಹಯೋಗದೊಂದಿಗೆ ಮೈಸೂರಿನಲ್ಲಿ ನಡೆದ 3 ದಿನಗಳ ಆದಿವಾಸಿ ನೃತ್ಯ ಮಹೋತ್ಸವ ಸಮಾರೋಪಗೊಂಡಿತು.

ಇಂದು ರಂಗಾಯಣದ ಆವರಣದಲ್ಲಿರುವ ಬಿ.ವಿ ಕಾರಂತ ರಂಗ ಚಾವಡಿಯಲ್ಲಿ ನಡೆದ ಸಮಾರೋಪ ಕಾರ್ಯಕ್ರಮಕ್ಕೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮತ್ತು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಆದಿವಾಸಿಗಳ ವಾದ್ಯಗಳನ್ನು ಬಾರಿಸುವುದರ ಮೂಲಕ ಚಾಲನೆ ನೀಡಿದರು.

ನಂತರ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮಾತನಾಡಿ, ಇಂದು ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಗಾಯಕ ಅರ್ಜುನ್ ಜನ್ಯ ಅವರು ಅದ್ಭುತ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. 'ಆದಿವಾಸಿ ನೃತ್ಯ ಮಹೋತ್ಸವ'ದಲ್ಲಿಯೂ ನಮ್ಮ ಆದಿವಾಸಿ ಕಲಾವಿದರು ಯಾರಿಗೂ ಕಡಿಮೆ ಇಲ್ಲದಂತೆ ತಮ್ಮ ವಾದ್ಯ ಮತ್ತು ನೃತ್ಯಗಳ ಮೂಲಕ ಎಲ್ಲರ ಮನ ತಣಿಸಿದ್ದಾರೆ ಎಂದರು.

ಕೆಲ ವರ್ಷಗಳ ಹಿಂದೆ ಮೈಸೂರಿನ ವಸ್ತು ಪ್ರದರ್ಶನ ಆವರಣದಲ್ಲಿ ಆದಿವಾಸಿಗಳಿಗೆ ನೃತ್ಯ ಮಾಡಲು ಅವಕಾಶ ನೀಡುತ್ತಿದ್ದರು ಎಂದು ಕೇಳಿದ್ದೇನೆ. ಈ ಬಾರಿಯು ಅನೇಕ ಕಾರ್ಯಕ್ರಮಗಳ ಬಗ್ಗೆ ಚಿಂತನೆ ನಡೆಸಲಾಗಿದ್ದು, ಆದಿವಾಸಿಗಳಿಗೂ ಕಾರ್ಯಕ್ರಮ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಈ ವೇಳೆ ಛತ್ತೀಸ್‌ಘಡದ ಆದಿವಾಸಿಗಳಿಂದ ಅಬುಜ್ಮದೀಯ ನೃತ್ಯ, ಮಹಾರಾಷ್ಟ್ರ ಆದಿವಾಸಿಗಳು ಬಂಜಾರ ನೃತ್ಯ, ಮಧ್ಯಪ್ರದೇಶದ ಆದಿವಾಸಿಗಳಿಂದ ಶೈಲಾ ಕರ್ಮ ನೃತ್ಯ, ತೆಲಂಗಾಣದ ಆದಿವಾಸಿಗಳು ಮಾಥುರಿ ನೃತ್ಯ, ಕರ್ನಾಟಕದ ಆದಿವಾಸಿಗಳು ದಮಾನಿ ಸಿದ್ಧಿ ಮತ್ತು ಜೇನು ಕುರುಬ ನೃತ್ಯ ಮತ್ತು ಡೊಳ್ಳು ಕುಣಿತ ಮಾಡಿದರೆ, ರಾಮನಗರದ ಪಾರ್ಥಸಾರಥಿ ಜನಪದ ಕಲಾ ತಂಡಗಳಿಂದ ಜನಪದ ಕಲೆಗಳ ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಅಖಿಲ ಭಾರತ ಜನಪದ ಹಾಗೂ ಬುಡಕಟ್ಟು ಪರಿಷತ್ತು ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್ಯ್, ಎಐಎಫ್‌ಟಿಎ ಪ್ರಧಾನ ಕಾರ್ಯದರ್ಶಿ ಹಾಸನ್ ರಘು, ಎಐಎಫ್‌ಟಿಎ ಮೈಸೂರು ವಿಭಾಗ ಸಂಘಟನಾ ಕಾರ್ಯದರ್ಶಿ ಡಾ.ಕೆ ವಸಂತಕುಮಾರ್ ಹಾಗೂ ದೀಪಕ್ ಪಟೇಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

> ಈ ಬಾರಿ ದಸರಾ ಮಹೋತ್ಸವದ ಪ್ರವೇಶ ಶುಲ್ಕ ಸೇರಿದಂತೆ ವಸ್ತು ಪ್ರದರ್ಶನ ಗುತ್ತಿಗೆಗೆ 8 ಕೋಟಿ ರೂ. ಗ್ಲೋಬಲ್ ಟೆಂಡರ್ ಕರೆಯಲಾಗಿದೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ರಂಗಾಯಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ವಿವಿಧ ಕಾರ್ಯಕ್ರಮಗಳಿಗೆ ಭಾಗವಹಿಸಲು ಮೈಸೂರಿಗೆ ಆಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಬಾರಿಯ ದಸರಾ ವಸ್ತು ಪ್ರದರ್ಶನ ಅಚ್ಚುಕಟ್ಟಾಗಿ ಮೂಡಿ ಬರುವಂತೆ ತಿಳಿಸಿದ್ದು, ಅದಕ್ಕೆ ಬೇಕಿರುವ ಎಲ್ಲಾ ರೀತಿಯ ಸಹಕಾರವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ. ಪ್ರಾಧಿಕಾರದ ವತಿಯಿಂದ ರಾಜ್ಯದ ಎಲ್ಲಾ ಸಂಸ್ಕೃತಿಗೂ ಅವಕಾಶ ನೀಡುತ್ತೇವೆ ಎಂದರು.
>
> ನಿರಂತರವಾಗಿ ಮಳೆ ಬರುತ್ತಿರುವುದರಿಂದ ವಸ್ತು ಪ್ರದರ್ಶನದ ಆವರಣದಲ್ಲಿ ಕೆಲ ಭಾಗಗಳಲ್ಲಿ ನೀರು ನಿಲುಗಡೆಯಾಗುತ್ತಿದ್ದು, ಡಾಂಬರೀಕರಣ ಮಾಡಬೇಕಿದೆ ಹಾಗೂ ಮಳಿಗೆಗಳಿಗೆ ಆಧುನಿಕ ಸ್ಪರ್ಶವೂ ಸೇರಿದಂತೆ ಕೆಲ ಅಭಿವೃದ್ಧಿ ಕಾಮಗಾರಿ ಮಾಡಬೇಕಿದ್ದು, ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಈ ತಿಂಗಳ ಅಂತ್ಯದೊಳಗೆ ಕಾವೇರಿ ಗ್ಯಾಲರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಉದ್ಘಾಟನೆ ಮಾಡಿಸುವ ಚಿಂತನೆಯೂ ಇದೆ ಎಂದರು. 'ಮೈಸೂರು ಹಾತ್' ಶೀರ್ಷಿಕೆಯಡಿ ವರ್ಷದ 360 ದಿನಗಳ ಕಾಲ ಮೈಸೂರಿನಲ್ಲಿ ವಸ್ತುಪ್ರದರ್ಶನ ಏರ್ಪಡಿಸಲಾಗುತ್ತದೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ 350 ಕೋಟಿ ರೂ. ಅನುದಾನ ಬರುವ ನಿರೀಕ್ಷೆ ಇದ್ದು, ಈಗಾಗಲೇ 3.50 ಕೋಟಿ ರೂ ಬಿಡುಗಡೆಯಾಗಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ಎಸಿಬಿ ರದ್ದು

ನಿರ್ದೇಶನ ನೀಡಿದೆ. ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ಅಗತ್ಯವಿದೆ. ಮೂರು ವರ್ಷದ ಅವಧಿಗೆ ಅಧಿಕಾರಿಗಳ ನೇಮಕವಾಗಬೇಕು. ಲೋಕಾಯುಕ್ತರ ನೇಮಕ ವೇಳೆ ಅರ್ಹತೆ ಪರಿಗಣಿಸಬೇಕು. ಜಾತಿ ಆಧರಿಸಿ ಲೋಕಾಯುಕ್ತ, ಉಪ ಲೋಕಾಯುಕ್ತ ನೇಮಕವಾಗಬಾರದು ಎಂದು ಹೇಳಿದೆ.

ಎಬಿಸಿ ರಚನೆ ಸಮರ್ಥಿಸಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲ: ಭ್ರಷ್ಟಾಚಾರ ನಿಗ್ರಹ ದಳವನ್ನು ರಚಿಸಲು ಅಧಿಸೂಚನೆ ಹೊರಡಿಸಿದ್ದ ಏಕೈಕ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣಗಳ ತನಿಖೆಗೆ ಲೋಕಾಯುಕ್ತದಿಂದ ಅಧಿಕಾರವನ್ನು ಏಕೆ ಹಿಂತೆಗೆದುಕೊಂಡಿದೆ ಎಂಬುದನ್ನು ಸಮರ್ಥಿಸಲು ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ನ್ಯಾಯಾಲಯ ಟೀಕಿಸಿದೆ. ಮಾಜಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2016 ರಲ್ಲಿ ಎಸಿಬಿ ರಚಿಸಿತು. ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಲೋಕಾಯುಕ್ತ ದೊಂದಿಗೆ ಭ್ರಷ್ಟಾಚಾರ ತಡೆ ಕಾಯ್ದೆಯ ಅಧಿಕಾರವನ್ನು ಮರುಸ್ಥಾಪಿಸುವುದಾಗಿ ಭರವಸೆ ನೀಡಿದ್ದರೂ, ಬಿಜೆಪಿ ಸರ್ಕಾರ ತನ್ನ ಭರವಸೆಯನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿತ್ತು ಮತ್ತೊಂದೆಡೆ, ಅಧಿಕಾರಕ್ಕೆ ಬಂದರೆ ಲೋಕಾಯುಕ್ತದಿಂದ ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಅಧಿಕಾರವನ್ನು ಮರುಸ್ಥಾಪಿಸುವುದಾಗಿ ಭರವಸೆ ನೀಡಿದ್ದ ಜೆಡಿಎಸ್, ಸಮ್ಮಿಶ್ರ ಸರ್ಕಾರ ರಚಿಸಿ ಅಧಿಕಾರಕ್ಕೆ ಬಂದರೂ ಅದನ್ನು ಮಾಡಲಿಲ್ಲ.

ಯುವಜನ ಮಹೋತ್ಸವಕ್ಕೆ ಸಿಎಂ ಚಾಲನೆ

ವಿದ್ಯಾರ್ಥಿಗಳು ಸಾಂಸ್ಕೃತಿಕ ಉತ್ಸವಕ್ಕೆ ಈ ಪ್ರಮಾಣ ದಲ್ಲಿ ಜಮಾವಣೆಯಾಗಿದ್ದುದು ಇಡೀ ರಾಜ್ಯದಲ್ಲೇ ಪ್ರಥಮವಾಗಿದ್ದು, ಇತಿಹಾಸ ನಿರ್ಮಾಣವಾಗಿದೆ ಎಂದು ವೇದಿಕೆ ಮೇಲಿದ್ದ ಗಣ್ಯರೇ ಅಭಿಪ್ರಾಯಪಟ್ಟರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹೋತ್ಸವ ಉದ್ಘಾಟಿಸಿ ವಿದ್ಯಾರ್ಥಿ ಗಳನ್ನುದ್ದೇಶಿಸಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ, ಮೇಯರ್ ಸುನಂದಾ ಪಾಲನೇತ್ರ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್, ಸಂಸದ ಪ್ರತಾಪ್‌ಸಿಂಹ, ಶಾಸಕ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಿ.ಎಸ್.ನಿರಂಜನಕುಮಾರ್, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಆರ್.ಶಿವಪ್ಪ ಸೇರಿದಂತೆ ಹಲವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಖ್ಯಾತ ನಟ ರಾಕಿಂಗ್ ಸ್ಟಾರ್ ಯಶ್ ಅವರು ಯುವಜನ ಮಹೋತ್ಸವದಲ್ಲಿ ಪಾಲ್ಗೊಂಡಿದ್ದು, ವಿದ್ಯಾರ್ಥಿಗಳ ಸಂಭ್ರಮ ಮುಗಿಲು ಮುಟ್ಟುವಂತೆ ಮಾಡಿದುದು ವಿಶೇಷವಾಗಿತ್ತು. ಪ್ರತೀ ಬಾರಿ ಯಶ್ ಹೆಸರೇಳುವಾಗಲೂ 'ರಾಕಿ-ರಾಕಿ' ಎಂದು ಜೋರಾಗಿ ಕೂಗುತ್ತಿದ್ದ ವಿದ್ಯಾರ್ಥಿಗಳು, ರಾಷ್ಟ್ರ ಧ್ವಜಗಳನ್ನು ಪ್ರದರ್ಶಿಸುವ ಮೂಲಕ ತಮ್ಮ ಅಭಿಮಾನ ಮೆರೆದರು. ವೇದಿಕೆಗೆ ಯಶ್ ಆಗಮಿಸಿದಾಗಲಂತೂ ವಿದ್ಯಾರ್ಥಿ ಸಮೂಹ ಹುಚ್ಚೆದ್ದು ಕುಣಿದು, ಹರ್ಷೋದ್ಘಾರ ಮುಗಿಲು ಮುಟ್ಟುವಂತೆ ಮಾಡಿದರು. ಅವರನ್ನು ಮೌನವಾಗಿರಿಸಲು ಆಯೋಜಕರು ಹರಸಾಹಸ ಪಡುವಂತಾಯಿತು. ಕಾರ್ಯಕ್ರಮ ಆರಂಭವಾಗುವುದಕ್ಕೂ ಮೊದಲು ನಡೆದ ಸಂಗೀತ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕುಣಿದು ಕುಪ್ಪಳಿಸಿದ ರಲ್ಲದೆ, ನಂತರ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡದವರು ನಡೆಸಿಕೊಟ್ಟ ಸಂಗೀತ, ನೃತ್ಯ ಕಾರ್ಯಕ್ರಮವನ್ನು ನೋಡಿ ಸಂಭ್ರಮಿಸಿದರು. ಎಲ್ಲಾ ಜಿಲ್ಲೆಗಳ ಪದವಿ ಕಾಲೇಜುಗಳಿಂದ ಕೆಎಸ್ಆರ್‌ಟಿಸಿ ಬಸ್ಸುಗಳಲ್ಲಿ ವಿದ್ಯಾರ್ಥಿಗಳನ್ನು ಕರೆತರಲಾಗಿತ್ತು. ವಿದ್ಯಾರ್ಥಿ ಸಮೂಹವನ್ನು ನಿಯಂತ್ರಿಸಲು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಣಗಾಡುವಂತಾಯಿತು. ಎಲ್ಲರೂ ಕೈಯ್ಯಲ್ಲಿ ರಾಷ್ಟ್ರ ಧ್ವಜ ಹಿಡಿದು ಯುವ ಜನೋತ್ಸವದಲ್ಲಿ ಪಾಲ್ಗೊಂಡಿದ್ದುದು ಮತ್ತೊಂದು ವಿಶೇಷ.

ಮುನ್ನುಗ್ಗಿದರೆ ಗುರಿ ತಲುಪಬಹುದು

ಆಸೆ. ನಾನು ವಿದ್ಯಾರ್ಥಿ ದಿಸೆಯಲ್ಲಿ ಯಾಮಾರಿದ್ದೇನೆ. ಅದರಿಂದ ತಂದೆ-ತಾಯಿ ಖುಷಿ ಯಾಗಿರಲಿಲ್ಲ. ಬೇಜವಾಬ್ದಾರಿಯಿಂದ ಸ್ಟಂಟ್ ಮಾಡಿಕೊಂಡು ಪಡುವಾರಹಳ್ಳಿ, ಗಂಗೋತ್ರಿಯಲ್ಲಿ ಕಾಲ ಕಳೆಯುತ್ತಿದ್ದೆ. ಇಂದು ಅದೇ ನನ್ನೂರಲ್ಲಿ ನನ್ನನ್ನು ಪ್ರೀತಿಸುವ ಅವಕಾಶ ಸಿಕ್ಕಿದೆ. ಒಂದು ಸಾಮಾನ್ಯ ಬದಲಾವಣೆ ಮನುಷ್ಯನ ಭವಿಷ್ಯವನ್ನೇ ಬದಲಿಸುತ್ತದೆ. ಚಿಕ್ಕ ಚಿಕ್ಕ ವಿಷಯಗಳಿಂದಲೂ ಏನನ್ನಾದರೂ ಸಾಧಿಸಬಹುದು ಎಂದ ಯಶ್, ಆತ್ಮವಿಶ್ವಾಸವಿರಬೇಕು. ಒಳ್ಳೆಯದನ್ನು ಯೋಚಿಸಿ. ಆಗ ಎಲ್ಲವೂ ಸಿಗುತ್ತದೆ ಎಂದರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಸ್ಮರಿಸೋಣ. ನಮ್ಮಲ್ಲೂ ಒಂದು ಸರ್ಕಾರ ಹುಟ್ಟಬೇಕು. ನಾವೇ ಕಾರ್ಯ ಯೋಜನೆ ಗಳನ್ನು ರೂಪಿಸಿ ಕೊಳ್ಳಬೇಕು. ಸರ್ಕಾರದ ಯೋಜನೆ, ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳಿ. ಮುಖ್ಯಮಂತ್ರಿಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಎಲ್ಲರೂ ಸಹಕರಿಸಬೇಕು ಎಂದು ರಾಕಿಂಗ್ ಸ್ಟಾರ್ ನುಡಿದರು.

ಸ್ಥಳೀಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ

ನಿವಾಸಿಗಳಿಗೆ ನಗರಪಾಲಿಕೆ ಅವೈಜ್ಞಾನಿಕವಾಗಿ ನೀರಿನ ದರವನ್ನು ನಿಗದಿಪಡಿಸಿದೆ ಎಂದು ಅಲ್ಲಿನ ನಿವಾಸಿಗಳು ಶಾಸಕ ಜಿ.ಟಿ.ದೇವೇಗೌಡರ ಗಮನಕ್ಕೆ ತಂದಿದ್ದರು. ಈ ವಿಷಯವನ್ನು ಮುಖ್ಯಮಂತ್ರಿಗಳೊಂದಿಗೆ ಜಿಟಿಡಿ ಪ್ರಸ್ತಾಪಿಸಿದ ಹಿನ್ನಲೆಯಲ್ಲಿ ಮುಖ್ಯಮಂತ್ರಿಗಳು ರಮಾಬಾಯಿನಗರ ನಿವಾಸಿಗಳಿಗೆ ಅವೈಜ್ಞಾನಿಕವಾಗಿ ನಿಗದಿಪಡಿಸಿರುವ ನೀರಿನ ದರವನ್ನು ಪರಿಷ್ಕರಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಅಲ್ಲದೇ ಅಲ್ಲಿನ ನಿವಾಸಿಗಳು ಪರಿಷ್ಕೃತ ನೀರಿನ ದರ ಪಾವತಿಸಿಕೊಂಡು ಖಾತೆ ಮಾಡಿ ಕಂದಾಯ ಪಡೆಯುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಸಂಬಂಧ ಶೀಘ್ರದಲ್ಲೇ ಅಧಿಕೃತ ಆದೇಶ ಹೊರಡಿಸಲಾಗುವುದು. ಆದ್ದರಿಂದ ರಮಾ ಬಾಯಿ ನಗರ ನಿವಾಸಿಗಳು ಆತಂಕ ಪಡಬೇಕಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ. ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಮಹದೇವಪುರ, ಲಿಂಗಾಂಬುದಿ, ಪರಸಯ್ಯನಹುಂಡಿ, ಟೆಂಪಲ್ ಬೆಲ್ ಬಡಾವಣೆ, ವಿಶ್ವ ವಿದ್ಯಾನಿಲಯ ಬಡಾವಣೆಗಳಿಗೆ ಕಬಿನಿ ನೀರು ಪೂರೈಸುವ ಕಾಮಗಾರಿ ಕೈಗೊಂಡು ಆಗಸ್ಟ್ ಅಂತ್ಯದೊಳಗೆ ಈ ಬಡಾವಣೆಗಳಿಗೆ ಕಬಿನಿ ನೀರು ಪೂರೈಸಬೇಕೆಂದು ಮುಖ್ಯಮಂತ್ರಿಗಳು ಪಾಲಿಕೆ ಆಯುಕ್ತರು ಮತ್ತು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ತಿಳಿಸಿರುವ ಜಿ.ಟಿ.ದೇವೇಗೌಡರು ಈ ಪಟ್ಟಣ ಪಂಚಾಯತ್ ವ್ಯಾಪ್ತಿಯ ಎಲ್ಲಾ ಬಡಾವಣೆಗಳಲ್ಲಿ ಶೀಘ್ರದಲ್ಲೇ ಕಂದಾಯ ಅದಾಲತ್ ನಡೆಸಿ, ಖಾತೆ ಮಾಡಿ ಕಂದಾಯವನ್ನು ಸ್ಥಳದಲ್ಲೇ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಮೈಸೂರಲ್ಲಿ 'ಡೆಂಗ್ಯೂ' ರುದ್ರ ನರ್ತನ

ಹೊರರೋಗಿಗಳು ಭೇಟಿ ನೀಡಿದ್ದು, ಅವರ ಬಹುತೇಕ ಮಂದಿ ಜ್ವರ, ನೆಗಡಿ, ಶೀತ, ಕೆಮ್ಮು ಎಂದು ಚಿಕಿತ್ಸೆ ಪಡೆದವರಾಗಿದ್ದಾರೆ. ಹಾಗೆಯೇ ಜೆಎಸ್ಎಸ್, ಅಪೋಲೋ ಸೇರಿದಂತೆ ನಗರದ ಪ್ರಮುಖ ಆಸ್ಪತ್ರೆಗಳು ಹಾಗೂ ಸರ್ಕಾರಿ ಪ್ರಾಥಮಿಕ ಕೇಂದ್ರಗಳಿಗೆ ಸಾಕಷ್ಟು ಜನರು ಭೇಟಿ ನೀಡಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಡೆಂಗ್ಯೂ ಜ್ವರ: ಮಕ್ಕಳು, ವಯೋವೃದ್ಧರಲ್ಲಿ ಹೆಚ್ಚಾಗಿ ಡೆಂಗ್ಯೂ ಜ್ವರ ಕಾಣಿಸಿಕೊಂಡಿದ್ದು, ಜನವರಿ ತಿಂಗಳಿನಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ 450ಕ್ಕೂ ಹೆಚ್ಚು ಮಂದಿಗೆ ಡೆಂಗ್ಯೂ ಕಾಣಿಸಿಕೊಂಡಿದೆ. ಅವರಲ್ಲಿ ಹೆಚ್ಚಾಗಿ ಮಕ್ಕಳು ಡೆಂಗ್ಯೂ ಜ್ವರದಿಂದ ಬಳಲಿದ್ದಾರೆ. ಅಲ್ಲದೆ ಸುಮಾರು 50ಕ್ಕೂ ಹೆಚ್ಚು ಮಂದಿಗೆ ಚಿಕುನ್ ಗುನ್ಯಾ ಹಾಗೂ ಹೆಚ್1ಎನ್1 ಸೋಂಕಿನ ಲಕ್ಷಣಗಳು ಕಂಡು ಬಂದಿವೆ ಎಂದು ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಚಿದಂಬರ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ನಿರಂತರವಾಗಿ ಸುರಿಯುತ್ತಿರುವ ಜಡಿ ಮಳೆ, ಶೀತ ಗಾಳಿ ಹಾಗೂ ಮೊಡ ಕವಿದ ವಾತಾವರಣ ದಿಂದಾಗಿ ಸೊಳ್ಳೆಗಳ ಪ್ರಮಾಣ ಹೆಚ್ಚಾಗಲಿದೆ. ಮುಖ್ಯವಾಗಿ ಆಗಾಗ ಮಳೆ ಸುರಿಯುವು ದರಿಂದ ಗುಂಡಿಗಳಲ್ಲಿ, ಹಳ್ಳ-ಕೊಳ್ಳಗಳಲ್ಲಿ ನೀರು ನಿಂತು ಡೆಂಗ್ಯೂ ಸೊಳ್ಳೆಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಬಿಸಿಲು ಬಂದರಷ್ಟೇ ಸೊಳ್ಳೆಗಳ ಕಾಟ ಕಡಿಮೆಯಾಗುವುದು. ಜಿಲ್ಲೆಯ ಪ್ರಮುಖ ಖಾಸಗಿ ಆಸ್ಪತ್ರೆಗಳು ಸೇರಿದಂತೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಡೆಂಗ್ಯೂ ರಕ್ತ ಪರೀಕ್ಷೆ ಮಾಡಿಸಿಕೊಂಡವರ ಶೇ.80 ರಷ್ಟು ಮಾಹಿತಿ ದೊರೆಯಲಿದ್ದು, ಕಳೆದ 7 ತಿಂಗಳಲ್ಲಿ 2389 ಮಂದಿಗೆ ಡೆಂಗ್ಯೂ ರಕ್ತ ಪರೀಕ್ಷೆಯಾಗಿದೆ ಎಂದು ತಿಳಿಸಿದರು.

ಹರಡುವಿಕೆ ಜಾಸ್ತಿ: ಮನೆಯಲ್ಲಿ ಒಬ್ಬರಿಗೆ ಜ್ವರ, ನೆಗಡಿ, ಕೆಮ್ಮು ಬಂದರೆ ಮನೆ ಮಂದಿಗೆಲ್ಲಾ ಹರಡುವ ಸಾಧ್ಯತೆ ಹೆಚ್ಚು. ಅವರಲ್ಲಿ 10 ಮಂದಿಯನ್ನು ಕೊರೊನಾ ತಪಾಸಣೆಗೆ ಒಳಪಡಿಸಿದರೆ ಒಬ್ಬರು ಅಥವಾ ಇಬ್ಬರಿಗೆ ಪಾಸಿಟಿವ್ ಬರುವ ಸಾಧ್ಯತೆಯೂ ಇದೆ. ಕೊರೊನಾ ಸೋಂಕಿನ ಹಾಗೂ ಹೆಚ್1ಎನ್1 ಗುಣಲಕ್ಷಣಗಳು ಒಂದೇ ರೀತಿಯದ್ದಾಗಿದ್ದು, ಸೂಕ್ತ ಸಮಯಕ್ಕೆ ಚಿಕಿತ್ಸೆ ಜೊತೆಗೆ ಮುಂಜಾಗ್ರತೆ ಕ್ರಮ ವಹಿಸುವುದು ಅತ್ಯಂತ ಅವಶ್ಯವಾಗಿದೆ ಎಂದರು.

ಮಾಸ್ಕ್, ಸಾಮಾಜಿಕ ಅಂತರ ಮುಖ್ಯ: ಜ್ವರ, ಶೀತ, ಕೆಮ್ಮಿಗೆ ಸಾಮಾನ್ಯವಾಗಿ ನೀಡುವ ಚಿಕಿತ್ಸೆಯನ್ನೇ ನೀಡಲಾಗುತ್ತದೆ. ಚಿಕಿತ್ಸೆ ಜೊತೆಗೆ ಜ್ವರ, ಶೀತ ಇದ್ದವರು ಮಾಸ್ಕ್ ಧರಿಸುವುದು, ಪರಸ್ಪರ ಅಂತರ ಕಾಯ್ದುಕೊಳ್ಳುವುದು ಮುಖ್ಯವಾಗುತ್ತದೆ. ಕೋಲ್ಡ್(ಶೀತ) ಪದಾರ್ಥ ಗಳನ್ನು ಯಾವುದೇ ಕಾರಣಕ್ಕೂ ಬಳಸಬಾರದು. ಶಾಲೆ ಯಾವುದಾದರೂ ಮಗುವಿಗೆ ಅನಾರೋಗ್ಯವಿದ್ದರೆ ಮೂರ್‍ನಾಲ್ಕು ದಿನಗಳ ಕಾಲ ರಜೆ ನೀಡುವುದು ಉತ್ತಮ, ಇಲ್ಲವಾದರೆ ತರಗತಿ ಎಲ್ಲಾ ವಿದ್ಯಾರ್ಥಿಗಳಿಗೂ ಹರಡುವ ಸಾಧ್ಯತೆ ಹೆಚ್ಚು ಎಂದು ಕೆ.ಆರ್.ಆಸ್ಪತ್ರೆ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಡಾ.ಲಕ್ಷ್ಮೀಗೌಡ ಎಚ್ಚರಿಸಿದರು. ದೇಹದಲ್ಲಿ ಬಿಳಿರಕ್ತ ಪ್ರಮಾಣ ಕಡಿಮೆಯಾದಷ್ಟು ಜ್ವರ ಜಾಸ್ತಿಯಾಗುತ್ತದೆ. ಒಂದು ವಾರಕ್ಕಿಂತ ಹೆಚ್ಚಿನ ದಿನಗಳು ಜ್ವರ ಕಂಡುಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಡೆಂಗ್ಯೂ ಪರೀಕ್ಷೆ ಮಾಡಿಸಿಕೊಳ್ಳುವುದು ಸೂಕ್ತ. ಕಳೆದ ಎರಡು ತಿಂಗಳಿಂದ ಜ್ವರ, ನೆಗಡಿ ಇನ್ನಿತರೆ ಸಮಸ್ಯೆಗಳನ್ನು ಹೇಳಿಕೊಂಡು ಬರುವವರ ಸಂಖ್ಯೆ ಬಾರೀ ಪ್ರಮಾಣದಲ್ಲಿ ಹೆಚ್ಚಾಗಿದೆ. ಆದ್ದರಿಂದ ಪ್ರತಿಯೊಬ್ಬರು ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಬಿಸಿ ಪದಾರ್ಥ: ಮಳೆಗಾಲದಲ್ಲಿ ಬಿಸಿಯಾಗಿರುವ ಆಹಾರ ಪದಾರ್ಥ ಸೇವಿಸುವುದು ಒಳ್ಳೆಯದಾಗಿದ್ದು, ಫ್ರೀಡ್ಜ್ ನಲ್ಲಿಟ್ಟು ಬಳಸುವುದು ಸರಿಯಲ್ಲ. ಐಸ್ ಕ್ರೀಂನಿಂದ ಕೆಲ ದಿನಗಳು ದೂರವಿದ್ದರೆ ಹೆಚ್ಚು ಅನುಕೂಲವಾಗುತ್ತದೆ ಎಂದು ಕಿವಿಮಾತು ಹೇಳಿದರು.

ತ್ರಿವರ್ಣ ಧ್ವಜದ ಬಗ್ಗೆ ಟೀಕಿಸುವುದು ದೇಶ ವಿರೋಧಿ ಕೆಲಸ

ಕಾಂಗ್ರೆಸ್ ವಿರುದ್ಧ ಹರಿಹಾಯ್ದ ಮುಖ್ಯಮಂತ್ರಿ ಬೊಮ್ಮಾಯಿ



ಮೈಸೂರು, ಆ.11(ಆರ್‌ಕೆಬಿ)- ಹಲವರ ತ್ಯಾಗ, ಬಲಿದಾನ, ಹೋರಾಟದಿಂದ ಸಿಕ್ಕಿರುವ ತ್ರಿವರ್ಣ ಧ್ವಜ, ಸ್ವಾತಂತ್ರ್ಯ ಪೂರ್ವದಲ್ಲಿ ಹಿರಿಯರ ಹೋರಾಟದ ಫಲ. ತ್ರಿವರ್ಣ ಧ್ವಜದಲ್ಲಿ ಭಾರತದ ಏಕತೆ, ಸ್ವಾತಂತ್ರ್ಯತೆ ಅಡಗಿದೆ. ಅದನ್ನು ತಿರುಚದೆ ಸತ್ಯಾಸತ್ಯತೆ ತಿಳಿಸ ಬೇಕಿದೆ. ಆದರೆ ತ್ರಿವರ್ಣ ಧ್ವಜದ ಬಗ್ಗೆ ಟೀಕೆ ಮಾಡುವುದು ದೇಶ ವಿರೋಧಿ ಕೆಲಸವಾಗುತ್ತದೆ. ಇಂತಹ ಕೀಳುಮಟ್ಟದ ಮಾತಿಗೆ ರಾಜ್ಯದ ಜನರು ಬೆಲೆ ಕೊಡುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಹರ್ ಘರ್ ತಿರಂಗ ಟೀಕೆಗೆ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯದ ಬಗ್ಗೆ ಕೆಲವರಿಗೆ ಇತಿಹಾಸ ತಿಳಿದಿಲ್ಲ. ಅದನ್ನು ತಿರುಚುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಜನತೆ ಅವರ ಮಾತುಗಳಿಗೆ ಕಿವಿಗೊಡದೆ, ಮತ್ತಷ್ಟು ಸ್ಫೂರ್ತಿ ಮತ್ತು ಪ್ರೇರಣೆಯಿಂದ ಸ್ವಾತಂತ್ರ್ಯ ದಿನ ವನ್ನು ಸಂಭ್ರಮದಿಂದ ಆಚರಿಸುತ್ತಾರೆ ಎಂದರು.


75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಹರ್ ಘರ್ ತಿರಂಗ ಹಾರಿಸುವ ಸಂಬಂಧ ಸಿದ್ಧತೆಗಳು ನಡೆದಿದ್ದು, ಸರ್ಕಾರ ರಾಜ್ಯಾದ್ಯಂತ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಿದೆ ಎಂದು ಹೇಳಿದರು.

ಮಳೆ ಹಾನಿ ಪರಿಹಾರ: ರಾಜ್ಯದಲ್ಲಿ ಉಂಟಾಗಿ ರುವ ಮಳೆ ಹಾನಿ ಸಂಬಂಧ ಪರಿಹಾರ ನೀಡಲಾಗುವುದು. ಮೊದಲ ಹಂತದಲ್ಲಿ ಪರಿಹಾರ ನೀಡುತ್ತಿದ್ದೇವೆ. ಇದಕ್ಕಾಗಿ ಎಲ್ಲ ರೀತಿಯ ಕಾರ್ಯ ಚಟುವಟಿಕೆ ಸಿದ್ಧವಾಗಿದೆ ಎಂದು ಹೇಳಿದರು.

ಒಮಿಕ್ರಾನ್, ಆತಂಕ ಬೇಡ: ಒಮಿಕ್ರಾನ್ ರೂಪಾಂತರಿ ತಳಿ ವಿಚಾರ ಕುರಿತು ಕೇಂದ್ರದಿಂದ ಸೂಚನೆ ಬರುವ ಮುನ್ನ ಎಚ್ಚೆತ್ತುಕೊಂಡಿದ್ದೇವೆ. ನಿರಂತರವಾಗಿ ಅದರ ಕುರಿತು ಸಂಶೋಧನೆ ನಡೆಯುತ್ತಿದೆ. ರಾಜ್ಯದಲ್ಲಿ ಸದ್ಯ ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಟ ಯಶ್, ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವಥ್‌ನಾರಾಯಣ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ನಿರಂಜನ ಕುಮಾರ್, ಸಂಸದ ಪ್ರತಾಪ್‌ಸಿಂಹ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಇನ್ನಿತರರು ಉಪಸ್ಥಿತರಿದ್ದರು.

ಪಿ.ಆರ್.ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವಕ್ಕೆ ಚಾಲನೆ



ಮೈಸೂರು, ಆ.11(ಎಂಟಿವೈ)- 'ಕಲಾ ಸಂಸಾರಿ'ಯಂತಿರುವ ಹಿರಿಯ ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅವರ ಆದರ್ಶ ವನ್ನು ಪಾಲಿಸುವಂತೆ ಹಿರಿಯ ಸಾಹಿತಿ ಪ್ರೊ. ಸಿ.ಪಿ.ಕೃಷ್ಣಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ಕಲಾ ಗ್ಯಾಲರಿಯಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗ ದಲ್ಲಿ ಗುರುವಾರ ಆಯೋಜಿಸಿದ್ದ ಪಿ.ಆರ್. ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಮಾತ ನಾಡಿದ ಅವರು, ತಿಪ್ಪೇಸ್ವಾಮಿ ಅವರೊಬ್ಬ ಶ್ರೇಷ್ಠ ಕಲಾವಿದರು. ನಿಸರ್ಗ ಚಿತ್ರ ರಚನೆ ಯಲ್ಲಿ ಮಲೆನಾಡಿಗೆ ಹೋಗಿ ಕಲಾಕೃತಿಗಳನ್ನು ರಚಿಸಿ, ರಾಷ್ಟ್ರಕವಿ ಕುವೆಂಪು ಅವರಿಂದ ಮೆಚ್ಚುಗೆ ಪಡೆದಿದ್ದರು ಎಂದು ತಿಳಿಸಿದರು.

ಜಾನಪದ ಕಲಾವಿದರಾಗಿ ಮೈಸೂರು ವಿವಿ, ಧರ್ಮಸ್ಥಳ ಹಾಗೂ ಸುತ್ತೂರು ಕ್ಷೇತ್ರ ದಲ್ಲಿ ವಸ್ತು ಸಂಗ್ರಹಾಲಯ ಸ್ಥಾಪನೆಯ ರೂವಾರಿಗಳು. ಇದಲ್ಲದೇ ಉತ್ತಮ ಲೇಖಕ ರಾಗಿ ಹಲವಾರು ವ್ಯಕ್ತಿ ಚಿತ್ರಗಳನ್ನು ಬರೆದಿ ದ್ದರು. ಡಾ.ಹಾ.ಮಾ. ನಾಯಕರ ಮುನ್ನುಡಿ ಇದ್ದ 'ಹೋರಾಟಗಾರ ಕೆಂಚಪ್ಪ' ಕೃತಿ ಗಮನ ಸೆಳೆದಿತ್ತು ಎಂದು ಅವರು ಹೇಳಿದರು.

ಶತಮಾನೋತ್ಸವ ಲಾಂಛನ ಅನಾವರಣ ಮಾಡಿದ ಹಿರಿಯ ಕಲಾವಿದ ಎನ್. ರಾಘವೇಂದ್ರಮೂರ್ತಿ ಮಾತನಾಡಿ, ಅತಿ ಕಿರಿಯ ವಯಸ್ಸಿನಲ್ಲಿಯೇ ರಾಜ್ಯ ಪ್ರಶಸ್ತಿ ಪಡೆದ ಪಿ.ಆರ್. ತಿಪ್ಪೇಸ್ವಾಮಿ ಅವರು ನಂತರ ಕಲಾವಿದರನ್ನು ಗುರುತಿಸಿ, ಮಾಸಾಶನ ಕೊಡಿಸಲು ಕಾರಣಕರ್ತರಾದರು. ದೆಹಲಿ ಸೇರಿದಂತೆ ಹಲವೆಡೆ ಕಲಾಕೃತಿಗಳನ್ನು ಪ್ರದರ್ಶಿಸಿದ್ದರು ಎಂದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಮಾನಸ ಮಾತನಾಡಿ, ತಿಪ್ಪೇಸ್ವಾಮಿ ಅವರು ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದರು. ಆಗ ಮುಖ್ಯಮಂತ್ರಿಯಾಗಿದ್ದ ಎಸ್. ಬಂಗಾರಪ್ಪ ಅವರು ಎಲ್ಲಾ ಅಕಾಡೆಮಿಯ ಅಧ್ಯಕ್ಷರಿಗೆ ಕಾರು ಮಂಜೂರು ಮಾಡಿದರು. ಆದರೆ ತಿಪ್ಪೇಸ್ವಾಮಿ ಅವರು ಆ ಹಣದಲ್ಲಿ ಯುವ ಕಲಾವಿದರಿಗೆ ಶಿಷ್ಯ ವೇತನ ನೀಡಿ, ತಾವು ಮಾತ್ರ ಬಸ್ಸಿನಲ್ಲಿಯೇ ಓಡಾಡುತ್ತಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ ಮಾತನಾಡಿ, ಶತಮಾನೋತ್ಸವದ ಮುಖ್ಯ ಕಾರ್ಯಕ್ರಮವನ್ನು ತವರು ಜಿಲ್ಲೆಯಾದ ಚಿತ್ರದುರ್ಗದಲ್ಲಿ ನಡೆಸಲಾಗುವುದು. ಹರ್ತಿಕೋಟೆಯಲ್ಲಿರುವ ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಿಸಲಾಗುವುದು ಎಂದರು.

10 ಕಿರಿಯ ಕಲಾವಿದರಿಗೆ ಪ್ರಶಸ್ತಿ: ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶ್ರೀ ಕಲಾನಿಕೇತನ ಕಲಾ ಶಾಲೆಯ ಪ್ರಾಂಶು ಪಾಲ ಕೆ.ಸಿ ಮಹದೇವಶೆಟ್ಟಿ ಮಾತನಾಡಿ, ಪ್ರತಿಷ್ಠಾನ ವತಿಯಿಂದ ಪ್ರತಿ ವರ್ಷ ಓರ್ವ ಹಿರಿಯ ಕಲಾವಿದರಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಲಾಗುತ್ತಿದೆ. ಮೈವಿವಿ ಸಂಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಸಿ.ಡಿ. ಪರಶುರಾಮ ಅವರು, ತಿಪ್ಪೇಸ್ವಾಮಿ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ತಲಾ 5 ಸಾವಿರ ರೂ.ಗಳಂತೆ 10 ಕಿರಿಯ ಕಲಾವಿದರಿಗೆ ಪ್ರಶಸ್ತಿ ನೀಡಲು 50 ಸಾವಿರ ರೂ. ದೇಣಿಗೆ ನೀಡಿದ್ದಾರೆ. ಈ ಬಾರಿ ವಿಶೇಷ ವಾಗಿ ಹತ್ತು ಮಂದಿ ಹಿರಿಯ ಕಲಾವಿದ ರಿಗೂ ಪ್ರಶಸ್ತಿ ನೀಡಲು ಪ್ರಯತ್ನಿಸಲಾ ಗುವುದು ಎಂದು ಅವರು ಹೇಳಿದರು.

ಇದೇ ವೇಳೆ ಪಿಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನಕ್ಕೆ ಮೈವಿವಿ ಡಾ.ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರದ ನಿವೃತ್ತ ನಿರ್ದೇಶಕ ಡಾ. ಮೈಲಹಳ್ಳಿ ರೇವಣ್ಣ 10 ಸಾವಿರ ರೂ., ಹಿರಿಯ ಕಲಾವಿದ ಎನ್. ರಾಘವೇಂದ್ರ ಮೂರ್ತಿ 5 ಸಾವಿರ ರೂ. ದೇಣಿಗೆ ನೀಡಿದರು.

ಗಮನ ಸೆಳೆದ ಚಿತ್ರಕಲಾ ಪ್ರದರ್ಶನ: ಪಿಆರ್‌ಟಿ ಜನ್ಮ ಶತಮಾನೋತ್ಸವ ಅಂಗವಾಗಿ ಶ್ರೀ ಕಲಾನಿಕೇತನ ಕಲಾ ಶಾಲೆಯ ನಿಸರ್ಗ ಚಿತ್ರಕಲಾವಿದರ ಕಲಾಕೃತಿ ಗಳ ಪ್ರದರ್ಶನ ಕೂಡ ಆರಂಭವಾಗಿದ್ದು, ಆ.20 ರವರೆಗೆ ವೀಕ್ಷಿಸಬಹುದಾಗಿದೆ.

ಹ್ಯೂಮಿಕ್ ಆಸಿಡ್ ತಯಾರಿಕೆ

ಮೈಸೂರು, ಆ.11- ಯಾವುದೇ ಬೆಳೆಯ ಬೇರಿನ ಉತ್ತಮ ಬೆಳವಣಿಗೆ ಹ್ಯೂಮಿಕ್ ಆಸಿಡ್ ಉತ್ತಮ ಟಾನಿಕ್.100 ಲೀಟರ್ ನೀರಿಗೆ, 20 ಕೆ.ಜಿ ಹಸಿಸಗಣಿ, 2 ಕೆ.ಜಿ. ಸತುವಿನ ಸಲ್ಫೇಟ್ ಮತ್ತು 1ಕೆ.ಜಿ ಬೋರಾಕ್ಸ್ + ಜೈವಿಕಗೊಬ್ಬರ/ ಜೈವಿಕ ಪೀಡೆನಾಶಕಗಳ consortia (2-3 ಕೆ.ಜಿ.) ಹಾಕಿ ಮಿಶ್ರಣ ಮಾಡಿ ಒಂದು ವಾರ ಗಾಳಿಯಾಡದಂತೆ ಮುಚ್ಚಿಡಬೇಕು.

ವಾರದ ನಂತರ 400 ಲೀಟರ್ ನೀರಿಗೆ ಈ 100 ಲೀಟರ್ ಸತ್ವಭರಿತ ಮಿಶ್ರಣ ಸೇರಿಸಿ ಬೆಳೆಗಳಿಗೆ ಡ್ರಿಪ್ ಮುಖಾಂತರ ಅಥವಾ ಡ್ರೆಂಚಿಂಗ್ ರೂಪದಲ್ಲಿ ಕೊಡಬಹುದು. ಬೇರಿನ ಉತ್ತಮ ಬೆಳವಣಿಗೆಗೆ ಉಪಕಾರಿ, ಗಿಡದ ಬೆಳವಣಿಗೆಯಲ್ಲಿ ಇದೊಂದು ಉತ್ತಮ ಟಾನಿಕ್. ಹ್ಯೂಮಿಕ್ ಆಮ್ಲಗಳು ಸ್ಥಿರೀಕರಣ ಗುಣ ಲಕ್ಷಣಗಳನ್ನು ರಾಸಾಯನಿಕವಾಗಿ ಬದಲಾ ಯಿಸುತ್ತವೆ. ಆಮ್ಲ ಮತ್ತು ಕ್ಷಾರಿಯ (Acid and Alkaline soils) ಮಣ್ಣನ್ನು ತಟಸ್ಥ ಗೊಳಿಸುತ್ತದೆ. ಮಣ್ಣಿನ ಪಿ.ಹೆಚ್ ಮೌಲ್ಯವನ್ನು ನಿಯಂತ್ರಿಸುತ್ತದೆ. ಸಸ್ಯಗಳಿಂದ ಪೋಷಕಾಂಶ ಗಳು ಮತ್ತು ನೀರು ತೆಗೆದುಕೊಳ್ಳುವುದನ್ನು ಸುಧಾರಿಸುತ್ತದೆ ಮತ್ತು ಉತ್ತಮಗೊಳಿ ಸುತ್ತದೆ. ಮಣ್ಣಿನಲ್ಲಿ ಸೂರ್ಯನ ಶಕ್ತಿ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಿಸುತ್ತದೆ.

ಹೆಚ್ಚಿನ ಮಾಹಿತಿಗಾಗಿ ರಾಹುಲ್‌ದಾಸ್, ತೋಟಗಾರಿಕೆ ತಜ್ಞರು, ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ, ಮೈಸೂರು ದೂ.9880338630 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬಸವ ಭಾರತ ಫೌಂಡೇಷನ್ ಉದ್ಘಾಟನೆ, 889ನೇ ಬಸವ ಜಯಂತಿ



ಮೈಸೂರು,ಆ.11(ಪಿಎಂ)- ಬಸವಾದಿ ಶರಣರ ಚಿಂತನೆಗಳನ್ನು ಪ್ರಸಾರ ಮಾಡುವ ಹಾಗೂ ಸಮಾಜ ಸೇವಾ ಕಾರ್ಯ ನಡೆಸುವ ಉದ್ದೇಶದಿಂದ ಅಸ್ತಿತ್ವಕ್ಕೆ ತಂದಿರುವ ಬಸವ ಭಾರತ ಫೌಂಡೇಷನ್‌ನ ಉದ್ಘಾಟನಾ ಸಮಾರಂಭ ಹಾಗೂ 889ನೇ ಬಸವ ಜಯಂತಿ ಕಾರ್ಯಕ್ರಮ ಆ.13ರಂದು ನಡೆಯಲಿದೆ ಎಂದು ಫೌಂಡೇಷನ್‌ನ ಗೌರವಾಧ್ಯಕ್ಷ ಶ್ರೀ ಬಸವಯೋಗಿ ಪ್ರಭು ಸ್ವಾಮೀಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಎಸ್ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಅಂದು ಸಂಜೆ 4ಕ್ಕೆ ಫೌಂಡೇಷನ್‌ನ ಉದ್ಘಾಟನಾ ಸಮಾರಂಭ ನಡೆಯಲಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹುಣಸೂರು ತಾಲೂಕು ಮಾದಹಳ್ಳಿ ಉಕ್ಕಿನಕಂತೆ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿ, ಚಾಮರಾಜನಗರದ ಮೂಡುಗೂರಿನ ಶ್ರೀ ಉದ್ಧಾನೇಶ್ವರ ವಿರಕ್ತ ಮಠದ ಇಮ್ಮಡಿ ಉದ್ಧಾನ ಸ್ವಾಮೀಜಿ ಯವರ ಸಾನ್ನಿಧ್ಯದಲ್ಲಿ ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜು ಫೌಂಡೇಷನ್ ಅನ್ನು ಉದ್ಘಾಟಿಸಲಿದ್ದಾರೆ ಎಂದರು.

ನಂಜನಗೂಡಿನ ಶರಣ ಸಂಸ್ಕೃತಿ ಪ್ರಸಾರ ಕೇಂದ್ರದ ಅಧ್ಯಕ್ಷ ಕಾ.ಸು.ನಂಜಪ್ಪ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಾಮಾಜಿಕ ಹೋರಾಟಗಾರರೂ ಆದ ಸಿನಿಮಾ ನಾಯಕ ನಟ ಚೇತನ್ ಅಹಿಂಸಾ, ತುಮಕೂರಿನ ಇಂದಿರಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷೆ ರೀಟಾ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ನಡೆಯುವ ಬಸವ ತತ್ವ ವಿಚಾರ ಗೋಷ್ಠಿಯಲ್ಲಿ 'ಶರಣರು ಖಂಡಿಸಿದ ಮೂಢಾಚರಣೆ' ಕುರಿತು ಬಸವ ತತ್ವ ಪ್ರಚಾರಕ ಚೌಹಳ್ಳಿ ಲಿಂಗರಾಜಣ್ಣ, 'ಬಸವಭಾರತ ಕಲ್ಯಾಣ ಭಾರತ' ಕುರಿತು ಶರಣ ಸಂಸ್ಕೃತಿ ಚಿಂತಕ ಹಲ್ಲರೆ ಶಿಮಬುದ್ಧಿ, 'ವಚನಗಳಲ್ಲಿ ಸ್ತ್ರೀ ಸಮಾನತೆ' ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್, 'ಲಿಂಗಮಧ್ಯೆ ಜಗತ್ ಸರ್ವಂ' ಕುರಿತು ಉಪ ನ್ಯಾಸಕ ದೇವರಾಜು ಪಿ.ಚಿಕ್ಕಹಳ್ಳಿ (ದೇಚಿ) ವಿಚಾರ ಮಂಡಿಸಲಿದ್ದಾರೆ ಎಂದರು.

ಜೊತೆಗೆ ಪ್ರಗತಿಪರ ರೈತರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಫೌಂಡೇಷನ್ ಅಧ್ಯಕ್ಷ ವಿ.ಶಿವರುದ್ರಪ್ಪ ಈಗಾಗಲೇ ತಮ್ಮ ಸಂಪಾದಕತ್ವದಲ್ಲಿ 'ಬಸವ ಭಾರತ' ಮಾಸ ಪತ್ರಿಕೆ ಹೊರತರುವ ಮೂಲಕ ಬಸವಾದಿ ಶರಣ ವಿಚಾರಧಾರೆಗಳನ್ನು ಪ್ರಸಾರ ಮಾಡುತ್ತಿದ್ದಾರೆ ಎಂದರು. ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ವಿ.ಶಿವರುದ್ರಪ್ಪ, 'ಬಸವ ಭಾರತ' ಮಾಸ ಪತ್ರಿಕೆ ಸಹ ಸಂಪಾದಕ ಹೆಚ್.ಎಸ್. ಶೇಖರ್, ಫೌಂಡೇಷನ್‌ನ ಟ್ರಸ್ಟಿ ನಂದೀಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಆ.15ರಂದು ದೇಶಭಕ್ತಿ ಗೀತೆ, ಚಿತ್ರಗೀತೆಗಳ ಗಾಯನ ಕಾರ್ಯಕ್ರಮ



ಮೈಸೂರು,ಆ.11(ಪಿಎಂ)- ಭೂಮಿಕಾ ಅಸೋಸಿಯೇಟ್ಸ್ ಹಾಗೂ ದಿ.ಮೈಕ್ ಚಂದ್ರು ಗೆಳೆಯರ ಬಳಗದ ಜಂಟಿ ಆಶ್ರಯದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆ.15ರಂದು ದೇಶಭಕ್ತಿ ಗೀತೆಗಳು ಹಾಗೂ ಕನ್ನಡ-ಹಿಂದಿ ಚಿತ್ರಗೀತೆಗಳ ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ನಿರ್ದೇಶಕ ಡ್ರಮರ್ ಡಾ.ಸಿ.ಆರ್.ರಾಘವೇಂದ್ರ ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5.30ಕ್ಕೆ ಮೈಸೂರಿನ ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಕಾರ್ಯಕ್ರಮ ನಡೆಯಲಿದ್ದು, 3 ಗಂಟೆ ಕಾಲ ಖ್ಯಾತ ಗಾಯಕರು ಗೀತೆಗಳನ್ನು ಸಾದರಪಡಿಸಲಿದ್ದಾರೆ. ಜೊತೆಗೆ ಮೈಸೂರು ಆನಂದ್ ಅವರಿಂದ ಹಾಸ್ಯ ಕಾರ್ಯಕ್ರಮ ಕೂಡ ಇರಲಿದೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಿದೆ ಎಂದರು. ಗಾಯಕರಾದ ಡಾ.ಎ.ಡಿ.ಶ್ರೀನಿವಾಸನ್, ವಿಶ್ವನಾಥ್, ರಾಮಚಂದ್ರ, ರಾಘವೇಂದ್ರರತ್ನಾಕರ, ಶ್ರೀಕರ, ಹಂಸಿನಿ ಕುಮಾರ್ ಹಾಗೂ ದಿವ್ಯಾ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು. ಭೂಮಿಕಾ ಅಸೋಸಿಯೇಟ್ಸ್ ಅಧ್ಯಕ್ಷ ಕೆ.ಎಸ್.ಸುರೇಶ್, ಹಾಸ್ಯ ಕಲಾವಿದ ಮೈಸೂರು ಆನಂದ್, ಮುಖಂಡರಾದ ಮುರಳಿ, ವಿಶ್ವನಾಥ್ ಗೋಷ್ಠಿಯಲ್ಲಿದ್ದರು.



ಮೈಸೂರು ಯುವ ಬಳಗದ ವತಿಯಿಂದ 23ನೇ ವಾರ್ಡಿನ ರಮಾವಿಲಾಸ ರಸ್ತೆಯಲ್ಲಿ ಬುಧವಾರ ಬೆಳಗ್ಗೆ ಮನೆಮನೆಗೆ ಮುಡಾ ಸದಸ್ಯ ನವೀನ್ ಕುಮಾರ್ ಅವರು ತೆರಳಿ ತ್ರಿವರ್ಣ ಧ್ವಜ ನೀಡುವ ಮೂಲಕ "ಹರ್ ಘರ್ ತಿರಂಗ" ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ರಾಜೇಂದ್ರ, ಸುದರ್ಶನ್, ಶ್ರೀನಿವಾಸ್, ವಿಘ್ನೇಶ್ವರ್ ಭಟ್, ಪ್ರಮೋದ್‌ಗೌಡ, ಮಂಜುನಾಥ್, ಅರವಿಂದ್ ಇತರರು ಉಪಸ್ಥಿತರಿದ್ದರು.

ಯಮುನಾ ನದಿಯಲ್ಲಿ ದೋಣಿ ಮುಳುಗಿ ನಾಲ್ವರು ಸಾವು, ಹಲವರು ನಾಪತ್ತೆ

ಬಂದಾ, ಆ.11- ಉತ್ತರ ಪ್ರದೇಶದ ಬಂದಾ ಜಿಲ್ಲೆಯ ಮಾರ್ಕಾ ಪ್ರದೇಶದಲ್ಲಿ ಯಮುನಾ ನದಿಯಲ್ಲಿ ದೋಣಿ ಮುಳುಗಿ ಕನಿಷ್ಠ ನಾಲ್ವರು ನೀರು ಪಾಲಾಗಿರುವ ದಾರುಣ ಘಟನೆ ಗುರುವಾರ ನಡೆದಿದೆ. ಅಲ್ಲದೆ ಘಟನೆಯಲ್ಲಿ ಹಲವರು ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದೋಣಿಯಲ್ಲಿ 30 ರಿಂದ 35 ಮಂದಿ ಪ್ರಯಾಣಿಸುತ್ತಿದ್ದರು. ಇದುವರೆಗೆ ನಾಲ್ಕು ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ದೋಣಿ ದುರಂತದಲ್ಲಿ ಮೃತರಿಗೆ ಸಂತಾಪ ಸೂಚಿಸಿದ್ದು, ಜಿಲ್ಲಾಡಳಿತ ಅಧಿಕಾರಿಗಳು, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ತಕ್ಷಣ ಸ್ಥಳಕ್ಕೆ ತೆರಳಿ ರಕ್ಷಣಾ ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಾದಯಾತ್ರೆ

ಸ್ವಾತಂತ್ರ್ಯ ಸಂಗ್ರಾಮ, ಸ್ವಾತಂತ್ರ್ಯೋತ್ತರ ಭಾರತಕ್ಕೆ ಕಾಂಗ್ರೆಸ್ ಕೊಡುಗೆ ಅಪಾರ

ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ

ಮೈಸೂರು, ಆ.11(ಪಿಎಂ)- ಸ್ವಾತಂತ್ರ್ಯ ಸಂಗ್ರಾಮ ಹಾಗೂ ಸ್ವಾತಂತ್ರ್ಯೋತ್ತರ ಭಾರತಕ್ಕೆ ಕಾಂಗ್ರೆಸ್ ಕೊಡುಗೆ ಅಪಾರವಾಗಿದೆ ಎಂದು ಜಿಪಂ ಮಾಜಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ತಿಳಿಸಿದರು.

ಕ್ಷೇತ್ರದ ಕೂರ್ಗಳ್ಳಿಯಲ್ಲಿ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ಪಾದಯಾತ್ರೆ ಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

200 ವರ್ಷಗಳ ಕಾಲ ಭಾರತವನ್ನು ಆಳಿದ ಬ್ರಿಟಿಷರನ್ನು ದೇಶದಿಂದ ಓಡಿಸುವಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರ ಮಹತ್ತರವಾದುದು. ಮಹಾತ್ಮ ಗಾಂಧಿ, ಸರ್ದಾರ್ ವಲ್ಲಭಭಾಯ್ ಪಟೇಲ್, ಸುಭಾಷ್ ಚಂದ್ರ ಬೋಸ್, ಜವಾಹರಲಾಲ್ ನೆಹರು ಮುಂತಾದ ನಾಯಕರ ನೇತೃತ್ವದಲ್ಲಿ ನಿರಂತರ ಚಳುವಳಿ ನಡೆಯಿತು. ಇದರ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಅಂತಹ ಮಹನೀಯರನ್ನು ನಾವು ಸ್ಮರಿಸಬೇಕು. ಅದು ನಮ್ಮ ಆದ್ಯಕರ್ತವ್ಯ ಎಂದು ಹೇಳಿದರು.

ಸ್ವಾತಂತ್ರ್ಯ ನಂತರದಲ್ಲಿ ದೇಶದ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ರಾಷ್ಟ್ರದ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿತು. ಪಂಚವಾರ್ಷಿಕ ಯೋಜನೆ, 20 ಅಂಶಗಳ ಕಾರ್ಯಕ್ರಮ ದೇಶದ ಉನ್ನತ ಬದಲಾವಣೆಗೆ ಕಾರಣವಾದವು. ಡಾ.ಬಾಬು ಜಗಜೀವನ ರಾಮ್ ಅವರ ಹಸಿರುಕ್ರಾಂತಿ ಮೂಲಕ ರಾಷ್ಟ್ರ ಆಹಾರ ಸ್ವಾವಲಂಬನೆ ಸಾಧಿಸಿತು. ಹೀಗೆ ನಾನಾ ಕಾರ್ಯಕ್ರಮಗಳು, ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ನಾಂದಿ ಹಾಡಿತು. ಆದರೆ ಕಳೆದ 8 ವರ್ಷಗಳಿಂದ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪ್ರಧಾನಿ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರ, ಸರ್ಕಾರಿ ಸ್ವಾಮ್ಯದ ಎಲ್ಲಾ ಸಂಸ್ಥೆಗಳನ್ನು ಖಾಸಗೀಕರಣ ಮಾಡುತ್ತಿದೆ. ಬಡಜನತೆಯನ್ನು ಸಾಲದ ಶೂಲಕ್ಕೆ ತಳ್ಳಿ, ಅಂಬಾನಿ, ಅದಾನಿಯಂತಹ ಉದ್ಯಮಿಗಳಿಗೆ ಈ ದೇಶದ ಸಂಪತ್ತನ್ನು ಮಾರುತ್ತಿದೆ ಎಂದು ಆರೋಪಿಸಿದರು.

ಬಿಜೆಪಿಯಿಂದ ವ್ಯಾಪಕ ಭ್ರಷ್ಟಾಚಾರ: ರಾಜ್ಯ ಬಿಜೆಪಿ ಸರ್ಕಾರ ಶೇ.40ರಷ್ಟು ಪರ್ಸೆಂಟ್ ಪಡೆಯುವ ಮೂಲಕ ವ್ಯಾಪಕ ಭ್ರಷ್ಟಾಚಾರ ನಡೆಸುತ್ತಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅವರು ಜನಪರ ಆಡಳಿತ ನೀಡಿದರು. ಸಿದ್ದರಾಮಯ್ಯನವರ ಆಡಳಿತಾವಧಿ ಹಾಗೂ ಇಂದಿನ ರಾಜ್ಯ ಬಿಜೆಪಿ ಸರ್ಕಾರದ ಆಡಳಿತವನ್ನು ರಾಜ್ಯದ ಜನತೆ ಅವಲೋಕಿಸಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ಕೋರಿದರು.

2023ರ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಪಕ್ಷವು ಯಾರನ್ನೇ ಅಭ್ಯರ್ಥಿಯಾಗಿ ಮಾಡಿದರೂ ಎಲ್ಲರೂ ಒಗ್ಗಟ್ಟಿನಿಂದ ಪಕ್ಷದ ಪರವಾಗಿ ಕೆಲಸ ಮಾಡೋಣ ಎಂದು ಹೇಳಿದರು. ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಮಾಜಿ ಸದಸ್ಯ ಅರುಣ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಮುಖಂಡರಾದ ಕೃಷ್ಣಕುಮಾರ್, ಜಯರಾಮೇಗೌಡ, ನಾಗರತ್ನ, ಎಫ್‌ಎಂ ಮಹೇಶ್, ಚಿಕ್ಕಣ್ಣ, ಆರಿಫ್ ಪಾಷ, ಬಿ.ರವಿ, ಮಂಜು, ಸುರೇಶ್, ವೈ.ಸಿ.ಸ್ವಾಮಿ, ಹಿನಕಲ್ ಮಂಜು, ವಿನೋದ್ ಶಿವೇಗೌಡ, ಬಾಲು, ಮುಟ್ಟಸ್ವಾಮಾಚಾರಿ, ಸ್ವಾಮಿ, ಕೃಷ್ಣ ಮತ್ತಿತರರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.



ಕೂರ್ಗಳ್ಳಿಯಲ್ಲಿ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗುರುವಾರ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ಹಾಲಿನ ಬೆಲೆ ಏರಿಕೆ ಮಾಡಲು ಒಕ್ಕೂಟಕ್ಕೆ ಅಧಿಕಾರವಿಲ್ಲ

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು



ತಿ.ನರಸೀಪುರ, ಆ.11– ಸರ್ಕಾರ ಗ್ರಾಹಕರಿಗೆ ಮಾರಾಟ ಮಾಡುವ ಹಾಲಿನ ಬೆಲೆ ಹೆಚ್ಚಿಸಿದ ಹೊರತು, ರೈತರು ಉತ್ಪಾದಿಸುವ ಹಾಲಿನ ಬೆಲೆ ಹೆಚ್ಚಿಸಲು ಒಕ್ಕೂಟಕ್ಕೆ ಅಧಿಕಾರವಿಲ್ಲ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ಮೇಣಸಿಕ್ಯಾತನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ 2021–22ನೇ ಸಾಲಿನ ಹಾಲು ಉತ್ಪಾದಕರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಹಾಲಿನ ಬೆಲೆ ಹೆಚ್ಚಳ ಮಾಡಿ 5 ವರ್ಷಗಳಾಗಿವೆ. ಪ್ರತಿ ಲೀಟರ್ ಹಾಲಿಗೆ 28 ರಿಂದ 29 ರೂ. ನೀಡಲಾಗುತ್ತಿದೆ. ಬೆಲೆ ಹೆಚ್ಚಳ ಮಾಡಲು ನಮ್ಮ ಒಕ್ಕೂಟಕ್ಕೆ ಅಧಿಕಾರ ವಿಲ್ಲ. ಪ್ಯಾಕೆಟ್‌ನಲ್ಲಿ ಮಾರಾಟ ಮಾಡುವ ನಂದಿನಿ ಹಾಲಿನ ಬೆಲೆ ಹೆಚ್ಚಳ ಮಾಡುವ ಅಧಿಕಾರ ಇರುವುದು ಸರ್ಕಾರಕ್ಕೆ ಮಾತ್ರ. ಸರ್ಕಾರ ಹೆಚ್ಚು ಮಾಡಿದರೆ ಉತ್ಪಾದಕರು ನೀಡುವ ಹಾಲಿಗೆ ಒಕ್ಕೂಟ ಬೆಲೆ ಏರಿಕೆ ಮಾಡಲು ಸಾಧ್ಯ. ಆದರೆ ಸರ್ಕಾರ ಹಾಲಿನ ಬೆಲೆ ಹೆಚ್ಚಳ ಮಾಡುತ್ತಿಲ್ಲ. ರೈತರಿಗೆ ಅನಾನುಕೂಲವಾಗುತ್ತಿರುವುದನ್ನು ಗಮನಿಸಿ ನಮ್ಮ ಎಲ್ಲಾ 14 ಒಕ್ಕೂಟಗಳು ಹಾಲಿನ ಬೆಲೆ ಏರಿಕೆ ಮಾಡುವಂತೆ ಮಾಡಿದ ಮನವಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಬೆಲೆ ಜಾಸ್ತಿ ಮಾಡಿದರೆ ಗ್ರಾಹಕರಿಗೆ ಹೊರೆಯಾಗುತ್ತದೆ ಎಂಬ ನೆಪ ಹೇಳುತ್ತಿರುವ ಸರ್ಕಾರ ದಿನನಿತ್ಯದ ವಸ್ತುಗಳ ಬೆಲೆ ಏರಿಸಿಲ್ಲವೇ. ಇದರಿಂದ ಗ್ರಾಹಕರಿಗೆ ಹೊರೆಯಾಗುವುದಿಲ್ಲವೇ ಎಂದು ಪ್ರಶ್ನಿಸಿದರು.

ಲಾಭದಲ್ಲಿ ಸಹಕಾರ ಸಂಘ: ಸಂಘದ ವಾರ್ಷಿಕ ವರದಿ ಮಂಡಿಸಿದ ಸಂಘದ ಸಿಇಒ ಎಂ.ಎಸ್.ರವಿ ಸರ್ವ ಸದಸ್ಯರ ಸಹಕಾರದಿಂದ ಸಂಘವು ಲಾಭದತ್ತ ಮುನ್ನಡೆಯುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 2,92,635 ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಸಭೆಯಲ್ಲಿ ಸದಸ್ಯರಿಗೆ ನಿವ್ವಳ ಲಾಭದ ವಿಲೇವಾರಿ ಕುರಿತಂತೆ ಚರ್ಚೆ ನಡೆದು ಗೌರಿ–ಗಣೇಶ ಹಬ್ಬಕ್ಕೆ ಬೋನಸ್ ವಿತರಿಸಲು ನಿರ್ಧರಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಸದಸ್ಯರು ಸಂಘದ ಉಪ ನಿಯಮ ತಿದ್ದುಪಡಿಗೆ ಒಪ್ಪಿಗೆ ಸೂಚಿಸಿದರು.

ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರನ್ನು ಹಾಗೂ ಮೈಮುಲ್ ನಿರ್ದೇಶಕ ಚೆಲುವರಾಜು, ಸಂಘದ ವಿಸ್ತರಣಾಧಿಕಾರಿ ಪ್ರಮೋದ್, ದಿವ್ಯಶ್ರೀ, ಡಾ.ದಿವಾಕರ್ ಮತ್ತಿತರರನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ನಿರ್ದೇಶಕರಾದ ಮಹದೇವ, ನಾಗರಾಜು, ಸಿದ್ದರಾಜು, ಎಂ.ಬಸವರಾಜಪ್ಪ ಎಂ.ಕೆ.ಮಂಜು, ಜಗದೀಶ್, ಶಿವಣ್ಣ, ಗೌರಮ್ಮ, ಚಿಕ್ಕತಾಯಮ್ಮ, ಗೌರಮ್ಮ, ಎಂ.ಕುಮಾರ್, ಉಪವ್ಯವಸ್ಥಾಪಕ ಡಾ. ದಿವಾಕರ್, ವಿಸ್ತರಣಾಧಿಕಾರಿ ಪ್ರಮೋದ್, ದಿವ್ಯಶ್ರೀ ಸೇರಿದಂತೆ ಮತ್ತಿತರರಿದ್ದರು.

ಮೇಲಂತಸ್ತು ಕಟ್ಟಡಕ್ಕೆ ಅನುದಾನದ ಭರವಸೆ

ಸಂಘದ ಕಟ್ಟಡದ ಮೇಲೆ ಮತ್ತೊಂದು ಕಟ್ಟಡ ನಿರ್ಮಾಣಕ್ಕೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದು, ಕಟ್ಟಡ ನಿರ್ಮಾಣಕ್ಕೆ ಬೇಕಾಗುವ ಅನುದಾನವನ್ನು ನನ್ನ ಇನ್ನಿತರೆ ಮೈಮುಲ್ ನಿರ್ದೇಶಕರೊಂದಿಗೆ ಚರ್ಚಿಸಿ ಕೊಡಿಸುತ್ತೇನೆ. ಅಲ್ಲದೆ ಗ್ರಾಮಸ್ಥರು ಹೆಚ್ಚಾಗಿ ಹೈನುಗಾರಿಕೆ ಅವಲಂಬಿಸುವುದರಿಂದ ಉತ್ಪಾದಕರಿಂದ ಷೇರು ಸಂಗ್ರಹಿಸಿ ಸರ್ಕಾರದಿಂದ ಹೆಚ್ಚಿನ ಮೊತ್ತ ಕೊಡಿಸಿ ಬ್ಯಾಂಕ್ ಸ್ಥಾಪಿಸುವ ಕಾರ್ಯಕ್ಕೆ ಮುಂದಾಗುವೆ.

-ಆರ್.ಚೆಲುವರಾಜು, ಮೈಮುಲ್ ನಿರ್ದೇಶಕ.

ಬದನವಾಳಲ್ಲಿ ಸ್ವಾತಂತ್ರ್ಯ ನಡಿಗೆ ಪಾದಯಾತ್ರೆಗೆ ಚಾಲನೆ



ನಂಜನಗೂಡು, ಆ.11– ತಾಲೂಕಿನ ಬದನವಾಳು ಗ್ರಾಮದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಸ್ವಾತಂತ್ರ್ಯ ನಡಿಗೆ ಪಾದಯಾತ್ರೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮತ್ತು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಚಾಲನೆ ನೀಡಿದರು.

ಶಾಸಕ ಡಾ.ಯತೀಂದ್ರ ಮಾತನಾಡಿ, ಎಐಸಿಸಿ ಆದೇಶದ ಮೇರೆಗೆ 75 ಕಿಲೋ ಮೀಟರ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ನಾಯಕರು ಹೋರಾಟ ಮಾಡಿದ್ದಾರೆ. ಮುಂದಿನ ಪೀಳಿಗೆಗೆ ನಾವು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ನಾಯಕರ ಹೋರಾಟದ ಬಗ್ಗೆ ಸಾರ್ವಜನಿಕರಿಗೆ ತಿಳಿಸಬೇಕು ಎಂದರು.

ಮಾಜಿ ಸಂಸದ ಆರ್.ಧ್ರುವನಾರಾಯಣ್ ಮಾತನಾಡಿ, ಬದನವಾಳು ಮತ್ತು ತಗಡೂರು ಮಹಾತ್ಮ ಗಾಂಧೀಜಿ ಭೇಟಿ ನೀಡಿದ ಪುಣ್ಯಭೂಮಿ. ಸ್ವದೇಶಿ ಉತ್ಪನ್ನಗಳಿಗೆ ಒತ್ತು ನೀಡುವಂತೆ ಗಾಂಧೀಜಿ ತಿಳಿಸಿದ್ದರು. ಜನರಲ್ಲಿ ಜಾಗೃತಿ ಮೂಡಿಸಲು ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.

ದೇಶದಲ್ಲಿ ವಿಶ್ವವಿದ್ಯಾನಿಲಯ, ಆಸ್ಪತ್ರೆ, ಅಣೆಕಟ್ಟು, ಕಟ್ಟ ಕಡೆ ಗ್ರಾಮಗಳಿಗೂ ವಿದ್ಯುತ್ ಸಂಪರ್ಕ ನೀಡಿದ್ದು ಕಾಂಗ್ರೆಸ್. ಆದರೆ ಬಿಜೆಪಿಯವರು ಏನು ಮಾಡಿದ್ದಾರೆ ಎಂದು ಪ್ರಶ್ನಿಸಿದ ಅವರು, ದೇಶದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು, ಬಡತನ, ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಇದು ಈ ದೇಶದ ದುರಂತ ಎಂದು ಕಿಡಿಕಾರಿದರು.

ಮಳೆ ನಡುವೆ ಬದನವಾಳು ಮೂಲಕ ಬಸವಟ್ಟಿಗೆ, ಹೆಡತಲೆ, ಹೆಮ್ಮರಗಾಲ, ಕುರಹಟ್ಟಿ, ಕಳಲೆ ಗ್ರಾಮದವರೆಗೆ ಪಾದಯಾತ್ರೆ ನಡೆಸಲಾಯಿತು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷರಾದ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಗ್ರಾಮಾಂತರ ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಕೆ.ಮಾರುತಿ, ನಂದಕುಮಾರ್ ಸೇರಿದಂತೆ ಕಾರ್ಯಕರ್ತರಿದ್ದರು.

ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ಚಾಲನೆ

ಸರಗೂರು, ಆ.11– ಪಟ್ಟಣದ ಬಾಲಕಿಯರ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಉಚಿತವಾಗಿ ಜಂತುಹುಳು ಮಾತ್ರೆಗಳನ್ನು ವಿತರಿಸುವ ಮೂಲಕ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಚಾಲನೆ ನೀಡಿದರು.



ನಂತರ ಮಾತನಾಡಿದ ಅವರು, ಮಕ್ಕಳ ಆರೋಗ್ಯದ ಬಗ್ಗೆ ತಾಯಂದಿರು ಹೆಚ್ಚಿನ ಗಮನ ಹರಿಸಬೇಕು. ಅಲ್ಲದೇ ಸಮಯಕ್ಕೆ ಸರಿಯಾಗಿ ಬಿಸಿಯೂಟ, ಬಿಸಿ ನೀರು ನೀಡುವ ಮೂಲಕ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯ ಪ್ರವೃತರಾಗಬೇಕು. ಶಾಲೆ, ಅಂಗನವಾಡಿ ಎಲ್ಲಾ ಮಕ್ಕಳಿಗೂ ಅಲ್ಬೆಂಡಜೋಲ್ ಮಾತ್ರೆ ನೀಡುತ್ತಿದ್ದೇವೆ. ಈ ಮಾತ್ರೆಯನ್ನು ಮಕ್ಕಳು ಚೆನ್ನಾಗಿ ಅಗಿದು ಜಗಿದು ನುಂಗಬೇಕು. ಮಾತ್ರೆ ನುಂಗುವುದರಿಂದ ಜಂತುಹುಳುಗಳನ್ನು ನಿವಾರಣೆ ಮಾಡಬಹುದು ಎಂದು ಸಲಹೆ ನೀಡಿದರು.

ತಹಶೀಲ್ದಾರ್ ಚಲುವರಾಜು, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಮಾತನಾಡಿದರು. ಉಪಾಧ್ಯಕ್ಷ ವಿನಯ್ ಪ್ರಸಾದ್, ಸದಸ್ಯರಾದ ವೀರೇಶ್, ನವೀನ್, ಮುಖ್ಯಾಧಿಕಾರಿ ಬಿ.ಜೆ.ಸತೀಶ್, ಮುಖ್ಯಶಿಕ್ಷಕ ಮಹದೇವಪ್ರಸಾದ್, ಶ್ರೀನಾಥ್, ವೈದ್ಯಾಧಿಕಾರಿ ಡಾ.ಪಾರ್ಥಸಾರಥಿ, ಸಿಬ್ಬಂದಿಗಳಾದ ರವಿರಾಜ್, ಸರಳ, ಜಗದೀಶ್, ಶಾಂತಿ, ಪುಷ್ಪ, ಪ್ರತಾಪ್, ಶಾಲಾ ಸಹ ಶಿಕ್ಷಕರು, ಮಕ್ಕಳು ಹಾಜರಿದ್ದರು.

ಸ್ವಾತಂತ್ರ್ಯೋತ್ಸವ ಹಿನ್ನೆಲೆ: ವಿವಿಧ ಕಾರ್ಯಕ್ರಮ

ಪಿರಿಯಾಪಟ್ಟಣ, ಆ.11– 75ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ತಾಲೂಕು ಬಿಜೆಪಿ ವತಿಯಿಂದ 4 ದಿನ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ ತಿಳಿಸಿದರು.



ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.12ರಂದು ಪಟ್ಟಣದ ಮಸಣಿಕಮ್ಮ ದೇವಾಲಯದಿಂದ ಕನ್ನಂಬಾಡಿಯಮ್ಮ ದೇವಾಲಯದವರೆಗೆ ತಿರಂಗಯಾತ್ರೆ ಬೈಕ್ ರ‍್ಯಾಲಿ ಆಯೋಜಿಸಿದ್ದು, ರ‍್ಯಾಲಿಗೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಲಿದ್ದಾರೆ. ಆ.13ರಂದು ಪಟ್ಟಣದ 5 ಸಾವಿರ ಮನೆಗಳಲ್ಲಿ 5 ಸಾವಿರ ಬಾವುಟ ಹಾರಿಸಲು ಕ್ರಮ ವಹಿಸಲಾಗುವುದು. ಆ.14ರಂದು ಸಂಜೆ 6 ಗಂಟೆಗೆ ಅಖಂಡ ಭಾರತ ವಿಭಜಿಸಿ ಇಂದಿನ ಅರಾಜಕತೆಗೆ ಕಾರಣವಾದ ಕಾಂಗ್ರೆಸ್ ನಿಲುವನ್ನು ಖಂಡಿಸಿ ಪಂಜಿನ ಮೆರವಣಿಗೆ ನಡೆಸಲಾಗುವುದು. ಆ.15ರಂದು ಪಕ್ಷದ ಕಚೇರಿಯಲ್ಲಿ ವಿಜೃಂಭಣೆಯ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಗುವುದು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 25 ಮಂದಿಗೆ ಸನ್ಮಾನ ಮಾಡಲಾಗುವುದು. ಈ ನಾಲ್ಕು ದಿನ ನಡೆಯುವ ಕಾರ್ಯಕ್ರಮಗಳಲ್ಲಿ ತಾಲೂಕಿನ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸೋಮಶೇಖರ್, ಆರ್.ಟಿ.ಸತೀಶ್, ಚಂದ್ರು, ಪ್ರವೀಣ್, ಪಿ.ಜೆ.ರವಿ, ನಳಿನಿಗೌಡ, ರಮ್ಯಾ, ಲೀಲಾವತಿ, ಮೀನಾಕ್ಷಿ ವೀರಭದ್ರು ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಹುಣಸೂರು, ಆ.11– ದಿನಬಳಕೆ ವಸ್ತುಗಳು ಮತ್ತು ರಸಗೊಬ್ಬರದ ಬೆಲೆ ಏರಿಕೆ ಜೊತೆಗೆ ಅತಿಯಾದ ಮಳೆಯಿಂದ ರೈತರು ಮತ್ತು ಗ್ರಾಹಕರು ಕಂಗಾಲಾಗಿದ್ದಾರೆ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ತಾಲೂಕಿನ ಧರ್ಮಾಪುರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಧರ್ಮಾಪುರದಿಂದ–ನಾಗಪ್ಪನಯ್ಯನ ಕೆರೆವರೆಗೆ 3 ಕೋಟಿ ರೂ. ವೆಚ್ಚದ ಡಾಂಬರ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಅಗತ್ಯ ವಸ್ತುಗಳಾದ ದಿನಸಿ ಪದಾರ್ಥಗಳ ಬೆಲೆ ಏರಿಕೆಯಾಗಿದೆ. ಕೊರೊನಾ ಲಾಕ್‌ಡೌನ್‌ನಿಂದ ಆರ್ಥಿಕ ನಷ್ಟಕ್ಕೆ ಒಳಗಾಗಿರುವ ಜನರಿಗೆ ಹಾಗೂ ರೈತರಿಗೆ ಇದೀಗ ಬೆಲೆ ಏರಿಕೆ ಹೊರೆಯಾಗಿದೆ. ಕಳೆದ 2 ತಿಂಗಳಿಂದ ಸುರಿಯುತ್ತಿರುವ ಮಳೆಗೆ ರೈತ ಕಂಗಾಲಾದರೆ, ಎಷ್ಟೋ ಜನ ಮನೆ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಸರ್ಕಾರ ಕೂಡಲೇ ಶೀಘ್ರ ಪರಿಹಾರ ನೀಡಬೇಕು ಎಂದರು.

ತಾಲೂಕಿನ ಎಲ್ಲಾ ಪ್ರತಿ ಗ್ರಾಮಗಳಿಗೂ ನನ್ನದೇ ಆದ ಕೊಡುಗೆ ನೀಡಿದ್ದೇನೆ. ಸಿದ್ದರಾಮಯ್ಯನವರು ತಮ್ಮ ಅವಧಿಯಲ್ಲಿ ತಾಲೂಕಿಗೆ ಸಾಕಷ್ಟು ಅನುದಾನ ನೀಡಿದರು. ಹಲವು ಗ್ರಾಮಗಳಲ್ಲಿ ಸಿ.ಸಿ.ರಸ್ತೆಗಳು ಮುಕ್ತಾಯವಾಗಿವೆ. ಕೆಲವು ಗ್ರಾಮಗಳಲ್ಲಿ ಒಂದು, ಎರಡು ರಸ್ತೆ ಮಾತ್ರ ಬಾಕಿ ಇದೆ. ಸರ್ಕಾರದ ಅನುದಾನ ತಾರತಮ್ಯದಿಂದಾಗಿ ಅಭಿವೃದ್ಧಿ ಕುಂಟಿತವಾಗಿದೆ ಎಂದರು.

ಮಾಜಿ ತಾ.ಪಂ.ಸದಸ್ಯರಾದ ಗದ್ದಿಗೆ ದೇವರಾಜ್, ಪುಟ್ಟಮಾದಯ್ಯ, ಗ್ರಾ.ಪಂ. ಅಧ್ಯಕ್ಷೆ ತೋಳಸಮ್ಮ, ಸದಸ್ಯ ಧರ್ಮಾಪುರ ಮಹದೇವ್, ತಾ.ಕಾಂಗ್ರೆಸ್ ಎಸ್.ಟಿ. ಘಟಕ ಅಧ್ಯಕ್ಷ ಗವಿನಾಯಕ್, ಮಾಜಿ ಸದಸ್ಯರಾದ, ಶೇಖರ್, ಉದ್ಯಮಿ ರಾಜು ಶಿವರಾಜೇಗೌಡ, ಮುಖಂಡರಾದ ಆಸ್ವಾಳು ಕೆಂಪೇಗೌಡ, ನಾರಾಯಣನಾಯಕ್, ಪಿ.ಡಿ.ಒ ರೂಪಾಶ್ರೀ, ಹಾಜರಿದ್ದರು.

ಜನಪ್ರತಿನಿಧಿಗಳು, ಅಧಿಕಾರಿಗಳ ಗೊಂದಲ, ಮಾತಿನ ಚಕಮಕಿ

ಕೋಟೆ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ರದ್ದು



ಹೆಚ್.ಡಿ.ಕೋಟೆ, ಆ.11– ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಗೊಂದಲದಿಂದ ಮಾತಿನ ಚಕಮಕಿ ನಡೆದು ಗುರುವಾರ ನಡೆಯಬೇಕಿದ್ದ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ರದ್ದಾಯಿತು.

ಪಟ್ಟಣದ ಪುರಸಭೆಯಲ್ಲಿ ಗುರುವಾರ ಮಧ್ಯಾಹ್ನ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ನಿಗದಿಯಾಗಿತ್ತು. ಚುನಾವಣೆಗೆ ಕಾಂಗ್ರೆಸ್ ಸದಸ್ಯರಾದ ಆಸಿಫ್ ಮತ್ತು ಐಡಿಯಾ ವೆಂಕಟೇಶ್ ನಾಮಪತ್ರ ಸಲ್ಲಿಸಿದರು. ಶಾಸಕ ಅನಿಲ್ ಚಿಕ್ಕಮಾದು ಮತದಾನ ಮಾಡಲು ಪುರಸಭೆಗೆ ಬಂದಾಗ ಜೆಡಿಎಸ್ ಸದಸ್ಯರು ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆಯಲ್ಲಿ ಶಾಸಕರು, ಸಂಸದರು ಮತದಾನ ಮಾಡಲು ಅವಕಾಶ ಇದೆಯೇ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸಂವಿಧಾನದ ಪ್ರಕಾರ ಶಾಸಕರು ಮತ್ತು ಸಂಸದರಿಗೆ ಮತದಾನ ಮಾಡಲು ಅವಕಾಶ ಇದೆ ಎಂದರು. ಈ ವೇಳೆ ಜೆಡಿಎಸ್ ಸದಸ್ಯರಾದ ಮಿಲ್ ನಾಗರಾಜು, ದರ್ಶಿನಿ, ಹರೀಶ್‌ಗೌಡ, ನಂಜಪ್ಪ, ಶಿವಮ್ಮ, ಸರೋಜಮ್ಮ ಹಾಗೂ ಬಿಜೆಪಿ ನಾಮ ನಿರ್ದೇಶಕ, ಇನ್ನುಳಿದ ಸದಸ್ಯರು ಮತದಾನ ಮಾಡಲು ಸಂಸದರು ಏಕೆ ಬಂದಿಲ್ಲ ಎಂದು ಪ್ರಶ್ನಿಸಿದರು. ಸಂಸದರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅವರಿಗೆ ಚುನಾವಣೆ ವಿಚಾರ ತಿಳಿಸಿಲ್ಲ ಎಂದು ಮುಖ್ಯಾಧಿಕಾರಿ ಸುರೇಶ್ ತಿಳಿಸಿದರು.

ಈ ವೇಳೆ ಕೆಂಡಾಮಂಡಲರಾದ ಸದಸ್ಯರು ನೀವು ಉದ್ದೇಶಪೂರ್ವಕವಾಗಿ ಸಂಸದರಿಗೆ ಆಹ್ವಾನ ನೀಡಿಲ್ಲ. ಅವರಿಗೆ ಮತದಾನಕ್ಕೆ ಆಹ್ವಾನಿಸಿದ ನಂತರ ಚುನಾವಣೆ ದಿನಾಂಕ ನಿಗದಿ ಮಾಡಿ ಅಲ್ಲಿಯವರೆಗೆ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ನಡೆಸುವುದು ಬೇಡ ಎಂದು ಎಲ್ಲರೂ ಸಭೆ ಬಹಿಷ್ಕರಿಸಲು ಮುಂದಾದಾಗ ಶಾಸಕರು ಹಾಗೂ ಜೆಡಿಎಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಎಲ್ಲರೂ ಸಭೆಯಿಂದ ಹೊರ ನಡೆದರು.


ಈ ಚುನಾವಣೆಯಲ್ಲಿ ನನಗೆ ಮತ್ತು ಸಂಸದರಿಗೆ ಮತದಾನದ ಹಕ್ಕಿದೆ. ಪುರಸಭಾಧಿಕಾರಿಗಳು ಸಂಸದರಿಗೆ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡಲಾಗಿದೆ. ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಇಬ್ಬರು ನಾಮಪತ್ರ ಸಲ್ಲಿಸಿದ್ದಾರೆ. ಕಳೆದ ಬಾರಿ ಪರಿಶಿಷ್ಟ ಜಾತಿಗೆ ಅವಕಾಶ ಮಾಡಿಕೊಟ್ಟಿದ್ದರಿಂದ ಈ ಬಾರಿ ಹಿಂದುಳಿದ ವರ್ಗದವರಿಗೆ ಅವಕಾಶ ಮಾಡಿಕೊಡುವುದಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಸಮ್ಮುಖದಲ್ಲಿ ತಿಳಿಸಲಾಗಿತ್ತು. ಅದರಂತೆ ಸದಸ್ಯ ಆಸೀಫ್ ನಾಮಪತ್ರ ಸಲ್ಲಿಸಿದ್ದರು. ಆದರೆ ಕೆಲವರು ತಂತ್ರಗಾರಿಕೆ ನಡೆಸಿ ಐಡಿಯಾ ವೆಂಕಟೇಶ್ ಅವರಿಂದ ನಾಮಪತ್ರ ಹಾಕಿಸಿದ್ದಾರೆ. ಹೀಗಾಗಿ ಅವರಿಬ್ಬರೊಂದಿಗೆ ಮಾತುಕತೆ ನಡೆಸಲಾಗುವುದು.

-ಅನಿಲ್ ಚಿಕ್ಕಮಾದು, ಶಾಸಕ.

ಪುರಸಭಾ ಸ್ಥಾಯಿ ಸಮಿತಿ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಹಾಗೂ ಇತರೆ ಪಕ್ಷದ ಸದಸ್ಯರ ಬೆಂಬಲದೊಂದಿಗೆ ಐಡಿಯಾ ವೆಂಕಟೇಶ್ ಗೆಲುವು ಸಾಧಿಸಿದರೆ ಮುಖಭಂಗವಾಗುತ್ತದೆ ಎಂಬ ಉದ್ದೇಶದಿಂದ ಸಂಸದರು ಹಾಗೂ ಶಾಸಕರಿಗೆ ಮತದಾನದ ಹಕ್ಕು ಇಲ್ಲದಿದ್ದರೂ ಇದೆ ಎಂದು ವಾದ ಮಾಡಿ ಸಭೆ ಮುಂದೂಡಿದ್ದಾರೆ.

-ದರ್ಶಿನಿ, ಪುರಸಭಾ ಜೆಡಿಎಸ್ ಸದಸ್ಯೆ.

ಸೋಸಲೆ ಗ್ರಾಪಂಗೆ ಎಂ.ಮಹೇಶ್ ಅಧ್ಯಕ್ಷ



ತಿ.ನರಸೀಪುರ, ಆ.11– ತಾಲೂಕಿನ ಸೋಸಲೆ ಗ್ರಾಪಂ ನೂತನ ಅಧ್ಯಕ್ಷರಾಗಿ ಎಂ.ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಈ ಹಿಂದಿನ ಅಧ್ಯಕ್ಷ ಪುಟ್ಟಸ್ವಾಮಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗುರುವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಎಂ.ಮಹೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮಮತಾ ಘೋಷಿಸಿದರು. ಗ್ರಾಪಂನ ಒಟ್ಟು 20 ಸದಸ್ಯರ ಪೈಕಿ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ ಅವರನ್ನು ಹೊರತುಪಡಿಸಿ ಸದಸ್ಯರಾದ ಎಸ್.ಹೇಮಾ, ಎನ್.ನಾಗೇಂದ್ರ, ಎಂ.ಭಾಗ್ಯ, ಸುವರ್ಣ, ಎಸ್.ಎನ್.ಮಧುಸೂದನ್, ಎನ್.ಶೈಲಜಾ, ಎಸ್.ಎನ್.ರೇಖಾಪ್ರಭ, ಎಸ್.ವಿ.ಮಹೇಶ್ ಕುಮಾರ್, ನಾಗರತ್ನ, ಆರ್.ಮಲ್ಲೇಶ್, ರಾಜಮ್ಮ, ಪಿ.ಜ್ಞಾನೇಂದ್ರ, ಸುಂದರ, ಆಶಾ, ಎಂ.ಚಾಂದಿನಿ, ಸಿ.ನಾರಾಯಣ, ಎಸ್.ವಿ. ಮಂಜುನಾಥ್ ಹಾಗೂ ಸಿ.ಪ್ರೀತಿ ಚುನಾವಣೆಯಲ್ಲಿ ಹಾಜರಿದ್ದು ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಮಾಜಿ ಅಧ್ಯಕ್ಷ ಎಸ್.ಪುಟ್ಟಸ್ವಾಮಿ ಇತರ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ಆರೋಪದೊಂದಿಗೆ ಅವರ ಪದಚ್ಯುತಿಗೆ ಅರ್ಜಿ ಸಲ್ಲಿಸಿದ್ದರು. ಹಾಗಾಗಿ ಅವಿಶ್ವಾಸ ಮಂಡನೆಗೂ ಮುನ್ನವೇ ಪುಟ್ಟಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ನೂತನ ಅಧ್ಯಕ್ಷ ಮಹೇಶ್ ಮಾತನಾಡಿ, ಎಲ್ಲಾ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ಅನ್ನು ಮಾದರಿಯಾಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಪಂಚಾಯ್ತಿಗೆ ಸರ್ಕಾರದಿಂದ ದೊರಕಬಹುದಾದ ಅನುದಾನ ತರಲು ಸಂಬಂಧಿಸಿದ ಶಾಸಕರೊಂದಿಗೆ ಮಾತುಕತೆ ನಡೆಸುವ ಜೊತೆಗೆ ಗ್ರಾಪಂನ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಎಸ್.ಎನ್. ಸಿದ್ದಾರ್ಥ, ಹೊನ್ನನಾಯಕ, ಗದ್ದೇಮೋಳೆ ಸಿದ್ದರಾಜು, ಶಿವಕುಮಾರ್ ಬಡ್ಡು ಡೈರಿ ನಿಂಗರಾಜು, ಸಿದ್ದುಂಡಿ ಸೋಮಣ್ಣ, ಮಹದೇವಸ್ವಾಮಿ, ಪುಟ್ಟಸ್ವಾಮಿ, ಕೆಬ್ಬೆ ನಾಗಣ್ಣ, ಹರೀಶ್, ಬಸವರಾಜು, ನಾಗರಾಜು, ಮಹದೇವ, ರಘು, ಕುಮಾರ್, ಲಿಂಗರಾಜು, ಬಿ.ಎಸ್. ಮಹೇಶ್, ಪಿಡಿಓ ಪುಟ್ಟಸ್ವಾಮಿ ಇದ್ದರು.

ಪೂಜಾ ಕೈಂಕರ್ಯ ನಿರಂತರವಾಗಿರಲಿ: ಸಿಎಸ್‌ಪಿ



ಮೂಗೂರು, ಆ. 11– ವ್ಯವಸ್ಥಿತವಾಗಿ ನಿರಂತರ ಪೂಜಾ ಸಂಕಲ್ಪದ ಕೈಂಕರ್ಯಗಳು ಅಮ್ಮನವರಿಗೆ ನಡೆಯಬೇಕು. ತಾಯಿಯ ಆಶೀರ್ವಾದ ನಾಡಿನ ಜನತೆಗೆ ಲಭಿಸಲಿ ಎಂಬ ಉದ್ದೇಶದಿಂದ ಶಾಶ್ವತವಾದ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಲಾಗಿದೆ ಎಂದು ಮೇಲುಕೋಟೆ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಆ.21ರಂದು ಮುಖ್ಯಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿ ಗ್ರಾಮದ ಮುಖಂಡರ ಸಭೆಯಲ್ಲಿ ಮಾತನಾಡಿದರು.

ಆ.21ರ ವೇಳೆಗೆ ಸುಮಾರು 8 ರಿಂದ 10 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು, ಅಮ್ಮನವರ ಸೇವೆ ಮಾಡಲು ಮದ್ದೂರಿನ ಚಿಕ್ಕಬ್ಯಾಡರಹಳ್ಳಿ ಗ್ರಾಮಸ್ಥರು ದಾಸೋಹ ಪ್ರಸಾದ ವಿತರಣೆ ಜವಾಬ್ದಾರಿ ನಿರ್ವಹಿಸಲಿದ್ದಾರೆ. ಉಳಿದ ಕಾರ್ಯವನ್ನು ಸಮಿತಿ ಹಾಗೂ ಸರ್ಕಾರದ ಮಟ್ಟದಲ್ಲಿ ನಡೆಸಲು ಸೂಚಿಸಲಾಗುವುದು ಎಂದರು. ಗ್ರಾಮಸ್ಥರ ಸಲಹೆ ಸೂಚನೆ ಮೇರೆಗೆ ಉಳಿಕೆ ಕೆಲಸವನ್ನು ತುರ್ತಾಗಿ ಮಾಡುವಂತೆ ಇಲಾಖೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ತಿಳಿಸಿದರು. ಅಭಿವೃದ್ಧಿ ಮೂಗೂರು ಗ್ರಾಮಕ್ಕೆ ಸೀಮಿತವಾಗದೇ ಹೊಸಹಳ್ಳಿ ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಅಭಿವೃದ್ಧಿಗೆ ಮುಂದಾಗಬೇಕು. ಹೊಸಹಳ್ಳಿ ಮಾರ್ಗದಲ್ಲಿ ಸಂಚರಿಸುವ ರಸ್ತೆ ತೀರಾ ಹದಗೆಟ್ಟಿದ್ದು, ದಾರಿಯುದ್ದಕ್ಕೂ ಮುಳ್ಳಿನ ಪೊದೆ ಆವರಿಸಿದೆ. ಹೊಸಹಳ್ಳಿ, ಮೂಗೂರು, ಕೆರೆ ಅಭಿವೃದ್ಧಿಯನ್ನು ಸಾಕಷ್ಟು ಮಾಡಿದರೂ ಯಥಾಸ್ಥಿತಿಗೆ ತಲುಪಿದೆ. ಕ್ಷೇತ್ರದ ಶಾಸಕ ಎಂ ಅಶ್ವಿನ್‌ಕುಮಾರ್ ಅವರು 21ಕ್ಕೂ ಮುನ್ನ ಇತ್ತ ಕಡೆ ಗಮನ ಹರಿಸಬೇಕು ಎಂದು ಸ್ಥಳೀಯ ನಿವಾಸಿ ಎಂ.ಎಂ. ಜಗದೀಶ್ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಂ ಅಶ್ವಿನ್‌ಕುಮಾರ್, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷ ಮೋಹನ್‌ಕುಮಾರ್, ಡಿವೈಎಸ್ಪಿ ಗೋವಿಂದರಾಜು, ಇಓ ಕೃಷ್ಣ, ಎಂ ಡಿ ಬಸವರಾಜು, ಮಾಜಿ ಅಧ್ಯಕ್ಷ ಜಗದೀಶ ಮೂರ್ತಿ, ತಾಪಂ ಮಾಜಿ ಸದಸ್ಯ ಎಂ ಚಂದ್ರಶೇಖರ್, ಎಂ.ಬಿ.ಸಾಗರ್, ಗೌ.ನಾಗ ರಾಜು, ಎಂ ಸಿದ್ಧರಾಜು, ಶಿವಮೂರ್ತಿ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಎಂಬಿ ಮಹೇಂದ್ರಕುಮಾರ್ (ಬಾನು), ಎಂ.ಕೆ. ಸಿದ್ಧರಾಜು, ಕುಮಾರಸ್ವಾಮಿ, ಪಿಡಿಓ ಪೂರ್ಣಿಮಾ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.



ನಂಜನಗೂಡು ತಾಲೂಕಿನ ವಾಟಾಳ್ ಗ್ರಾಮದಲ್ಲಿ ಏಷಿಯನ್ ಪೇಂಟ್ಸ್ ಹಾಗೂ ನ್ಯಾಷನಲ್ ಆಗ್ರೋ ಫೌಂಡೇಶನ್ ಸಂಸ್ಥೆಯಿಂದ ರೈತರಿಗೆ ಉಚಿತವಾಗಿ ಗಿಡ ವಿತರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಚೆನ್ನಾಜಮ್ಮ, ಸದಸ್ಯ ರಾಘು, ಸಿಬ್ಬಂದಿಗಳಾದ ಈಶ್ವರ್, ಸೋಮಸುಂದರ್, ಮಲ್ಕುಂಡಿ ಗಣೇಶ್ ಹಾಜರಿದ್ದರು.

ಡಿ.ದೇವರಾಜ ಅರಸು ಜನ್ಮದಿನಾಚರಣೆ: ಇಂದು ಪೂರ್ವಭಾವಿ ಸಭೆ

ಮೈಸೂರು, ಆ.11–ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ 107ನೇ ಜನ್ಮ ದಿನಾಚರಣೆಯನ್ನು ಆ.20ರಂದು ಆಚರಿಸುವ ಸಂಬಂಧ ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ಸಂಘ–ಸಂಸ್ಥೆಗಳ ಮುಖಂಡರೊಂದಿಗೆ ಆ.12ರಂದು ಮಧ್ಯಾಹ್ನ 12.30 ಗಂಟೆಗೆ ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸದರಿ ಪೂರ್ವಭಾವಿ ಸಭೆಗೆ ಎಲ್ಲಾ ಸಂಘ–ಸಂಸ್ಥೆಗಳ ಮುಖಂಡರು ಹಾಜರಾಗಲು ಹಿಂದುಳಿದ ವರ್ಗಗಳ ಇಲಾಖೆ ಜಿಲ್ಲಾಧಿಕಾರಿ ಹೆಚ್.ಎಸ್.ಬಿಂಧ್ಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಬೆಂಗಳೂರು ಸಿಟಿ–560050, ಅಶೋಕನಗರ, ಬನಶಂಕರಿ 1ನೇ ಹಂತ, 8ನೇ ಕ್ರಾಸ್, ಮನೆ.ನಂ. 1090 ರಲ್ಲಿ ವಾಸವಾಗಿಸುವ ಲೇಟ್ ಬಿ.ವಿ.ಸುಬ್ಬರಾವ್ ರವರ ಮಗ ಸುಮಾರು 62 ವರ್ಷ ವಯಸ್ಸಿನ ಬಿ.ಎಸ್. ಭಾಸ್ಕರ್, ರವರ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ಬೆಂಗಳೂರು ಉತ್ತರ–560 058, ನರಸಿಂಹಸ್ವಾಮಿ ಬಡಾವಣೆ, ಲಗ್ಗೇರೆ, ಶಕ್ತಿ ಮಾರಮ್ಮ ದೇವಸ್ಥಾನದ ಎದುರು, 33ನೇ ಮೇನ್ ರೋಡ್, 7ನೇ ಕ್ರಾಸ್, ಮನೆ ನಂ. 107 ರಲ್ಲಿ ವಾಸವಾಗಿರುವ ಶ್ರೀ ಎ.ಎನ್. ಪುಟ್ಟಯ್ಯರವರ ಮಗನಾದ ಸುಮಾರು 58 ವರ್ಷ ವಯಸ್ಸಿನ ಶ್ರೀ ಲಕ್ಷ್ಮಣ ರವರಿಂದ ಖರೀದಿಸಲು ಒಂದು ಕರಾರನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವ ವ್ಯಕ್ತಿಗಾಗಲಿ ಅಥವಾ ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ವಗೈರೆಗಳಿಗೆ ಯಾವುದೇ ವಿಧವಾದ ಹಕ್ಕು ಬಾಧ್ಯತೆಗಳು, ಋಣಗಳು ಇದ್ದಂತ ಪಕ್ಷದಲ್ಲಿ ಸದರಿಯವರು ಈ ಪತ್ರಿಕಾ ಪ್ರಕಟಣೆಯಾದ 7 ದಿನಗಳೊಳಗಾಗಿ ಕೆಳಕಂಡ ವಿಳಾಸದಲ್ಲಿ ಅಂತಹರವರು ತಮ್ಮ ಲಿಖಿತ ತಕರಾರುಗಳನ್ನು ದಾಖಲಾತಿಗಳ ಸಮೇತ ಖುದ್ದಾಗಿ ಬಂದು ಕಛೇರಿ ವೇಳೆಯಲ್ಲಿ ಕೊಡತಕ್ಕದ್ದು. ಮೇಲ್ಕಂಡ ಅವಧಿಯಲ್ಲಿ ಯಾವುದೇ ವಿಧವಾದ ತಕಾರು ಬರದಿದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಅವರ ಹೆಸರಿಗೆ ಷೆಡ್ಯೂಲ್ ಸ್ವತ್ತನ್ನು ನೋಂದಾಯಿಸಿ–ಕೊಳ್ಳತ್ತಾರೆ. ಅವಧಿ ಮುಗಿದ ಮೇಲೆ ಬರತಕ್ಕ ಯಾವುದೇ ವಿಧವಾದ ತಕರಾರನ್ನು ಪರಿಗಣಿಸಲಾಗುವುದಿಲ್ಲ.

ವಿಳಾಸ : ಹೆಚ್.ಸಿ.ಪ್ರಕಾಶ್, ವಕೀಲರು, ನಂ. 393, 7ನೇ ಮೇನ್, 1ನೇ ಹಂತ, ಕೈಗಾರಿಕಾ ಬಡಾವಣೆ, ಸೇಂಟ್ ಥಾಮಸ್ ಶಾಲೆ ಹತ್ತಿರ, ಮೈಸೂರು–570 008

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜು ಮೊಹಲ್ಲಾ, ವಿಜಯನಗರ 4ನೇ ಹಂತ, 2ನೇ ಫೇಸ್ ಬಡಾವಣೆಯಲ್ಲಿರುವ ಖಾಲಿ ನಿವೇಶನ ಸಂಖ್ಯೆ 6811 ಸ್ವತ್ತಿನ ಅಳತೆ ಪೂರ್ವಪಶ್ಚಿಮಕ್ಕೆ 9.00 ಮೀಟರುಗಳು, ಉತ್ತರ ದಕ್ಷಿಣಕ್ಕೆ 6.00 ಮೀಟರುಗಳ ಅಳತೆಯ ಒಟ್ಟು 54.00 ಚದರ ಮೀಟರುಗಳು ಇರುತ್ತದೆ. ಈ ಸ್ವತ್ತಿನ ಚೆಕ್ಕುಬಂಧಿ ಈ ಮುಂದಿನಂತಿದೆ ಎಂದರೆ:

ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ 6818
ಪಶ್ಚಿಮಕ್ಕೆ – 9.00 ಮೀಟರ್ ರಸ್ತೆ
ಉತ್ತರಕ್ಕೆ – ಸ್ವತ್ತಿನ ಸಂಖ್ಯೆ 6812
ದಕ್ಷಿಣಕ್ಕೆ – ಸ್ವತ್ತಿನ ಸಂಖ್ಯೆ 6810



